ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಗುರುವಾರ, ಫೆಬ್ರವರಿ 11, 2021

ಸಂಪುಟ : 47 ಸಂಚಿಕೆ : 283 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com

# ರೈತರ ಹೋರಾಟ ಪವಿತ್ರ

## ಹೊಸ ವ್ಯವಸ್ಥೆ ಕಡ್ಡಾಯವಲ್ಲ : ಲೋಕಸಭೆಯಲ್ಲಿ ಪ್ರಧಾನಿ ಮೋದಿ



ನವದೆಹಲಿ, ಫೆ. 10 – ನೂತನ ಕೃಷಿ ಕಾಯ್ದೆಗಳ ಕುರಿತು ತಮ್ಮ ನಿಲುವಿನ ದನಿ ಎತ್ತಿರುವ ರೈತರ ಬಗ್ಗೆ ಸರ್ಕಾರ ಹಾಗೂ ಸಂಸತ್ತಿಗೆ ಅಪಾರ ಗೌರವ ಇದೆ. ಅವರ ಪ್ರತಿಭಟನೆ ಪವಿತ್ರ ಎಂದು ಭಾವಿಸಿದ್ದೇನೆ ಎಂದಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ, ರೈತರು ಕೇಂದ್ರ ಸರ್ಕಾರದ ಜೊತೆ ಮಾತುಕತೆಗೆ ಬರುವಂತೆ ಮತ್ತೊಮ್ಮೆ ಆಹ್ವಾನ ನೀಡಿದ್ದಾರೆ.

ರಾಷ್ಟ್ರಪತಿ ಭಾಷಣಕ್ಕೆ ಅಭಿನಂದನೆ ಸಲ್ಲಿಸುವ ನಿಲುವಳಿ ಕುರಿತ ಚರ್ಚೆಯಲ್ಲಿ ಮಾತನಾಡುತ್ತಿದ್ದ ಅವರು, ಮೂರು ಕೃಷಿ ಕಾಯ್ದೆಗಳನ್ನು ಬಲವಾಗಿ ಸಮರ್ಥಿಸಿಕೊಂಡಿದ್ದಾರೆ. ನೂತನ ವ್ಯವಸ್ಥೆ ಕಡ್ಡಾಯವಲ್ಲ, ಇದು ರೈತರಿಗೆ ನೀಡುವ ಆಯ್ಕೆ ಮಾತ್ರವಾಗಿದೆ. ಹಳೆಯ ವ್ಯವಸ್ಥೆಯೂ ಲಭ್ಯವಿರಲಿದೆ ಎಂದು ತಿಳಿಸಿದ್ದಾರೆ.

90 ನಿಮಿಷಗಳ ಕಾಲ ಮಾತನಾಡಿದ ಪ್ರಧಾನಿ, ತಮ್ಮ ಭಾಷಣದ ಬಹುತೇಕ ಸಮಯವನ್ನು ಕೃಷಿ ಕಾಯ್ದೆಗಳಿಗೆ ಮೀಸಲಿಟ್ಟಿದ್ದರು.

ಕಾಯ್ದೆಯಲ್ಲಿ ಏನಾದರೂ ಲೋಪಗಳಿದ್ದರೆ ಅದರ ತಿದ್ದುಪಡಿಗೆ ಸರ್ಕಾರ ಮುಕ್ತವಾಗಿದೆ. ರೈತ ಒಕ್ಕೂಟಗಳ ಕಾಯ್ದೆಯ ಪ್ರತಿಯೊಂದು ಅಂಶವನ್ನು ಎಳೆ ಎಳೆಯಾಗಿ ಚರ್ಚಿಸಬಹುದಾಗಿದೆ ಹಾಗೂ ತಮ್ಮ ಆತಂಕಗಳನ್ನು ನಿವಾರಿಸಿಕೊಳ್ಳಬಹುದಾಗಿದೆ ಎಂದು ಮೋದಿ ಹೇಳಿದ್ದಾರೆ.

ಸೋಮವಾರ ರಾಜ್ಯಸಭೆಯಲ್ಲಿ ಮಾತನಾಡಿದ ಪ್ರಧಾನಿ ಮೋದಿ 'ಆಂದೋಲನ ಜೀವಿ' ಎಂಬ ಪದ ಬಳಸಿದ್ದರು. ಈ ಪದಕ್ಕೆ ಪ್ರತಿಭಟನಾ ನಿರತ ರೈತ ಒಕ್ಕೂಟಗಳು ಆಕ್ಷೇಪಿಸಿದ್ದವು.

ಆ ಬಗ್ಗೆಯೂ ಮಾತನಾಡಿದ ಪ್ರಧಾನ ಮಂತ್ರಿ 'ಆಂದೋಲನಕಾರಿ' (ಪ್ರತಿಭಟನಾಕಾರರು) ಹಾಗೂ ಆಂದೋಲನ ಜೀವಿಗಳ ನಡುವೆ ವ್ಯತ್ಯಾಸವಿದೆ. ರೈತರ ಆಂದೋಲನ ಪವಿತ್ರವಾಗಿದೆ ಎಂದು ನಾವು ಭಾವಿಸಿದ್ದೇನೆ. ಆದರೆ, ಆಂದೋಲನ ಜೀವಿಗಳು ಪವಿತ್ರ ಪ್ರತಿಭಟನೆಯನ್ನು ಹೈಜಾಕ್ ಮಾಡಿದ್ದಾರೆ. ಉಗ್ರವಾದದ ರೀತಿಯ ಗಂಭೀರ ಅಪರಾಧಗಳಲ್ಲಿ ಶಿಕ್ಷೆಗೆ ಗುರಿಯಾಗಿರುವವರ ಫೋಟೋಗಳನ್ನು ಪ್ರತಿಭಟನೆಯ ಸಂದರ್ಭದಲ್ಲಿ (2ನೇ ಪುಟಕ್ಕೆ)

### ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಮೂರು ಕೃಷಿ ಕಾಯ್ದೆಗಳು ರದ್ದು



ಲಖ್ನೌ, ಫೆ. 10 – ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದರೆ ಕೇಂದ್ರ ಸರ್ಕಾರ ಪ್ರಸಕ್ತ ಜಾರಿಗೆ ತಂದಿರುವ ಮೂರು ಕೃಷಿ ಕಾಯ್ದೆಗಳನ್ನು ರದ್ದುಗೊಳಿಸಲಾಗುವುದು ಎಂದು ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ಹೇಳಿದ್ದಾರೆ.

ಉತ್ತರ ಪ್ರದೇಶದ ಸಹರಾನ್‌ಪುರದಲ್ಲಿ ಪಕ್ಷ ಆಯೋಜಿಸಿದ್ದ ಕಿಸಾನ್ ಪಂಚಾಯತ್‌ನಲ್ಲಿ ಪಾಲ್ಗೊಂಡು ಮಾತನಾಡುತ್ತಿದ್ದ ಅವರು, ಪ್ರಧಾನ ಮಂತ್ರಿ ನರೇಂದ್ರ ಮೋದಿ ಹಾಗೂ ಬಿಜೆಪಿ ನಾಯಕರು ಪ್ರತಿಭಟನಾ ನಿರತ ರೈತರನ್ನು ಅವಮಾನಿಸುತ್ತಿದ್ದಾರೆ ಎಂದು ಹೇಳಿದ್ದಾರೆ.

ಮೂರು ಕೃಷಿ ಕಾಯ್ದೆಗಳು ಕರಾಳವಾಗಿವೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಈ ಕಾಯ್ದೆಗಳನ್ನು ರದ್ದುಗೊಳಿಸಲಿದೆ. ಈ ಕಾಯ್ದೆಗಳು ರದ್ದಾಗುವವರೆಗೂ ಪಕ್ಷ ಹೋರಾಟ ನಡೆಸುವುದನ್ನು ಮುಂದುವರೆಸಲಿದೆ ಎಂದವರು ತಿಳಿಸಿದ್ದಾರೆ.

### ರೈತರ 'ಮನ್ ಕಿ ಬಾತ್' ಆಲಿಸುತ್ತಿಲ್ಲ

**ಕಾರ್ಪೊರೇಟ್‌ಗಳಿಗೆ ಗರಿಷ್ಠ ಬೆಲೆ ಕೊಟ್ಟರೂ, ರೈತರಿಗೆ ಕನಿಷ್ಠ ಬೆಲೆ ಇಲ್ಲ - ಕಾಂಗ್ರೆಸ್ ಆರೋಪ**

ನವದೆಹಲಿ, ಫೆ. 19 – ದೆಹಲಿ ಗಡಿಗಳಲ್ಲಿ ಪ್ರತಿಭಟನೆ ನಡೆಸುತ್ತಿರುವ ರೈತರ 'ಮನ್ ಕಿ ಬಾತ್' ಅನ್ನು ಕೇಂದ್ರ ಸರ್ಕಾರ ಆಲಿಸುತ್ತಿಲ್ಲ ಎಂದು ರಾಜ್ಯಸಭೆಯಲ್ಲಿ ತರಾಟೆಗೆ ತೆಗೆದುಕೊಂಡಿರುವ ಕಾಂಗ್ರೆಸ್, ದೊಡ್ಡ ಕಾರ್ಪೊರೇಟ್‌ಗಳು ಗರಿಷ್ಠ ಬೆಲೆಯನ್ನು ಕೇಳುತ್ತಿವೆ. ರೈತರು ಕನಿಷ್ಠ ಬೆಲೆಯನ್ನು ಮಾತ್ರ ಕೇಳುತ್ತಿದ್ದಾರೆ ಎಂದು ಹೇಳಿದೆ.

ಬಜೆಟ್ ಕುರಿತ ಚರ್ಚೆಯಲ್ಲಿ ಮಾತನಾಡಿದ ಕಾಂಗ್ರೆಸ್ ನಾಯಕ ಕಪಿಲ್ ಸಿಬಾಲ್, ಮೂರು ಕೃಷಿ ಸುಧಾರಣಾ ಕಾಯ್ದೆಗಳ ಮೂಲಕ ಸರ್ಕಾರ ನಡೆಸುತ್ತಿರುವ ಪ್ರಯೋಗವನ್ನು ಈಗಾಗಲೇ ಅಮೆರಿಕ ಹಾಗೂ ಯುರೋಪ್‌ಗಳಲ್ಲಿ ನಡೆಸಲಾಗಿದೆ. ಇದರಿಂದಾಗಿ ಕೃಷಿಯ ಕಾರ್ಪೊರೇಟೀಕರಣ ವಾಗಿದೆ ಎಂದರು.

ಖಾಸಗಿ ವ್ಯಾಪಾರಿಗಳ ಮೂಲಕ ರೈತರಿಗೆ ಹೆಚ್ಚಿನ ಕನಿಷ್ಠ ಬೆಂಬಲ ಬೆಲೆ ಸಿಗಲಿದೆ ಎಂದು ಸರ್ಕಾರ ಹೇಳುತ್ತಿದೆ. (2ನೇ ಪುಟಕ್ಕೆ)

### ಕೃಷಿ ಕಾಯ್ದೆಗಳ ವಿರುದ್ಧ 18ರಂದು ರೈಲು ತಡೆ


ನವದೆಹಲಿ, ಫೆ. 10 – ಬರುವ ಫೆಬ್ರವರಿ 18ರಂದು ದೇಶಾದ್ಯಂತ ನಾಲ್ಕು ಗಂಟೆ ರಸ್ತೆ ತಡೆ ನಡೆಸುವುದಾಗಿ ಹಾಗೂ ಫೆ.14ರಂದು ಪುಲ್ವಾಮಾ ದಾಳಿಯಲ್ಲಿ ಹತರಾದ ಸೈನಿಕರಿಗೆ ಮೇಣದ ಬತ್ತಿ ಬೆಳಕಿನ ಮೂಲಕ ನಮನ ಸಲ್ಲಿಸುವುದಾಗಿ ಪ್ರತಿಭಟನಾ ನಿರತ ರೈತ ಸಂಘಟನೆಗಳು ತಿಳಿಸಿವೆ.

ಈ ಬಗ್ಗೆ ಹೇಳಿಕೆ ನೀಡಿರುವ ರೈತ ಸಂಘಟನೆಗಳ ಒಕ್ಕೂಟವಾದ ಸಂಯುಕ್ತ ಕಿಸಾನ್ ಮೋರ್ಚಾ, ಫೆಬ್ರವರಿ 12ರಿಂದ ರಾಜಸ್ತಾನದಲ್ಲಿ ಟೋಲ್ ಸಂಗ್ರಹಕ್ಕೆ ಅವಕಾಶ ಕೊಡುವುದಿಲ್ಲ ಎಂದು ತಿಳಿಸಿದೆ.

ಬುಧವಾರ ಸಭೆ ನಡೆಸಿದ ರೈತ ಸಂಘಟನೆಗಳು ಪ್ರತಿಭಟನೆ ತೀವ್ರಗೊಳಿಸಲು ನಿರ್ಧರಿಸಿವೆ. ಫೆಬ್ರವರಿ 18ರ ಮಧ್ಯಾಹ್ನ 12ರಿಂದ ಸಂಜೆ 4ರವರೆಗೆ ರೈಲು ತಡೆ ನಡೆಸಲಾಗುವುದು ಎಂದು ಸಂಘಟನೆಯ ಹೇಳಿಕೆಯಲ್ಲಿ (4ನೇ ಪುಟಕ್ಕೆ)

### 21ರಂದು ಪಂಚಮಸಾಲಿ ಮೀಸಲಾತಿ ಸಮಾವೇಶ

## ಮೀಸಲಾತಿ ಕಲ್ಪಿಸದಿದ್ದರೆ ಸಮಾವೇಶ ನಂತರವೂ ಧರಣಿ



ತುಮಕೂರು, ಫೆ. 10 – ಬರುವ ಫೆಬ್ರವರಿ 21ರಂದು ಬೆಂಗಳೂರಿನ ನೈಸ್ ರಸ್ತೆಯ ಅಂತರರಾಷ್ಟ್ರೀಯ ವಸ್ತು ಪ್ರದರ್ಶನ ಮೈದಾನದಲ್ಲಿ ಪಂಚಮಸಾಲಿ ಸಮಾಜದ ಬೃಹತ್ ಸಮಾವೇಶ ನಡೆಯಲಿದೆ ಎಂದು ಕೂಡಲಸಂಗಮದ ಲಿಂಗಾಯತ ಪಂಚಮಸಾಲಿ ಜಗದ್ಗುರು ಶ್ರೀ ಬಸವ ಜಯಮೃತ್ಯುಂಜಯ ಸ್ವಾಮೀಜಿ ತಿಳಿಸಿದ್ದಾರೆ.

ಸಮಾಜದ ಶಾಸಕರು, ಸಚಿವರು ಹಾಗೂ ಮುಖಂಡರ ಸಭೆಯ ನಂತರ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿರುವ ಶ್ರೀಗಳು, ಜ.14ರಂದು ಪಂಚ ಲಕ್ಷ ಪಾದಯಾತ್ರೆ ಕೂಡಲಸಂಗಮದಿಂದ ಹೊರಟಿತ್ತು. ಇದೇ ಮೊದಲ ಬಾರಿಗೆ ನಮ್ಮ ಸಮಾಜದ ಎಲ್ಲ ಶಾಸಕರು ಒಗ್ಗಟ್ಟು ತೋರಿ ಸಭೆ ನಡೆಸಿದ್ದಾರೆ. ಪಾದಯಾತ್ರೆಯಲ್ಲಿ ಸಮಾಜಕ್ಕೆ ಶಕ್ತಿ ಪ್ರದರ್ಶಿಸಲಾಗಿದೆ. ಬೆಂಗಳೂರಿನಲ್ಲಿ ನಡೆಯಲಿರುವ ಸಮಾವೇಶದಲ್ಲಿ 10 ಲಕ್ಷ ಜನರು ಭಾಗವಹಿಸಲಿದ್ದಾರೆ ಎಂದರು.

ಸಚಿವರಾದ ಮುರುಗೇಶ್ ನಿರಾಣಿ ಹಾಗೂ ಸಿ.ಸಿ. ಪಾಟೀಲ್ ಅವರು ಯಡಿಯೂರಪ್ಪ ಸರ್ಕಾರ ಮೀಸಲಾತಿ ಕೊಡಲಿದೆ ಎಂದಿದ್ದಾರೆ. ನಮ್ಮ ಸಮಾವೇಶ ನೋಡಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಅಂದು ಸಂಜೆಯೊಳಗೆ ಮೀಸಲಾತಿ ಘೋಷಿಸಲಿದ್ದಾರೆ ಎಂದು ಸ್ವಾಮೀಜಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಮೀಸಲಾತಿ ಕೊಡದೇ ಇದ್ದರೆ ಸಮಾವೇಶದ ನಂತರವೂ ಧರಣಿ ಸತ್ಯಾಗ್ರಹ ನಡೆಸುತ್ತೇವೆ ಎಂದವರು ಹೇಳಿದ್ದಾರೆ.

ಪಂಚಮಸಾಲಿ ಸಮಾಜದ ರಾಷ್ಟ್ರೀಯ ಅಧ್ಯಕ್ಷ (4ನೇ ಪುಟಕ್ಕೆ)

## ಜಗಳೂರಿನಲ್ಲಿ ರಾಗಿ ಖರೀದಿ ಕೇಂದ್ರ ಪ್ರಾರಂಭ

ಜಗಳೂರು, ಫೆ.10- ರೈತರ ಅನುಕೂಲಕ್ಕಾಗಿ ಸರ್ಕಾರ ರಾಗಿ ಖರೀದಿ ಕೇಂದ್ರ ತೆರೆದಿದ್ದು, ತಾಲ್ಲೂಕಿನ ರೈತರು ಸದುಪಯೋಗ ಪಡೆದುಕೊಳ್ಳಬೇಕು ಎಂದು ಎಪಿಎಂಸಿ ಅಧ್ಯಕ್ಷ ರೇಣುಕಾನಂದ ಹೇಳಿದರು.

ಪಟ್ಟಣದ ಎಪಿಎಂಸಿ ಕಚೇರಿ ಆವರಣದಲ್ಲಿ ರಾಗಿ ಖರೀದಿ ಕೇಂದ್ರದ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ತಾಲ್ಲೂಕಿನಲ್ಲಿ ಮೆಕ್ಕೆ ಜೋಳ, ಕಡಲೆ, ಶೇಂಗಾ ಸೇರಿದಂತೆ ಬೆಳೆದ ಹಲವು ಬೆಳೆಗಳಿಗೆ ಮಾರುಕಟ್ಟೆಗಳಲ್ಲಿ ಸೂಕ್ತ ಬೆಂಬಲ ಬೆಲೆ ಸಿಗದೆ ಮಳೆಯಾಶ್ರಿತ ರೈತರು ಆರ್ಥಿಕ ಸಂಕಷ್ಟದಿಂದ ನಲುಗುತ್ತಿದ್ದು, ಸರ್ಕಾರ ಖರೀದಿ ಕೇಂದ್ರ ತೆರೆದು ನೆರವಾಗಿದೆ ಎಂದರು.

ರಾಗಿ ಖರೀದಿ ಕೇಂದ್ರದಲ್ಲಿ ಕ್ವಿಂಟಾಲ್‌ಗೆ 3295 (4ನೇ ಪುಟಕ್ಕೆ)

## ಪೌರ ಕಾರ್ಮಿಕರ ಖಾಯಂಗೆ ಆಗ್ರಹ




**ಗುತ್ತಿಗೆ ಪದ್ಧತಿ ನಿಲ್ಲಿಸುವಂತೆ ಪೌರ ಕಾರ್ಮಿಕರ ರಾಜ್ಯ ಕಾರ್ಯಕಾರಿಣಿ ಸಭೆಯಲ್ಲಿ ಸಂಘದ ರಾಜ್ಯಾಧ್ಯಕ್ಷ ನಾರಾಯಣ ಮೈಸೂರು ಆಗ್ರಹ**

ದಾವಣಗೆರೆ, ಫೆ. 12- ಸರ್ಕಾರ ಈ ಕೂಡಲೇ ರಾಜ್ಯದಲ್ಲಿರುವ 40 ಸಾವಿರ ಪೌರ ಕಾರ್ಮಿಕರನ್ನು ಖಾಯಂಗೊಳಿಸಬೇಕು. ಇಲ್ಲದಿದ್ದರೆ ರಾಜ್ಯಾದ್ಯಂತ ಪೌರ ಕಾರ್ಮಿಕರು ಸ್ವಚ್ಛತಾ ಕಾರ್ಯ ಸ್ಥಗಿತಗೊಳಿಸುವ ಮೂಲಕ ಪ್ರತಿಭಟನೆ ನಡೆಸಲಾಗುವುದು ಎಂದು ಪೌರ ಕಾರ್ಮಿಕರ ಸಂಘದ ರಾಜ್ಯಾಧ್ಯಕ್ಷ ನಾರಾಯಣ ಮೈಸೂರು ಹೇಳಿದರು.

ನಗರದ ಅಕ್ಕಮಹಾದೇವಿ ಕಲ್ಯಾಣ ಮಂಟಪದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಕರ್ನಾಟಕ ರಾಜ್ಯದ ಮಹಾನಗರ ಪಾಲಿಕೆ, ನಗರಸಭೆ, ಪುರಸಭೆ ಪೌರ ಕಾರ್ಮಿಕರ ಮಹಾಸಂಘ, ದಾವಣಗೆರೆ ಮಹಾಗನರ ಪಾಲಿಕೆ ಪೌರ ಕಾರ್ಮಿಕರ ಮತ್ತು ಡಿ.ಗ್ರೂಪ್ ನೌಕರರ ಸಂಘ ಹಾಗೂ ಮಹಾನಗರ ಪಾಲಿಕೆ ನೇರ ಪಾವತಿ ಪೌರ ಕಾರ್ಮಿಕರ ಸಂಘದ ಆಶ್ರಯದಲ್ಲಿ ಪೌರ ಕಾರ್ಮಿಕರ ರಾಜ್ಯ ಕಾರ್ಯಕಾರಿಣಿ ಸಭೆ ಉದ್ಘಾಟಿಸಿ ಅವರು ಮಾತನಾಡಿದರು.

ಪೌರ ಕಾರ್ಮಿಕರ ಪಾಲಿಗೆ ಗುತ್ತಿಗೆ ಪದ್ಧತಿ ಜೀತ ಪದ್ಧತಿ ಇದ್ದಂತೆ. ಪಿಎಫ್, ಇಎಸ್ಐ ಸೌಲಭ್ಯಗಳಿಲ್ಲದೆ ಗುತ್ತಿಗೆದಾರರಿಂದ ಪೌರ ಕಾರ್ಮಿಕರು ನಿರಂತರ ಶೋಷಣೆಗೊಳಪಡುತ್ತಿದ್ದರು. ಆದ್ದರಿಂದಲೇ ಈ ಹಿಂದೆ ಗುತ್ತಿಗೆ ಆಧಾರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಪೌರ ಕಾರ್ಮಿಕರನ್ನು ಖಾಯಂ ಗೊಳಿಸಲು ಹೋರಾಟ ನಡೆಸಲಾಗಿತ್ತು ಎಂದರು.

ನಮ್ಮ ಹೋರಾಟಕ್ಕೆ ಸ್ಪಂದಿಸಿದ ಅಂದಿನ ಮುಖ್ಯಮಂತ್ರಿ ಸಿದ್ಧರಾಮಯ್ಯನವರು ಗುತ್ತಿಗೆ ಪದ್ಧತಿ ರದ್ದು ಮಾಡಿದ್ದರು. ಇದು ಪೌರ ಕಾರ್ಮಿಕರ ಸಂಘಕ್ಕೆ ಸಿಕ್ಕ ಯಶಸ್ಸಾಗಿತ್ತು. ಆದರೆ ಇಂದಿಗೂ ಕೆಲ ನಗರಸಭೆ, ಪುರಸಭೆಗಳಲ್ಲಿ ಗುತ್ತಿಗೆದಾರರೇ ಪೌರ ಕಾರ್ಮಿಕರಿಗೆ ವೇತನ ನೀಡುತ್ತಿದ್ದಾರೆ. ಅಧಿಕಾರಿಗಳು, ಜನಪ್ರತಿನಿಧಿಗಳು ಇದರಲ್ಲಿ ಶಾಮೀಲಾಗಿದ್ದಾರೆ. ಕೂಡಲೇ ಗುತ್ತಿಗೆ ಪದ್ಧತಿ ನಿಲ್ಲಿಸದಿದ್ದರೆ ಪ್ರತಿಭಟನೆ ನಡೆಸಲಾಗುತ್ತದೆ (2ನೇ ಪುಟಕ್ಕೆ)

## ಸರಳವಾಗಿ ಮರಳು ಸಿಗಲು ಶೀಘ್ರದಲ್ಲೇ ಹೊಸ ನೀತಿ



ಬೆಂಗಳೂರು, ಫೆ. 10 - ಜನಸಾಮಾನ್ಯರಿಗೆ ತೊಂದರೆಯಾಗದ ರೀತಿಯಲ್ಲಿ ಪ್ರತಿಯೊಬ್ಬರಿಗೂ ಸುಲಭವಾಗಿ ಹಾಗೂ ಸರಳವಾಗಿ ಮರಳು ಸಿಗುವಂತೆ ಮಾಡುವ ಉದ್ದೇಶದಿಂದ ಶೀಘ್ರದಲ್ಲೇ ಹೊಸ ಮರಳು ನೀತಿ ಜಾರಿ ಮಾಡಲಾಗುವುದೆಂದು ಗಣಿ ಮತ್ತು ಭೂ ವಿಜ್ಞಾನ ಸಚಿವ ಮುರುಗೇಶ್ ಆರ್. ನಿರಾಣಿ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹೊಸ ಮರಳು ನೀತಿ ಜಾರಿ ಮಾಡುವ ಸಂಬಂಧ 2021 ರ ನೂತನ ಮರಳು ಕರಡು ನೀತಿಯನ್ನು ಸಿದ್ದಪಡಿಸಲಾಗಿದೆ. ಅಧಿಕಾರಿಗಳ ಜೊತೆ ಮತ್ತೊಮ್ಮೆ ಚರ್ಚೆ ನಡೆಸಿ ಪ್ರಕಟ ಮಾಡಲಾಗುವುದೆಂದು ಹೇಳಿದರು.

ಉತ್ತರ ಕರ್ನಾಟಕ, ಕರಾವಳಿ ಕರ್ನಾಟಕ, ಮಧ್ಯ ಕರ್ನಾಟಕ ಸೇರಿದಂತೆ ಒಂದೊಂದು ಭಾಗಕ್ಕೆ ಪ್ರತ್ಯೇಕವಾದ ಮರಳು ನೀತಿ ಇದೆ. ಈಗಾಗಲೇ ಒಂದು ಕರಡನ್ನು ತಂದಿದ್ದೇವೆ. ಇದನ್ನೆಲ್ಲವನ್ನೂ ಬಗೆಹರಿಸುವ ಬಗ್ಗೆ ಈ ನೀತಿ ತರುತ್ತಿದ್ದೇವೆ ಎಂದರು. ಎಲ್ಲರಿಗೂ ಮರಳು ಸುಲಭವಾಗಿ ಸಿಗುವಂತಾಗಬೇಕು. (4ನೇ ಪುಟಕ್ಕೆ)

## ವಿವಿಧ ಮೀಸಲಾತಿ ಬೇಡಿಕೆ : ಕಾನೂನು ಪರಿಣಿತರ ಜೊತೆ ಚರ್ಚೆ



ಬೆಂಗಳೂರು, ಫೆ. 10 - 2 ಎ ಹಾಗೂ ಎಸ್‌ಟಿ ಮೀಸಲಾತಿ ಕುರಿತಾಗಿ ಪಂಚಮಸಾಲಿ ಮತ್ತು ಕುರುಬ ಸಮುದಾಯದ ಪ್ರತಿಭಟನೆಯ ಹಿನ್ನೆಲೆಯಲ್ಲಿ ಕಾನೂನು ಪರಿಣಿತರ ಜೊತೆ ಮೀಸಲಾತಿ ವಿಚಾರವಾಗಿ ಚರ್ಚೆ ನಡೆಸುವುದಾಗಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಭರವಸೆ ನೀಡಿದ್ದಾರೆ.

ಬೆಂಗಳೂರಿನಲ್ಲಿ ಬುಧವಾರ ಮಾತನಾಡಿರುವ ಅವರು ಸಂವಿಧಾನ, ಕಾನೂನು ಚೌಕಟ್ಟಿನಲ್ಲಿ ಏನೇನು ಮಾಡಲು ಸಾಧ್ಯನೋ ಅದನ್ನು ಪ್ರಾಮಾಣಿಕವಾಗಿ ಮಾಡುತ್ತೇನೆ ಎಂದು ತಿಳಿಸಿದ್ದಾರೆ. ಪಂಚಮಸಾಲಿ ಸಮುದಾಯವನ್ನು 2 ಎ ಪ್ರವರ್ಗಕ್ಕೆ ಸೇರ್ಪಡೆ ಮಾಡಬೇಕು ಎಂದು ಪಂಚಮಸಾಲಿ ಸಮುದಾಯದ ಮಠಾಧೀಶರ ನೇತೃತ್ವದಲ್ಲಿ ಪಾದಯಾತ್ರೆ ನಡೆಯುತ್ತಿದೆ. ಮತ್ತೊಂದು ಕಡೆಯಲ್ಲಿ ಕುರುಬ ಸಮುದಾಯವನ್ನು ಎಸ್‌ಟಿ ಗೆ ಸೇರ್ಪಡೆ ಮಾಡಬೇಕು (3ನೇ ಪುಟಕ್ಕೆ)

## ಶುಲ್ಕ ಕಡಿತ ನೀತಿ ವಾಪಸ್ ಪಡೆಯದಿದ್ದರೆ ಹೋರಾಟ

### ಸರ್ಕಾರಕ್ಕೆ ಖಾಸಗಿ ಶಿಕ್ಷಣ ಸಂಸ್ಥೆಗಳ ಎಚ್ಚರಿಕೆ

ಬೆಂಗಳೂರು, ಫೆ. 10 - ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಶುಲ್ಕ ಕಡಿತ ಮಾಡಿರುವ ನೀತಿಯನ್ನು ಪುನರ್ ಪರಿಶೀಲಿಸುವಂತೆ ಖಾಸಗಿ ಶಿಕ್ಷಣ ಸಂಸ್ಥೆಗಳು ಸರ್ಕಾರವನ್ನು ಆಗ್ರಹಿಸಿವೆ.

ತಕ್ಷಣ ನಿರ್ಧಾರ ಕೈಗೊಳ್ಳದಿದ್ದರೆ, ಇದೇ 23 ರಂದು ತಮ್ಮ ಬೇಡಿಕೆಗಳಿಗೆ ಒತ್ತಾಯಿಸಿ ಬೃಹತ್ ರ್‍ಯಾಲಿ ನಡೆಸುವುದಾಗಿ ಎಚ್ಚರಿಕೆ ನೀಡಿದೆ.

ಖಾಸಗಿ ಶಿಕ್ಷಣ ಸಂಸ್ಥೆಗಳ ಬೆದರಿಕೆಗೆ ಮಣಿಯುವುದಿಲ್ಲ ಎಂದಿರುವ ಪ್ರಾಥಮಿಕ ಶಿಕ್ಷಣ ಸಚಿವ ಸುರೇಶ್‌ಕುಮಾರ್, ಶೇ. 30 ರಷ್ಟು ಕಡಿತ ಮಾಡಿರುವ ಶುಲ್ಕವನ್ನು ಹಿಂದಕ್ಕೆ ಪಡೆಯುವ ಪ್ರಶ್ನೆಯೇ ಇಲ್ಲ ಎಂದಿದ್ದಾರೆ.

ಬಹುತೇಕ ಸಂಸ್ಥೆಗಳು ಸರ್ಕಾರದ ನಿರ್ಧಾರವನ್ನು ಸ್ವಾಗತಿಸಿವೆ. ಕೆಲವು ಸಂಸ್ಥೆಗಳಷ್ಟೇ ಹೋರಾಟದ ನಿಲುವು ಹಮ್ಮಿಕೊಂಡಿವೆ. ಚರ್ಚೆ ಮಾಡುತ್ತೇನೆ. ಆದರೆ ಮಣಿಯುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ರಾಜ್ಯ ಸರ್ಕಾರ ಶೇ. 30 ರಷ್ಟು ಶುಲ್ಕ ಕಡಿತ ಎಂದಿದ್ದರೂ, ಆದೇಶದಲ್ಲಿ ಶೇ. 55 ರಿಂದ 65 ರಷ್ಟ ಕಡಿತವಾಗುತ್ತಿದೆ ಎಂದು ಶಿಕ್ಷಣ ಸಂಸ್ಥೆಗಳು ದೂರಿವೆ. ನಮ್ಮ ಶಿಕ್ಷಣ ಸಂಸ್ಥೆಗಳಿಗೆ ಮತ್ತು ಶಿಕ್ಷಕರು ಹಾಗೂ ಶಿಕ್ಷಕರೇತರ (4ನೇ ಪುಟಕ್ಕೆ)

**ಶಿವಗಣಾರಾಧನೆ ಹಾಗೂ ಸರ್ವಶರಣ ಸಮ್ಮೇಳನ**



ಆತ್ಮೀಯರೇ,

**ಶರಣ ವೈ.ಜಿ. ರುದ್ರಪ್ಪ (YGR)**
ನಿವೃತ್ತ ಮುಖ್ಯೋಪಾಧ್ಯಾಯರು, ಇವರ
'ಕೈಲಾಸ ಶಿವಗಣಾರಾಧನೆ ಹಾಗೂ ಸರ್ವಶರಣ ಸಮ್ಮೇಳನ'ವನ್ನು
ದಿನಾಂಕ : 12.02.2021ನೇ ಶುಕ್ರವಾರ ಬೆಳಿಗ್ಗೆ 11.00 ಗಂಟೆಗೆ
ಚನ್ನಗಿರಿ ತಾಲ್ಲೂಕು ಯರಗಟ್ಟಿಹಳ್ಳಿ ಗ್ರಾಮದ ಲಿಂಗೈಕ್ಯರ ಸ್ವಗೃಹದಲ್ಲಿ
ಶ್ರೀ ಶ್ರೀ ಡಾ।। ಪಂಡಿತಾರಾಧ್ಯ ಸ್ವಾಮಿಗಳ
ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿಸಲಾವುದು. ತಾವುಗಳು ಆಗಮಿಸಿ, ಲಿಂಗೈಕ್ಯರನ್ನು ಸ್ಮರಿಸಿ, ಶ್ರೀಗಳವರ ದರ್ಶನಾಶೀರ್ವಾದ ಪಡೆಯಬೇಕಾಗಿ ವಿನಂತಿ.

ಇಂತಿ : ಶರಣ ವೈ.ಜಿ. ಓಂಕಾರಪ್ಪ ಮತ್ತು ಸಹೋದರರು
ಲಿಂಗೈಕ್ಯರ ಪತ್ನಿ : ಶರಣೆ ವಿಮಲಮ್ಮ ಮತ್ತು ಮಕ್ಕಳು
ಗೌಡ್ರು ವಂಶಸ್ಥರು ಮತ್ತು ಗ್ರಾಮಸ್ಥರು ಹಾಗೂ ಬಂಧು-ಮಿತ್ರರು

ವಿ.ಸೂ. ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

## ಕೋವಿಶೀಲ್ಡ್ ಲಸಿಕೆ ಪಡೆದ ಐಜಿಪಿ ಎಸ್.ರವಿ




**ಪೊಲೀಸ್ ಇಲಾಖೆಯ ಕಟ್ಟ ಕಡೆಯ ಸಿಬ್ಬಂದಿಯವರೆಗೆ ಎಲ್ಲರೂ ಲಸಿಕೆ ಪಡೆಯಲು ಐಜಿಪಿ ಕಿವಿಮಾತು**

ದಾವಣಗೆರೆ ಫೆ. 10 - ಪೂರ್ವ ವಲಯ ಐ.ಜಿ.ಪಿ. ಎಸ್. ರವಿ ಅವರು ಬುಧವಾರ ನಗರದ ಸಿ.ಜಿ. ಜಿಲ್ಲಾ ಆಸ್ಪತ್ರೆಯಲ್ಲಿ ಕೊರೊನಾಗೆ ನೀಡಲಾಗುವ ಕೋವಿಶೀಲ್ಡ್ ಲಸಿಕೆಯನ್ನು ಪಡೆದುಕೊಂಡಿದ್ದಾರೆ.

ಜಿಲ್ಲೆಯಲ್ಲಿ ಈಗ ಎರಡನೇ ಹಂತದಲ್ಲಿ ಪೊಲೀಸರು ಹಾಗೂ ಅಧಿಕಾರಿಗಳನ್ನು ಒಳಗೊಂಡ ಮುಂಚೂಣಿ ಕಾರ್ಯಕರ್ತರಿಗೆ ಲಸಿಕೆ ನೀಡಲಾಗುತ್ತಿದೆ. ಅದರ ಅನ್ವಯ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ ಸೇರಿದಂತೆ ಹಲವರು ಲಸಿಕೆ ಪಡೆದಿದ್ದಾರೆ.

ನಿಯಮಗಳ ಅನ್ವಯ ಆನ್‌ಲೈನ್ ಮೂಲಕ ಕೊವಿನ್ ವೆಬ್ ತಾಣದಲ್ಲಿ ಹೆಸರು ನೋಂದಾಯಿಸಿದ ನಂತರ ಐಜಿಪಿ ಲಸಿಕೆ ಪಡೆದುಕೊಂಡರು. ನಂತರ ಅರ್ಧ ಗಂಟೆ ಕಾಲ ನಿಗಾದಲ್ಲಿದ್ದರು. ಜಿಲ್ಲಾ ಪೊಲೀಸರು ಲಸಿಕೆ ಪರ ಅಭಿಯಾನ ನಡೆಸಲು ಅಳವಡಿಸಿರುವ ಸೆಲ್ಫೀ ಫ್ರೇಮ್‌ನಲ್ಲಿ ಎಸ್‌ಪಿ ಹನುಮಂತರಾಯ ಜೊತೆಗೆ ಅವರು ಚಿತ್ರವನ್ನೂ ತೆಗೆಸಿಕೊಂಡರು. ನಂತರ (4ನೇ ಪುಟಕ್ಕೆ)

## ದಾವಣಗೆರೆ ವಿವಿ ಆಡಳಿತ ವಿಭಾಗದ ಕುಲಸಚಿವರಾಗಿ ಗಾಯತ್ರಿ ದೇವರಾಜ್



ದಾವಣಗೆರೆ ವಿಶ್ವವಿದ್ಯಾನಿಲಯದ ಆಡಳಿತ ವಿಭಾಗದ ಕುಲಸಚಿವರನ್ನಾಗಿ ಪ್ರೊ. ಡಾ. ಗಾಯತ್ರಿ ದೇವರಾಜ್ ಅವರನ್ನು ನೇಮಕ ಮಾಡಿ ಕರ್ನಾಟಕ ಸರ್ಕಾರ ಆದೇಶ ಹೊರಡಿಸಿದೆ.

ಇದೇ ವಿಶ್ವವಿದ್ಯಾನಿಲಯದಲ್ಲಿ ಸೂಕ್ಷ್ಮ ಜೀವಾಣು ಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾಗಿ, ವಿಜ್ಞಾನ ನಿಕಾಯದ ಡೀನ್ ಆಗಿ, ಪರೀಕ್ಷಾಂಗ ವಿಭಾಗದ ಕುಲಸಚಿವರಾಗಿ, ಐಕ್ಯೂಎಸಿ ನಿರ್ದೇಶಕರಾಗಿ ಗಾಯತ್ರಿ ಅವರು ಕಾರ್ಯ ನಿರ್ವಹಿಸಿದ್ದಾರೆ.

ಇದೀಗ ಆಡಳಿತ ವಿಭಾಗದ ಕುಲಸಚಿವರಾಗಿ ಗಾಯತ್ರಿ ದೇವರಾಜ್ ಅವರು ನಿನ್ನೆ ಅಧಿಕಾರ ವಹಿಸಿಕೊಂಡ ಸಂದರ್ಭದಲ್ಲಿ ದಾವಣಗೆರೆ ವಿವಿ ಕುಲಪತಿ ಪ್ರೊ. ಎಸ್. ವಿ. ಹಲಸೆ ಹಾಗೂ ಹಣಕಾಸು ಅಧಿಕಾರಿ ಶ್ರೀಮತಿ ಪ್ರಿಯಾಂಕಾ ಅವರುಗಳು ಸ್ವಾಗತಿಸಿ ಶುಭ ಹಾರೈಸಿದರು.

ವಿಜ್ಞಾನ ಕ್ಷೇತ್ರದಲ್ಲಿ ಸಲ್ಲಿಸುತ್ತಿರುವ ಅನುಪಮ ಸೇವೆಗಾಗಿ ಕರ್ನಾಟಕ ರಾಜ್ಯ ಸರ್ಕಾರವು ಕೊಡಮಾಡುವ ವಿಜ್ಞಾನ ಕ್ಷೇತ್ರದ ಉನ್ನತ ಪ್ರಶಸ್ತಿ 'ಡಾ. ಕಲ್ಪನಾ ಚಾವ್ಲಾ ಯುವ ಮಹಿಳಾ ವಿಜ್ಞಾನಿ' ಪ್ರಶಸ್ತಿಯನ್ನು (2ನೇ ಪುಟಕ್ಕೆ)

## ದೇವರಹಳ್ಳಿ ಗ್ರಾ.ಪಂ. ಕಾಂಗ್ರೆಸ್ ವಶಕ್ಕೆ

ಚನ್ನಗಿರಿ, ಫೆ.10- ದೇವರಹಳ್ಳಿ ಗ್ರಾಮ ಪಂಚಾಯ್ತಿ ಕಳೆದ 25 ವರ್ಷಗಳಿಂದ ಕಾಂಗ್ರೆಸ್ ಆಡಳಿತ ಮಾಡುತ್ತಿದ್ದು, ಇತಿಹಾಸ ಸೃಷ್ಟಿ ಮಾಡಿದೆ ಎಂದು ಜಿಲ್ಲಾ ಕಿಸಾನ್ ಕಾಂಗ್ರೆಸ್ ಅಧ್ಯಕ್ಷ ಬಸವರಾಜು ವಿ. ಶಿವಗಂಗಾ ತಿಳಿಸಿದ್ದಾರೆ. ದೇವರ ಹಳ್ಳಿ ಗ್ರಾಮ ಪಂಚಾಯ್ತಿ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆ ನಂತರ ನಡೆದ ಸಭೆಯಲ್ಲಿ ಅವರು ಮಾತನಾಡಿದರು.

ಕಾಂಗ್ರೆಸ್ ಬೆಂಬಲಿತ ಅನ್ನಪೂರ್ಣಮ್ಮ ಅಧ್ಯಕ್ಷರಾಗಿ ಹಾಗೂ ಉಪಾಧ್ಯಕ್ಷರಾಗಿ ಲಕ್ಕಮ್ಮ ಆಯ್ಕೆಯಾಗಿದ್ದಾರೆ. 16 ಸದಸ್ಯರಲ್ಲಿ 11 ಸ್ಥಾನ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳು ಆಯ್ಕೆಯಾಗಿದ್ದು, ಉಳಿದಂತೆ 5 ಮಂದಿ ಇತರರು ಆಯ್ಕೆಯಾಗದ್ದರು. ಕಾಂಗ್ರೆಸ್ ಹೆಚ್ಚು ಸ್ಥಾನ ಗೆದ್ದ ಹಿನ್ನೆಲೆ ಕಾಂಗ್ರೆಸ್ ಪಕ್ಷಕ್ಕೆ ಆಡಳಿತ ಸಿಕ್ಕಿತು ಎಂದರು.

ಈ ಸಂದರ್ಭದಲ್ಲಿ ಪ್ರಭಾಕರ್, ವೆಂಕಟೇಶ್, ಜಿ.ಜಿ. ರಾಮಪ್ಪ, ನೀಲಪ್ಪರ ವಡ್ನಾಳ್, ಜಗದೀಶ್, ಬಿಲ್ಲಪ್ಪ, ಎ.ಆರ್. ಜಗದೀಶ್ ಇನ್ನಿತರೆ ಮುಖಂಡರು ಉಪಸ್ಥಿತರಿದ್ದರು.

# ಲಸಿಕೆ ಹಾಕಿಸಿಕೊಳ್ಳಲು ಭಯ ಬೇಡ



### ಹರಿಹರ ತಹಶೀಲ್ದಾರ್ ರಾಮಚಂದ್ರ

ಹರಿಹರ, ಫೆ.10- ಸಾರ್ವಜನಿಕರು ಭಯ ಪಡದೇ ಕೋವಿಶೀಲ್ಡ್ ಲಸಿಕೆಯನ್ನು ಹಾಕಿಸಿಕೊಳ್ಳುವಂತೆ ತಹಶೀಲ್ದಾರ್ ಕೆ. ಬಿ. ರಾಮಚಂದ್ರಪ್ಪ ಕರೆ ನೀಡಿದ್ದಾರೆ.

ನಗರದ ಸಾರ್ವಜನಿಕ ಸರ್ಕಾರಿ ಆಸ್ಪತ್ರೆ ಆವರಣದಲ್ಲಿ ಕೊರೊನಾ ವೇಳೆ ಮುಂಚೂಣಿಯಾಗಿ ಕಾರ್ಯ ನಿರ್ವಹಿಸಿದ ತಾಲ್ಲೂಕು ಆಡಳಿತ, ನಗರಸಭೆ, ಪೊಲೀಸ್ ಇಲಾಖೆ ಇವುಗಳ ನೌಕರರಿಗೆ ಕೋವಿಶೀಲ್ಡ್ ಲಸಿಕೆ ಹಾಕುವ ವೇಳೆ ತಹಶೀಲ್ದಾರ್ ಮತ್ತು ಪೌರಾಯುಕ್ತರು ಲಸಿಕೆ ಹಾಕಿಸಿಕೊಂಡ ನಂತರ ಅವರು ಮಾತನಾಡಿದರು.

ಇಂದಿನ ಸಮಾಜದಲ್ಲಿ ಆರೋಗ್ಯವಾಗಿರುವುದು ಬಹು ಮುಖ್ಯ ಅಂಶವಾಗಿರುತ್ತದೆ. ಕೋವಿಡ್‌ನಿಂದಾಗಿ ಜನರ ಜೀವನದಲ್ಲಿ ಸಾಕಷ್ಟು ಏರುಪೇರಾಗಿದೆ. ಕೊರೊನಾ ಹೋಗಲಾಡಿಸಲು ಸರ್ಕಾರದ ಎಲ್ಲಾ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಹಗಲು ರಾತ್ರಿ ಎನ್ನದೆ ಶ್ರಮಪಟ್ಟು ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದರು.

ಸರ್ಕಾರ ಲಸಿಕೆಯನ್ನು ಸಾರ್ವಜನಿಕರಿಗೆ ದೊರಕುವಂತೆ ಮಾಡಿದ್ದು, ಯಾವುದೇ ಅಡ್ಡಪರಿಣಾಮ ಬೀರುವುದಿಲ್ಲ ಎಂದು ಧೈರ್ಯ ತುಂಬುವ ಕೆಲಸ ಮಾಡಲಾಗುತ್ತಿದೆ ಎಂದು ತಿಳಿಸಿದರು.

ನಗರಸಭೆ ಪೌರಾಯುಕ್ತ ಉದಯಕುಮಾರ್, ಸರ್ವೇ ಇಲಾಖೆ ಎಡಿಎಲ್‌ಆರ್ ಕಸ್ತೂರಿ, ಚುನಾವಣಾ ಶಿರಸ್ತೇದಾರ ಪ್ರಶಾಂತ, ವಿ.ಎ. ಪ್ರಭು, ಲೋಹಿತ್, ಶರೀಫ್, ಆನಂದ್, ಬಸವರಾಜ್, ಚುನಾವಣಾ ಶಾಖೆಯ ಉಮೇಶ್ , ಕಿರಣ್, ಸಂತೋಷ್, ಭಾರತಿ, ನರಸಮ್ಮ, ಮಂಜುಳಾ, ಸಂಗೀತ ಜೋಷಿ, ಪುಷ್ಪಾ, ಕೋಮಲ, ಲಕ್ಷ್ಮಿ, ವೀಣಾ, ನೇತ್ರಾವತಿ, ರಾಣಿ, ಸಾವಿತ್ರಾ, ಪುಷ್ಪಾ ದೊಡ್ಡಮನಿ, ತುಕಾರಾಮ್ ಧನಲಕ್ಷ್ಮೀ ಪೊಲೀಸ್ ಕೆ.ಪಿ. ರಾಧಕೃಷ್ಣ, ಪತ್ರಕರ್ತ ಚಿದಾನಂದ ಕಂಚಿಕೇರಿ ಇನ್ನಿತರರು ಲಸಿಕೆ ಹಾಕಿಸಿಕೊಂಡರು.

ಈ ಸಂದರ್ಭದಲ್ಲಿ ತಾಲ್ಲೂಕು ಆರೋಗ್ಯ ಅಧಿಕಾರಿ ಡಾ. ಚಂದ್ರಮೋಹನ್, ಸಾರ್ವಜನಿಕ ಆಸ್ಪತ್ರೆ ಮುಖ್ಯ ವೈದ್ಯಾಧಿಕಾರಿ ಡಾ. ಎಲ್. ಹನುಮನಾಯ್ಕ್, ಆರೋಗ್ಯ ಇಲಾಖೆ ಉಮ್ಮಣ್ಣ, ಎಂ.ವಿ. ಹೊರಕೇರಿ, ಡಾ. ಕಾವ್ಯ, ರಾಧಿಕಾ, ಉಮ್ಲಾನಾಯ್ಕ್, ಶೋಭಾ ಸಿಸ್ಟರ್, ಜ್ಯೋತಿ, ಶಾಂತ್, ಶಿವುಭಾಯಿ, ಬಿ.ಎಸ್. ಸುರೇಶ್, ಮಹೇಶ್, ಶಶಿಕಾಂತ್, ಪ್ರಕಾಶ್, ಮಣಿಕಂಠ ಇನ್ನಿತರರಿದ್ದರು.

## ಪುರಂದರ ಗುರುಂ ವಂದೇ ದಾಸಶ್ರೇಷ್ಠಮ್ ದಯಾನಿಧಿಮ್

ಹರಿಚಿತ್ತ ಸತ್ಯ ಹರಿಚಿತ್ತ ಸತ್ಯ
ಪುರಂದರ ದಾಸರ ಸತ್ಯ
ಪುರಂದರಗಡದ ವರದಪ್ಪರ ಪುತ್ರ
ಹರಿ ಒಲಿದ ಶ್ರೀನಿವಾಸನಾಯಕ

ರತ್ನ ವ್ಯಾಪಾರಿಯಾಗಿದ್ದರು
ಸತೀಸಾಧ್ವಿ ಸರಸ್ವತಿ ಕೈ ಹಿಡಿದರು
ಸತ್ವ ಪರೀಕ್ಷೆಯಲ್ಲಿ ಸಾಧನ ಸಂಪತ್ತು
ಸತಿಯಿಂದ ಆದದ್ದೆಲ್ಲ ಒಳಿತೆಂದರಿವು

ಕೃಷ್ಣದೇವರಾಯನ ಪರ್ವಕಾಲ
ಕೃಷ್ಣನ ಕಾರುಣ್ಯ ನಾಯಕರ ಮೇಲೆ
ಶ್ರೇಷ್ಠ ವ್ಯಾಸರಿಂದ ದೀಕ್ಷೆ
ನಿಷ್ಠೆಯಿಂದ ಪುರಂದರ ವಿಠ್ಠಲ ಅಂಕಿತ

ವಿಪುಲ ಕೀರ್ತನೆಗಳ ರಚನೆ
ಈ ಪರಿಯ ಸೊಬಗು ಎನ್ನುತ ಭಜನೆ
ಲೋಳಲೊಟ್ಟೆ ಎಂದು ಸಿರಿಯ ಕಂಡರು ತುಚ್ಛ
ಕಲ್ಲುಸಕ್ಕರೆ ಕೊಳ್ಳಿ ರೆಂದ ಸಿಹಿ

ಸರಳವಾಗಿ ಪರಮಾತ್ಮನ ಭಜನೆ
ಸಹಸ್ರಾರು ಉಗಾಭೋಗ ಕೀರ್ತನೆ
ವಾತ್ಸಲ್ಯಭರಿತ ಸಂಕೀರ್ತನ
1565ರಲ್ಲಿ ಹರಿಯಲ್ಲಿ ಲೀನ

**- ಕೋಮಲ ವಿ. ಕುಮಾರ್**, ದಾವಣಗೆರೆ.



## ಪುರಂದರ ದಾಸರೇ ನಿಮಗೆ ವಂದಿಪೆ

ಪುರಂದರ ದಾಸರೇ ನಿಮಗೆ ವಂದಿಪೆ
ನಿರುಪಮ ಭಕ್ತರೇ ನಿಮ್ಮನಾರಾಧಿಪೆ
ಪರಿಪರಿಯಲಿ ಹರಿಯ ಕೊಂಡಾಡಿದ ಗುರುಗಳೆ
ಪರಮ ವೈರಾಗ್ಯ ಮೂರ್ತಿ ನಿಮಗೆ ನಮಿಪೆ

ಆಡು ಭಾಷೆಯಲ್ಲಿ ವೇದಾಂತವನ್ನು ಇಟ್ಟಿರಿ
ಹಾಡಿ ಪಾಡಿ ನಲಿದಾಡುತ ಜ್ಞಾನ ಕೊಟ್ಟಿರಿ
ಆಡುವ ಕುಣಿದಾಡುವ ಕೃಷ್ಣನ ಕಂಡಿರಿ
ಅಡಿಗಡಿಗೂ ಆನಂದವ ಅನುಭವಿಸಿದಿರಿ

ನಾಮ ನೇಮ ಜಪಗಳ ಯಜ್ಞವನ್ನು ಮಾಡುತ
ಪ್ರೇಮ ಭಕ್ತಿ ವೈರಾಗ್ಯ ತುಂಬಿ ತುಳುಕುತ
ಸಮವಿಲ್ಲದ ಸಾಹಿತ್ಯದ ರಚನೆಯನ್ನು ಮಾಡುತ
ನಮಗೆ ಸನ್ಮಾರ್ಗದ ಪಥವ ತೋರುತ

ಸಮಾಜಮುಖಿ ಕೀರ್ತನೆಗಳ ಭಂಡಾರ ನೀಡುತ
ಸಮಾಜದ ಒಳಿತಿಗಾಗಿ ಜೀವ ಸವೆಸುತ
ಸಮನಾಗಿ ಎಲ್ಲರಿಗೂ ಜ್ಞಾನವನ್ನು ಹಂಚುತ
ಸಮವಿಲ್ಲದ ಎತ್ತರಕೆ ಬೆಳೆದು ನಿಲ್ಲುತ

ತತ್ವಪದ ಗೂಡಾರ್ಥದ ಪದಗಳೆಲ್ಲ ಸೇರುತ
ಸತ್ವ ಭರಿತ ಪುರಂದರುಪನಿಷತ್ತೆನಿಸುತ
ಸತ್ಯ ನಿಷ್ಠೆ ಶ್ರದ್ಧೆಯಿಂದ ಗುರು ಕರುಣೆ ಪಡೆಯುತ
ನಿತ್ಯ ಚಿನ್ಮಯನ ಕಂಡು ಧನ್ಯರಾಗುತ

ನುಡಿಯಲಿ ನಿಮ್ಮ ಕೀರ್ತನೆಗಳು ನಾಲಿಗೆಯಲಿ
ನಡೆಯಲಿ ಸಚ್ಚಿಂತನೆ ನಿತ್ಯ ಮನದಲಿ
ಮಿಡಿಯಲಿ ಮನ ಕೇಳುತ ಆನಂದದಲಿ
ಪಡೆಯಲಿ ಸಿರಿಹರಿ ಕೃಪೆಯ ನಿಮ್ಮ ಕರುಣೆಲಿ

**- ಶ್ರೀ ಕೃಷ್ಣಾರ್ಪಣಮಸ್ತು**
**ರೂಪಶ್ರೀ ಶಶಿಕಾಂತ್**

## ಪುರಂದರ ನಮನ

ನಮಿಸುವೆವು ಕನ್ನಡದ ಹರಿದಾಸ ಶ್ರೇಷ್ಠರಿಗೆ
ಜಗವು ತಲೆಬಾಗಿಹುದು ಅವರ ಜ್ಞಾನದ ಸುಧೆಗೆ
'ನವಕೋಟಿ ನಾರಾಯಣ' ಪುರಂದರರಿಗೆ
ಕರಮುಗಿದು ವಂದಿಪೆವು ಚರಣ ಕಮಲಗಳಿಗೆ.

ವರದಪ್ಪ ನಾಯಕ ಲಕ್ಷ್ಮಿ ದೇವಿಯರಲ್ಲಿ
ಮಾಧ್ವ ಬ್ರಾಹ್ಮಣ ಕುಲದಿ ಉದಯಿಸಿದರು
ತಿರುಪತಿಯ ಒಡೆಯನ ಕೃಪಾಕಟಾಕ್ಷದಲಿ
'ಶ್ರೀನಿವಾಸ 'ಎಂಬ ನಾಮವನು ಹೊಂದಿದರು.

ಸಾಧ್ವಿ ಸರಸ್ವತಿಯನ್ನು ವರಿಸಿದ ನಾಯಕರು
ಕೃಪಣತನದಲಿ ಬದುಕು ನಡೆಸಿದವರು
ಶ್ರೀಹರಿಯು ಪರೀಕ್ಷಿಸಲು ಜ್ಞಾನೋದಯವಾಗಿ
ಸಿರಿವಂತಿಕೆಯ ತೊರೆದು ಹರಿದಾಸರಾದರು.

ತುಳಸಿ ಮಾಲೆಯ ಧರಿಸಿ ಗೋಪಿಚಂದನವಿರಿಸಿ
ತಾಳ ತಂಬೂರಿಯನು ಪಿಡಿದರವರು
ಸಂಸಾರ ಜೀವನದಲಿ ವೈರಾಗ್ಯವನು ತಾಳಿ
ಜೋಳಿಗೆಯ ಹಿಡಿದು ಭಾಗ್ಯವನು ಪಡೆದಿಹರು.

ಕನಸು ಮನಸಿನ ತುಂಬ ಚೆಲ್ವ ಚೆನ್ನಿಗ ಕೃಷ್ಣ
ಭಕ್ತಿಯಲಿ ಮುಳುಗಿಸಿದನೀ ದಾಸರನ್ನು
ಭಗವಂತನ ಲೀಲೆ,ಜೀವನದ ವೈರಾಗ್ಯ
ಭಕ್ತಿ ಮಾರ್ಗಕೆ ದಾರಿ ಅರಿತರಿದನು.

'ದಾಸರೆಂದರೆ ಪುರಂದರ ದಾಸ'ರೆಂದೆನುತ
ವ್ಯಾಸರಾಯರೇ ಅವರ ಬಣ್ಣಿಸಿದರು
ಕೀರ್ತನೆ, ಉಗಾಭೋಗ, ಸುಳಾದಿಗಳ ರಚಿಸಿ
'ಕರ್ನಾಟಕ ಸಂಗೀತ ಪಿತಾಮಹ'ರೆನಿಸಿದರು.

ಪಾಂಡುರಂಗನ ಭಜಿಸಿ ಮಧ್ವ ಸಿದ್ಧಾಂತವನು
ನಾಡಿನೆಲ್ಲೆಡೆ ಹರಡಿ ಪೋಷಿಸಿದರು
'ಪುರಂದರ ವಿಠಲ' ಎಂಬ ಅಂಕಿತದಿಂದ
ಸಂಗೀತ ಲೋಕವನೆ ಬೆಳಗಿಸಿದರು.

**- ಜಿ.ಎಸ್.ಗಾಯತ್ರಿ,** ಶಿಕ್ಷಕಿ
ಬಾಪೂಜಿ ಶಾಲೆ, ಹರಿಹರ.

## ಪುರಂದರ ನಮನ

ಭಕ್ತನೇ ತಾಯಂತೆ, ಭಗವಂತ ಮಗುವಂತೆ,
ಮುಕ್ತದೀ ಹಾಡಿದಿರಿ ಜಗಮೆಚ್ಚುವಂತೆ.
ನಿಮ್ಮ ಕೀರ್ತನೆಗಳೆಲ್ಲ ಉಪನಿಷತ್ತಿನ ಸಾರ,
ಬ್ರಹ್ಮವಿದ್ಯೆಯ ಅರಿವು ಓದಿದರೆ ಪೂರ.

ಸರಳ ಕನ್ನಡದಲ್ಲಿ ವಿರಳ ಕೃತಿಗಳ ರಚಿಸಿ
ದುರುಳ ಜನರುಗಳ ಮರುಳ ಬಿಡಿಸಿ,
ಬಹಳ ಕಠಿಣವು ಇದ್ದ ಸಂಗೀತ ತಿಳಿಗೊಳಿಸಿ
ತರಳ ಕೃಷ್ಣನ ಲೀಲೆ ಗೇಯಗೊಳಿಸಿ.

ಗೋತ್ರ ವಾಸಿಷ್ಠವು, ವೇದ ಯಜು ಶಾಖೆಯು
ಪಾತ್ರವಾಯಿತಿ ವ್ಯಾಸ ತೀರ್ಥ ಕೃಪೆಯು,
ಸೂತ್ರವಾಯಿತು ಜಗದ ಡೊಂಕ ತಿದ್ದುವ ಪರಿಯು
ಮಾತ್ರವಾಗಲು 'ಪುರಂದರ ವಿಠಲ' ನಂಕಿತೆಯು.

ಕೀರ್ತನೆಯ ಮಕುಟಕ್ಕೆ ಜಾವಳಿಯ ಗರಿ ಇಟ್ಟು
ಉಗಾ ಭೋಗದ ಒಡವೆ ಸುಳಾದಿ ಬೊಟ್ಟು.
ಲಕ್ಷಗಳ ಸಂಖ್ಯೆಯಲಿ ಕೃತಿಗಳನೆ ಬರೆದಿಟ್ಟು
ದಾಸ ಪುರಂದರರೆ ಹರಸಿ ನಮಗೆ ಮತಿಕೊಟ್ಟು.

**- ಹೆಚ್.ಬಿ.ಮಂಜುನಾಥ್**
ಹಿರಿಯ ಪತ್ರಕರ್ತ

# ಹಲುವಾಗಲು ಗ್ರಾ.ಪಂ. ಅಧ್ಯಕ್ಷರಾಗಿ ದ್ಯಾಮಪ್ಪ, ಉಪಾಧ್ಯಕ್ಷರಾಗಿ ಹೇಮಾ

### ಲಾಟರಿ ಮೂಲಕ ಒಲಿದ ಪಟ್ಟ

ಹರಪನಹಳ್ಳಿ, ಫೆ.10- ತಾಲ್ಲೂಕಿನ ಹಲುವಾಗಲು ಗ್ರಾಮ ಪಂಚಾಯಿತಿ ಅಧ್ಯಕ್ಷರ ಚುನಾವಣೆ ಬುಧವಾರ ಲಾಟರಿ ಪ್ರಕ್ರಿಯೆ ನಡೆದು ದ್ಯಾಮಪ್ಪ ಅವರಿಗೆ ಅಧ್ಯಕ್ಷ ಪಟ್ಟ ಒಲಿಯಿತು.

ಗ್ರಾಮ ಪಂಚಾಯಿತಿ ಕಾರ್ಯಾಲಯದಲ್ಲಿ ನಡೆದ ಚುನಾವಣಾ ಪ್ರಕ್ರಿಯೆಯಲ್ಲಿ ಅಧ್ಯಕ್ಷ ಸ್ಥಾನ ಬಯಸಿ ರುದ್ರಪ್ಪ ಮತ್ತು ದ್ಯಾಮಪ್ಪ ನಾಮಪತ್ರ ಸಲ್ಲಿಸಿದ್ದರು. ಮತದಾನ ಪ್ರಕ್ರಿಯೆಯಲ್ಲಿ ತಲಾ 13 ಮತಗಳು ಪಡೆದು, ಸಮಬಲ ಸಾಧಿಸಿದರು.

ಇದರಿಂದ ಚುನಾವಣೆ ಅಧಿಕಾರಿಗಳು ಲಾಟರಿ ಪ್ರಕ್ರಿಯೆ ಅನುಸರಿಸಿದಾಗ ದ್ಯಾಮಪ್ಪ ಅವರು ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣೆ ಅಧಿಕಾರಿ ಎಇಇ ಸಿದ್ದರಾಜು ಘೋಷಣೆ ಮಾಡಿದರು. ಫೆ.5ರಂದು ನಡೆದ ಆಯ್ಕೆ ಸಭೆಯಲ್ಲಿ ಉಪಾಧ್ಯಕ್ಷ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿದ್ದ ಹೇಮಾ ಅವರೂ ಲಾಟರಿ ಮೂಲಕವೇ ಜಯ ಸಾಧಿಸಿದ್ದರು. ಅಂದು ಅಧ್ಯಕ್ಷ ಸ್ಥಾನಕ್ಕೆ ಹೆಚ್ಚುವರಿ ನಾಮಪತ್ರಗಳಿದ್ದುದರಿಂದ, ಸದಸ್ಯರ ಒಪ್ಪಿಗೆ ಪಡೆದು ಚುನಾವಣೆ ಮುಂದೂಡಲಾಗಿತ್ತು.

ಮುಂಜಾಗ್ರತೆಯಾಗಿ ಗ್ರಾಮ ಪಂಚಾಯಿತಿ ಆವರಣದಲ್ಲಿ ಡಿಆರ್ ವಾಹನ ಸಮೇತ ಪೊಲೀಸ್ ಬಂದೋಬಸ್ತ್ ಒದಗಿಸಲಾಗಿತ್ತು.

ಆಯ್ಕೆ ಸಭೆಯಲ್ಲಿ ತಹಶೀಲ್ದಾರ್ ಎಲ್.ಎಂ. ನಂದೀಶ್, ಅರವಿಂದ, ಜಿ.ಎಲ್.ಲೋಕೇಶ್, ಬಿ. ನರಸಿಂಹ, ಸಿಪಿಐ ಕೆ. ಕುಮಾರ್, ಪಿಎಸ್‌ಐಗಳಾದ ಪ್ರಶಾಂತ್, ಪ್ರಕಾಶ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಶಿವಣ್ಣ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

**ಪಟಾಕಿ ಸಿಡಿಸಿ ಸಂಭ್ರಮ** : ಲಾಟರಿ ಪ್ರಕ್ರಿಯೆ ಮೂಲಕ ಅಧ್ಯಕ್ಷರ ಆಯ್ಕೆ ಘೋಷಣೆ ಆಗುತ್ತಿದ್ದಂತೆಯೇ ಗ್ರಾಮದ ಪ್ರಮುಖ ಬೀದಿ, ಊರಮ್ಮ ದೇವಸ್ಥಾನ, ಆಂಜನೇಯ ದೇವಸ್ಥಾನದ ಆವರಣಗಳಲ್ಲಿ ಪಟಾಕಿ ಹಚ್ಚಿ ಬಿಜೆಪಿ ಕಾರ್ಯಕರ್ತರು ಸಂಭ್ರಮಿಸಿದರು. ನೂತನ ಅಧ್ಯಕ್ಷ ದ್ಯಾಮಪ್ಪ ಮಾತನಾಡಿ, ಕೊನೆಗೂ ನ್ಯಾಯ ದೊರೆತಿದೆ. ಸದಸ್ಯನಾಗಿ, ಅಧ್ಯಕ್ಷರಾಗಿ ಆಯ್ಕೆಯಾಗಿದ್ದು ಸಂತಸ ತಂದಿದೆ, ಅಧಿಕಾರ ದುರುಪಯೋಗ ಮಾಡಿಕೊಳ್ಳದೇ ಪ್ರಾಮಾಣಿಕವಾಗಿ ಜನಸೇವೆ ಮಾಡುವುದಾಗಿ ಭರವಸೆ ನೀಡಿದರು.

ನೂತನ ಅಧ್ಯಕ್ಷರನ್ನು ಮುಖಂಡ ಕಲ್ಲೇರ ಬಸವರಾಜ್, ಎಚ್.ಟಿ.ಗಿರೀಶಪ್ಪ, ಅರಸನಾಳು ಜಿ.ಬಸವರಾಜ್, ಹರಿಜನ ಅಜ್ಜಪ್ಪ, ಇಂದ್ರಪ್ಪ, ಪರಶುರಾಮ್, ಜಿ.ಕೆ.ನಾಗೇಂದ್ರಪ್ಪ, ದಿವಾಕರ್ ಅಭಿನಂದಿಸಿದರು.

# ರೈತರ ಹೋರಾಟ ಪವಿತ್ರ

**(1ನೇ ಪುಟದಿಂದ)** ತೋರಿಸುತ್ತಿದ್ದಾರೆ. ಇದರಿಂದ ಏನಾದರೂ ಪ್ರಯೋಜನವಾಗಲಿದೆಯೇ? ಟೋಲ್ ಪ್ಲಾಜಾಗಳು ಕೆಲಸ ಮಾಡಲು ಬಿಡದೇ ಇರುವುದು, ಪಂಜಾಬ್‌ನಲ್ಲಿ ಟೆಲಿಕಾಂ ಸ್ಥಾವರಗಳನ್ನು ನಾಶಗೊಳಿಸುವಂತಹ ಕೃತ್ಯಗಳಿಂದ ಪವಿತ್ರ ಆಂದೋಲನಕ್ಕೆ ಪ್ರಯೋಜನವಾಗುತ್ತದೆಯೇ? ಎಂದು ಮೋದಿ ಪ್ರಶ್ನಿಸಿದ್ದಾರೆ.

ಆಂದೋಲನ ಜೀವಿಗಳು ರೈತರ ಪವಿತ್ರ ಪ್ರತಿಭಟನೆಯನ್ನು ಹಾಳು ಮಾಡಿದ್ದಾರೆಯೇ ಹೊರತು ಆಂದೋಲನಕಾರಿಗಳಲ್ಲ. ಹೀಗಾಗಿ ದೇಶ ಆಂದೋಲನ ಜೀವಿಗಳು ಹಾಗೂ ಆಂದೋಲನಕಾರಿಗಳ ವ್ಯತ್ಯಾಸ ತಿಳಿಯಬೇಕಿದೆ ಎಂದು ಪ್ರಧಾನಿ ಹೇಳಿದ್ದಾರೆ.

ಕಾಂಗ್ರೆಸ್ ಸದಸ್ಯರು ಸದನದಲ್ಲಿ ಮಾತನಾಡುವಾಗ ಕಾಯ್ದೆಗಳಲ್ಲಿ ಇರುವ ಲೋಪಗಳ ಬಗ್ಗೆ ಏನೂ ಮಾತನಾಡಿಲ್ಲ ಎಂದು ಹೇಳಿದ ಪ್ರಧಾನಿ ಮೋದಿ, ಪ್ರತಿಪಕ್ಷಗಳು ರೈತರ ದಾರಿ ತಪ್ಪಿಸುತ್ತಿವೆ ಎಂದು ಆರೋಪಿಸಿದ್ದಾರೆ. ಪ್ರಧಾನಿ ಕೃಷಿ ಕಾಯ್ದೆಗಳ ಕುರಿತು ತಮ್ಮ ನಿಲುವು ತಿಳಿಸುವಾಗಲೇ ಕಾಂಗ್ರೆಸ್ ಸದಸ್ಯರು ಸಭಾತ್ಯಾಗ ಮಾಡಿದರು.

ಕೃಷಿ ಕಾಯ್ದೆಗಳಿಂದ ಮಂಡಿ ವ್ಯವಸ್ಥೆ ದುರ್ಬಲವಾಗಲಿದೆ ಹಾಗೂ ಕನಿಷ್ಠ ಬೆಂಬಲ ಬೆಲೆ ರದ್ದಾಗಲಿದೆ ಎಂದು ಟೀಕಾಕಾರರು ರೈತರಲ್ಲಿ ಹೆದರಿಕೆ ಹುಟ್ಟಿಸುತ್ತಿದ್ದಾರೆ. ಈ ಕಾಯ್ದೆಗಳು ಸಂಸತ್ತಿನಿಂದ ಅನುಮೋದನೆ ಪಡೆದ ನಂತರ ಯಾವುದೇ ಮಂಡಿ ಮುಚ್ಚಿಲ್ಲ. ಇದರ ಬದಲು ಕೃಷಿ ಮಂಡಿಗಳ ಆಧುನೀಕರಣಕ್ಕೆ ಹೆಚ್ಚು ಅನುದಾನ ನೀಡಲಾಗಿದೆ. ಇದೇ ರೀತಿ ಕನಿಷ್ಠ ಬೆಂಬಲ ಬೆಲೆ ಮುಂದುವರೆದಿದೆ. ಈ ಅಂಶಗಳನ್ನು ಕಡೆಗಣಿಸಲಾಗದು ಎಂದು ಪ್ರಧಾನಿ ತಿಳಿಸಿದ್ದಾರೆ.

ರೈತರು ಈ ಕಾಯ್ದೆಯನ್ನು ಕೇಳಿಯೇ ಇರಲಿಲ್ಲ ಏಕೆ ಕೊಟ್ಟಿರಿ ಎಂದು ಪ್ರತಿಪಕ್ಷಗಳ ಸದಸ್ಯರು ಹೇಳಿದ್ದರಿಂದ ಆಘಾತವಾಗಿದೆ. ವರದಕ್ಷಿಣೆ ವಿಷಯವೇ ಇರಲಿ, ತ್ರಿವಳಿ ತಲಾಕ್ ವಿಷಯವೇ ಇರಲಿ ಯಾರೊಬ್ಬರೂ ಇವುಗಳ ನಿಷೇಧಕ್ಕೆ ಕೇಳಿರಲಿಲ್ಲ. ಆದರೆ, ಪ್ರಗತಿಪರ ಸಮಾಜಕ್ಕೆ ಅಗತ್ಯವಾದ ರೀತಿಯಲ್ಲಿ ಕಾಯ್ದೆಗಳನ್ನು ಜಾರಿಗೆ ತರಬೇಕಾಗುತ್ತದೆ ಎಂದವರು ಹೇಳಿದ್ದಾರೆ.

ರಾಷ್ಟ್ರಪತಿ ಭಾಷಣಕ್ಕೆ ಅಭಿನಂದನೆ ಸಲ್ಲಿಸುವ ನಿಲುವಳಿಯಲ್ಲಿ ಸಾಕಷ್ಟು ಮಹಿಳಾ ಸಂಸದರು ಚರ್ಚೆಯಲ್ಲಿ ಪಾಲ್ಗೊಂಡರು. ಇದು ಉತ್ತಮ ಸಂಕೇತವಾಗಿದೆ. ಈ ಸದನದ ಪ್ರಕ್ರಿಯೆಗಳನ್ನು ತಮ್ಮ ವಿಚಾರಗಳಿಂದ ಶ್ರೀಮಂತಗೊಳಿಸಿದ ಮಹಿಳಾ ಸಂಸದರಿಗೆ ನಾನು ಅಭಿನಂದಿಸುತ್ತೇನೆ ಎಂದೂ ಪ್ರಧಾನಿ ತಿಳಿಸಿದ್ದಾರೆ.

## 'ಮನ್ ಕಿ ಬಾತ್' ಆಲಿಸುತ್ತಿಲ್ಲ

**(1ನೇ ಪುಟದಿಂದ)** ಸರ್ಕಾರ 22 ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ನಿಗದಿ ಪಡಿಸಿದ್ದರೂ ಕೇವಲ ಗೋಧಿ, ಅಕ್ಕಿ ಹಾಗೂ ಕೆಲವು ಬೇಳೆಗಳನ್ನು ಮಾತ್ರ ಖರೀದಿಸುತ್ತಿದೆ ಎಂದವರು ಹೇಳಿದ್ದಾರೆ.

ಸರ್ಕಾರ ರೈತರ ಮನ್ ಕಿ ಬಾತ್ ಆಲಿಸುತ್ತಿಲ್ಲ. ನೀವು ಸದಾ ನಿಮ್ಮ ಮನ್ ಕಿ ಬಾತ್ ಮಾತನಾಡುತ್ತೀರಿ. ರೈತರು ಕನಿಷ್ಠ ಬೆಂಬಲ ಬೆಲೆ ಕಾಯ್ದೆ ಕೇಳುತ್ತಿದ್ದಾರೆ ಎಂದು ಸಿಬಾಲ್ ತಿಳಿಸಿದ್ದಾರೆ.

ಚೀನಾ, ಅಮೆರಿಕ ಹಾಗೂ ಯುರೋಪ್‌ಗಳಿಗೆ ಹೋಲಿಸಿದರೆ ಭಾರತದಲ್ಲಿ ರೈತರಿಗೆ ಸಿಗುತ್ತಿರುವ ಸಬ್ಸಿಡಿ ಕಡಿಮೆ ಇದೆ. ಅಮೆರಿಕದಲ್ಲಿ ಪ್ರತಿ ರೈತನಿಗೆ ಸರ್ಕಾರ ವರ್ಷಕ್ಕೆ 62 ಸಾವಿರ ಡಾಲರ್ ಸಬ್ಸಿಡಿ ನೀಡುತ್ತಿದೆ. ನೀವು ರೈತರಿಗೆ ಕನಿಷ್ಠ ಬೆಂಬಲ ಬೆಲೆಯನ್ನೂ ಕೊಡುತ್ತಿಲ್ಲ. ರೈತರು ಹೆಚ್ಚೇನೂ ಕೇಳುತ್ತಿಲ್ಲ, ನಿಮ್ಮ ಕಾರ್ಪೊರೇಟ್‌ಗಳು ಕೇಳುತ್ತಾರೆ. ಕಾರ್ಪೊರೇಟ್‌ಗಳು ತೆರಿಗೆ ಪರಿಹಾರ ಹಾಗೂ ವಿನಾಯಿತಿ ಕೇಳಿದಾಗ ಸರ್ಕಾರ ಕೊಡುತ್ತದೆ. ಆದರೆ, ರೈತರು ಕನಿಷ್ಠ ಬೆಂಬಲ ಬೆಲೆ ಕೇಳಿದಾಗ ನೀವು ಕೊಡಲು ಸಿದ್ಧರಿಲ್ಲ. ರೈತರು ಕನಿಷ್ಠ ಕೇಳುತ್ತಿದ್ದಾರೆ, ನೀವು ಕಾರ್ಪೊರೇಟ್‌ಗಳಿಗೆ ಗರಿಷ್ಠ ಕೊಡುತ್ತಿದ್ದೀರಿ ಎಂದವರು ಆರೋಪಿಸಿದರು.

ಭಾರತ ರೈತರಿಗೆ 11 ಶತಕೋಟಿ ಡಾಲರ್ ಸಬ್ಸಿಡಿ ಕೊಡುತ್ತಿದೆ. ಚೀನಾದಲ್ಲಿ ಸಬ್ಸಿಡಿ 185.9 ಶತಕೋಟಿ ಡಾಲರ್, ಯುರೋಪ್‌ನಲ್ಲಿ 101.2 ಶತಕೋಟಿ ಡಾಲರ್ ಹಾಗೂ ಅಮೆರಿಕದಲ್ಲಿ 48.9 ಶತಕೋಟಿ ಡಾಲರ್ ಎಂದವರು ಹೇಳಿದರು.

ನೂತನ ಕೃಷಿ ಕಾಯ್ದೆಗಳಿಂದ ಭಾರತೀಯ ಕೃಷಿಯ ಕಾರ್ಪೊರೇಟೀಕರಣವಾಗಲಿದೆ ಎಂದು ಕಳವಳ ವ್ಯಕ್ತಪಡಿಸಿದ ಸಿಬಾಲ್, ಕಾರ್ಪೊರೇಟೀಕರಣದಿಂದ ಅಮೆರಿಕದ ಜನರಲ್ಲಿ ಶೇ.1.5ರಷ್ಟು ಜನರು ಮಾತ್ರ ಕೃಷಿಯಲ್ಲಿ ಉಳಿದಿದ್ದಾರೆ. ಭಾರತದಲ್ಲಿ ಶೇ.50ರಷ್ಟು ಜನ ಕೃಷಿಯಲ್ಲಿದ್ದಾರೆ ಎಂದು ಹೇಳಿದ್ದಾರೆ.

2020ರಲ್ಲಿ ಅಮೆರಿಕದ ರೈತರು 425 ಶತಕೋಟಿ ಡಾಲರ್‌ಗಳಿಗೂ ಹೆಚ್ಚಿನ ದಿವಾಳಿಗೆ ಗುರಿಯಾಗಿದ್ದಾರೆ. ಇದು ಕಾರ್ಪೊರೇಟೀಕರಣದ ಪರಿಣಾಮ. ಅಮೆರಿಕದಲ್ಲಿ ನಗರ ಪ್ರದೇಶಗಳಿಗಿಂತ ಗ್ರಾಮೀಣ ಭಾಗದಲ್ಲಿ ಆತ್ಮಹತ್ಯೆ ಪ್ರಮಾಣ ಶೇ.45ರಷ್ಟು ಹೆಚ್ಚಾಗಿದೆ. ಅಲ್ಲಿ ಸಣ್ಣ ಜಮೀನು ಕಣ್ಮರೆಯಾಗಿವೆ ಎಂದವರು ಹೇಳಿದರು.

## 19ನೇ ವಾರ್ಡಿನಲ್ಲಿ ಸಾರ್ವಜನಿಕ ಶೌಚಾಲಯಕ್ಕೆ ಗುದ್ದಲಿ ಪೂಜೆ



ದಾವಣಗೆರೆ ಫೆ.10 - ಮಹಾನಗರ ಪಾಲಿಕೆಯ 19 ನೇ ವಾರ್ಡ್ ವ್ಯಾಪ್ತಿಯ ಆರ್.ಎಂ.ಸಿ. ರಸ್ತೆಯ ಸರ್ಕಲ್‌ನಲ್ಲಿ ಸುಮಾರು 15 ಲಕ್ಷ ರೂ.ಗಳ ಸಾರ್ವಜನಿಕ ಶೌಚಾಲಯ ನಿರ್ಮಾಣಕ್ಕೆ ಮಹಾನಗರ ಪಾಲಿಕೆ ಸದಸ್ಯರು ಹಾಗೂ ಜಿಲ್ಲಾ ಯುವ ಮೋರ್ಚಾ ಅಧ್ಯಕ್ಷ ಆರ್. ಎಲ್. ಶಿವಪ್ರಕಾಶ್ ಗುದ್ದಲಿ ಪೂಜೆ ನೆರವೇರಿಸಿದರು.

## ಎಸ್ಸೆಸ್ಸೆಲ್ಸಿ : ರಾಣೇಬೆನ್ನೂರಿನಲ್ಲಿಂದು



ಕಾಕಿ ಜನ ಸೇವಾ ಟ್ರಸ್ಟ್ ಹಾಗೂ ಜೆಸಿ ಸಹಕಾರಿ ಬ್ಯಾಂಕ್ ಸಂಯುಕ್ತಾ ಶ್ರಯದಲ್ಲಿ ದೊಡ್ಡನಾಗಪ್ಪ ಕಾಕಿ ಸ್ಮರಣಾರ್ಥ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿ ಗಳಿಗೆ ಪರಿಕ್ಷಾ ಪೂರ್ವ ತಯಾರಿ ತರಬೇತಿ ಕಾರ್ಯಾಗಾರವನ್ನು ಸಿದ್ದೇಶ್ವರ ನಗರದ ಕಾಕಿ ಗಣೇಶೋತ್ಸವ ಮಂಟಪದಲ್ಲಿ ಇಂದು ಹಮ್ಮಿಕೊಳ್ಳಲಾಗಿದೆ ಎಂದು ಟ್ರಸ್ಟ್ ಅಧ್ಯಕ್ಷ ಶ್ರೀನಿವಾಸ ಕಾಕಿ ತಿಳಿಸಿದ್ದಾರೆ.

## ಜಗಳೂರಿಗೆ ನಾಳೆ ಲೋಕಾಯುಕ್ತ ಪೊಲೀಸರು

ದಾವಣಗೆರೆ, ಫೆ.10- ಕರ್ನಾಟಕ ಲೋಕಾಯುಕ್ತ ಪೊಲೀಸ್ ನಿರೀಕ್ಷಕ ಆರ್.ಎಲ್.ಲಕ್ಷ್ಮೀಪತಿ ಅವರು ನಾಡಿದ್ದು ದಿನಾಂಕ 12 ರ ಶುಕ್ರವಾರ ಜಗಳೂರು ತಾಲ್ಲೂಕು ಪ್ರವಾಸ ಕೈಗೊಳ್ಳಲಿದ್ದು, ಸರ್ಕಾರಿ ಕಚೇರಿಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರಿಂದ ದೂರುಗಳನ್ನು ಸ್ವೀಕರಿಸುವರು ಎಂದು ಕರ್ನಾಟಕ ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಎಂ.ಎಸ್.ಕೌಲಾಪೂರೆ ತಿಳಿಸಿದ್ದಾರೆ.

## ಮೈಲಾರ-ಕುರುವತ್ತಿ ಜಾತ್ರಾ-ರಥೋತ್ಸವ : ಮೈಲಾರದಲ್ಲಿ ಇಂದು ಸಭೆ

ಹೂವಿನಹಡಗಲಿ ತಾಲ್ಲೂಕು ಮೈಲಾರ ಗ್ರಾಮದ ಶ್ರೀ ಮೈಲಾರಲಿಂಗ ಸ್ವಾಮಿ ದೇವಸ್ಥಾನದ ವಾರ್ಷಿಕ ಜಾತ್ರಾ ಕಾರಣಿಕೋತ್ಸವ ಮತ್ತು ಕುರುವತ್ತಿ ಶ್ರೀ ಮಲ್ಲಿಕಾರ್ಜುನ ಸ್ವಾಮಿ ಹಾಗೂ ಶ್ರೀ ಬಸವೇಶ್ವರ ಸ್ವಾಮಿ ದೇವಸ್ಥಾನದ ವಾರ್ಷಿಕ ಜಾತ್ರೆ- ರಥೋತ್ಸವದ ಪೂರ್ವಭಾವಿ ಸಿದ್ಧತಾ ಸಭೆಯು ಇಂದು ಮಧ್ಯಾಹ್ನ 12 ಗಂಟೆಗೆ ಮೈಲಾರ ಕ್ಷೇತ್ರದ ಶ್ರೀ ಮೈಲಾರಲಿಂಗೇಶ್ವರ ದೇವಸ್ಥಾನದ ಕಲ್ಯಾಣ ಮಂಟಪದಲ್ಲಿ ನಡೆಯಲಿದೆ. ಬಳ್ಳಾರಿ ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ ಜಾತ್ರೆ - ರಥೋತ್ಸವ ನಡೆಸಲು ಸಿದ್ಧತೆ ನಡೆಸಲಾಗಿದೆ.

## ನಗರದಲ್ಲಿ ಇಂದು ಸಂಧ್ಯಾವಂದನೆ ಶಿಬಿರ

ಅಖಿಲ ಕರ್ನಾಟಕ ಬ್ರಾಹ್ಮಣ ಅಭಿವೃದ್ಧಿ ಮಂಡಳಿ (ಬೆಂಗಳೂರು) ಮತ್ತು ಅಖಿಲ ಕರ್ನಾಟಕ ಅರ್ಚಕರು ಮತ್ತು ಪುರೋಹಿತರ ಸಂಘದ ವತಿಯಿಂದ ತ್ರಿಮತಸ್ಥ ಬ್ರಾಹ್ಮಣ ಬಂಧುಗಳಿಗೆ ಸಂಧ್ಯಾವಂದನೆ ಮತ್ತು ನಿತ್ಯ ದೇವತಾರ್ಚನೆ ಶಿಬಿರವನ್ನು ಇಂದಿನಿಂದ ಫೆಬ್ರವರಿ 15 ರವರೆಗೆ ಪ್ರತಿದಿನ ಸಂಜೆ 5.30 ರಿಂದ 6.30 ರವರೆಗೆ ಶ್ರೀ ಜಯದೇವ ಮುರುಘರಾಜೇಂದ್ರ ವೃತ್ತದಲ್ಲಿರುವ ಕೂಡಲಿ ಶಂಕರ ಮಠದಲ್ಲಿ ಹಮ್ಮಿಕೊಳ್ಳಲಾಗಿದೆ. ಶಿಬಿರದಲ್ಲಿ ಪಾಲ್ಗೊಳ್ಳಲು ವಯಸ್ಸಿನ ಮಿತಿ ಇರುವುದಿಲ್ಲ ಎಂದು ಪುರೋಹಿತರ ಸಂಘದ ಅಧ್ಯಕ್ಷ ಪವನ್ ಕುಮಾರ್ ಭಟ್ (9886212889, 9611165426) ತಿಳಿಸಿದ್ದಾರೆ.

# ಪೌರ ಕಾರ್ಮಿಕರ ಖಾಯಂಗೆ ಆಗ್ರಹ

**(1ನೇ ಪುಟದಿಂದ)** ಎಂದು ಎಚ್ಚರಿಸಿದರು. ಅಂದು 11 ಸಾವಿರ ಮಂಜೂರಾದ ಹುದ್ದೆಗಳ ಪೈಕಿ 4800 ಪೌರ ಕಾರ್ಮಿಕರನ್ನು ಖಾಯಂಗೊಳಿಸಲಾಯಿತು. ಇನ್ನೂ 7800 ಜನರನ್ನು ಖಾಯಂ ಮಾಡಿಕೊಳ್ಳಬೇಕಿದೆ ಎಂದು ಹೇಳಿದರು. ಸರ್ಕಾರಿ ಆದೇಶದಲ್ಲಿ ಕೇವಲ ಕಸ ಗುಡಿಸುವವರನ್ನು ಮಾತ್ರ ನೇಮಕಾತಿ ಮಾಡಿಕೊಳ್ಳಬೇ ಕೆಂದಿದೆ. ಆದರೆ ಒಳಚಂರಂಡಿ ಸ್ವಚ್ಛಗೊಳಿಸುವವರು, ಚಾಲಕರು, ಸ್ವಚ್ಛತಾ ಸಹಾಯಕರು, ತಾಜ್ಯವನ್ನು ಲೋಡ್ ಮಾಡುವವರು ಸೇರಿದಂತೆ ವಿವಿಧ ಹಂತದ ಸ್ವಚ್ಛತಾ ಸಿಬ್ಬಂದಿಗಳನ್ನು ಕೈ ಬಿಡಲಾಗಿದೆ. ಆದ್ದರಿಂದ ಎಲ್ಲಾ ವರ್ಗದ ಸ್ವಚ್ಛತಾ ಸಿಬ್ಬಂದಿಗಳನ್ನೂ ಸಹ ಖಾಯಂ ನೇಮಕಾತಿ ಮಾಡಿಕೊಳ್ಳಬೇಕು ಎಂದು ಒತ್ತಾಯಿಸಿದರು.

ಬೇಡಿಕೆಗಳ ಈಡೇರಿಕೆಗಾಗಿ ಸರ್ಕಾರಕ್ಕೆ ಮೂರು ತಿಂಗಳು ಗಡುವು ನೀಡಲಾಗುವುದು. ಇಲ್ಲದಿದ್ದರೆ ಕಳೆದ 2017ರಲ್ಲಿ ಸ್ವಚ್ಛತಾ ಕಾರ್ಯ ಸ್ಥಗಿತಗೊಳಿಸಿ ಪ್ರತಿಭಟನೆ ನಡೆಸಿದಂತೆ ಹಾಗೂ ಅದಕ್ಕಿಂತ ಹೆಚ್ಚಿನ ರೀತಿಯಲ್ಲಿ ಪ್ರತಿಭಟನೆ ನಡೆಸಲಾಗುವುದು ಎಂದರು.

ಪೌರ ಕಾರ್ಮಿಕರ ಹಿತಕ್ಕಾಗಿ ರಾಜ್ಯ ಪೌರ ಕಾರ್ಮಿಕರ ಸಂಘ ಶ್ರಮಿಸುತ್ತಿದೆ. ಸರ್ಕಾರದೊಂದಿಗೆ ಚರ್ಚಿಸಿ, ವಸತಿಗೃಹ, ಬೆಳಗಿನ ಉಪಹಾರ, ವೇತನ ಹೆಚ್ಚಳ ಸೇರಿದಂತೆ ಅನೇಕ ಪ್ರಯೋಜನಗಳನ್ನು ಕಲ್ಪಿಸಿಕೊಟ್ಟಿದೆ. ಬಲಿಷ್ಠ ಸಂಘಟನೆ ಇದ್ದಾಗ ಸರ್ಕಾರದ ಮೇಲೆ ಒತ್ತಡ ಹೇರಿ ಸೌಲಭ್ಯ ಪಡೆಯಬಹುದು. ಆದ್ದರಿಂದ ಪೌರ ಕಾರ್ಮಿಕರು ಸಂಘಟನೆಗೆ ಶಕ್ತಿ ತುಂಬಬೇಕು ಎಂದರು.

ಇದೇ ಸಂದರ್ಭದಲ್ಲಿ ಸಂಘದ ಕಾರ್ಯಾಧ್ಯಕ್ಷರಾಗಿದ್ದ ದಿವಂಗತ ಮೈಸೂರು ಪೆದ್ದಣ್ಣ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು. ಪೌರ ಕಾರ್ಮಿಕರ ಸಂಘದ ಪದಾಧಿಕಾರಿಗಳು ಹಾಗೂ ವಿವಿಧ ಜಿಲ್ಲೆಗಳಿಂದ ಬಂದ ಪೌರ ಕಾರ್ಮಿಕರ ಪ್ರತಿನಿಧಿಗಳನ್ನು ಸನ್ಮಾನಿಸಲಾಯಿತು.

ರಾಜ್ಯ ಸಂಘದ ಹಿರಿಯ ಉಪಾಧ್ಯಕ್ಷ ಎಲ್.ಎಂ. ಹನುಮಂತಪ್ಪ ಮಾತನಾಡಿ, ದಿ.ಮೈಸೂರು ಪೆದ್ದಣ್ಣ ಅವರು ಸದಾ ಪೌರ ಕಾರ್ಮಿಕರ ಹಿತ ಬಯಸುತ್ತಿದ್ದರು ಎಂದು ಸ್ಮರಿಸಿದರು.

ಸಂಘದ ರಾಜ್ಯ ಸಂಚಾಲಕ ಡಾ.ಕೆ.ಬಿ. ಓಬಳೇಶ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಾಧ್ಯಕ್ಷ ಬಿ. ಹೆಚ್. ವೀರಭದ್ರಪ್ಪ, ಸಫಾಯಿ ಕರ್ಮಚಾರಿಗಳ ಸಂಘದ ಮಾಜಿ ಅಧ್ಯಕ್ಷ ಶ್ರೀರಾಮುಲು, ವಿವಿಧ ಜಿಲ್ಲೆಗಳನ್ನು ಪ್ರತಿನಿಧಿಸಿದ್ದ ಮುನಿರಾಜು, ಶ್ರೀನಿವಾಸ್, ಆರ್.ಸಿ.ಹೆಚ್. ಬಾಬು, ಮಂಡ್ಯ ನಾಗಣ್ಣ, ವಿಜಯ ಗುಂತಾಳ್, ರಾಯಚೂರಿನ ವೆಂಕಟೇಶ್, ಕೋಲಾರದ ಪದ್ಮಾವತಿ, ಬೆಂಗಳೂರಿನ ಜಯಮ್ಮ ರಾಮಚಂದ್ರ, ಸುರೇಶ್ ಬಾಬು ಮತ್ತಿತರರು ಉಪಸ್ಥಿತರಿದ್ದರು.

## ಕುಲಸಚಿವರಾಗಿ ಗಾಯತ್ರಿ


**(1ನೇ ಪುಟದಿಂದ)** ಗಾಯತ್ರಿ ಅವರು ಪಡೆದಿದ್ದು, ಸಂಶೋಧನೆ ಮತ್ತು ಆಡಳಿತಾತ್ಮಕವಾಗಿ ಗುರುತಿಸಿಕೊಂಡಿದ್ದಾರೆ. ಗಾಯತ್ರಿ, ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರೂ ಆಗಿರುವ ಹಿರಿಯ ವಿಜ್ಞಾನಿ ಡಾ.ಟಿ.ಎನ್. ದೇವರಾಜ್ ಅವರ ಧರ್ಮಪತ್ನಿ.

# ಮಲೇಬೆನ್ನೂರಿನ ದೇವಾಲಯಕ್ಕೆ ಹೆಚ್.ಡಿ. ರೇವಣ್ಣ ಭೇಟಿ

ಮಲೇಬೆನ್ನೂರು, ಫೆ.10- ಇಲ್ಲಿನ ಹೊರ ವಲಯದಲ್ಲಿ ನಿರ್ಮಾಣಗೊಂಡು ಲೋಕಾರ್ಪಣೆಗೆ ಸಜ್ಜಾಗುತ್ತಿರುವ ಶ್ರೀ ವೀರಭದ್ರೇಶ್ವರ ದೇವಸ್ಥಾನಕ್ಕೆ ಮಾಜಿ ಸಚಿವ ಹಾಗೂ ಹೊಳೆನರಸೀಪುರದ ಶಾಸಕ ಹೆಚ್.ಡಿ. ರೇವಣ್ಣ ನಿನ್ನೆ ಭೇಟಿ ನೀಡಿದ್ದರು.

ವಿಶಾಲವಾದ ಜಾಗದಲ್ಲಿ ನಿರ್ಮಾಣಗೊಂಡಿರುವ ವೀರಭದ್ರೇಶ್ವರ ದೇವಾಲಯ ಸಮುಚ್ಚಯ ಎಲ್ಲರನ್ನೂ ಕೈ ಬೀಸಿ ಕರೆಯುವಂತಿದೆ. ಸಂಪೂರ್ಣವಾಗಿ ಕಲ್ಲಿನಿಂದಲೇ ನಿರ್ಮಿಸಿರುವ ದೇವಾಲಯದ ಕೆತ್ತನೆ ಕೆಲಸಕ್ಕೆ ರೇವಣ್ಣ ಮೆಚ್ಚುಗೆ ವ್ಯಕ್ತಪಡಿಸಿದರು.

ದೇವಸ್ಥಾನ, ರಾಜಗೋಪುರ, ಗರ್ಭಗುಡಿ, ಧ್ಯಾನ ಮಂದಿರ, ದಾಸೋಹ ಭವನ ನಿರ್ಮಾಣಕ್ಕೆ ಖರ್ಚಾಗಿರುವ ವೆಚ್ಚದ ಬಗ್ಗೆ ದೇವಸ್ಥಾನ ಟ್ರಸ್ಟ್ ಕಮಿಟಿಯ ಬಿ. ಚಿದಾನಂದಪ್ಪ ಅವರಿಂದ



ಮಾಹಿತಿ ಪಡೆದುಕೊಂಡರು.

ದೇವಾಲಯಕ್ಕೆ ಇನ್ನೂ ಸಾಕಷ್ಟು ಅನುದಾನದ ಅವಶ್ಯಕತೆ ಇದ್ದು, ಕೈಲಾದಷ್ಟು ನೆರವು ನೀಡುವುದಾಗಿ ಮತ್ತು ಸರ್ಕಾರದ ಮೇಲೆ ಒತ್ತಡ ಹೇರಿ ಸಮ್ಮಿಶ್ರ ಸರ್ಕಾರ ಬಜೆಟ್ ಘೋಷಣೆ ಮಾಡಿದ 1 ಕೋಟಿ ರೂ. ಅನುದಾನವನ್ನು ಬಿಡುಗಡೆ ಮಾಡಿಸಲು ಪ್ರಯತ್ನಿಸುತ್ತೇನೆಂದು ರೇವಣ್ಣ ಭರವಸೆ ನೀಡಿದರು.

ಬಿ. ಚಿದಾನಂದಪ್ಪ ಅವರು, ಮೇ ತಿಂಗಳಲ್ಲಿ ದೇವಾಲಯದ ಲೋಕಾರ್ಪಣೆ ಸಮಾರಂಭ ಹಮ್ಮಿಕೊಳ್ಳುವ ಉದ್ದೇಶವಿದ್ದು, ತಾವೂ ಆಗಮಿಸುವಂತೆ ರೇವಣ್ಣ ಅವರಿಗೆ ಆಹ್ವಾನ ನೀಡಿದರು.

ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್, ದೇವಸ್ಥಾನ ಟ್ರಸ್ಟ್ ಕಮಿಟಿಯ ಬಿ. ಪಂಚಪ್ಪ, ಬಿ. ನಾಗೇಂದ್ರಪ್ಪ, ಬಿ. ಮಹಾರುದ್ರಪ್ಪ, ಬಿ. ಶಂಭುಲಿಂಗಪ್ಪ, ಬಿ. ನಾಗೇಶ್, ಬಿ. ಉಮಾಶಂಕರ್, ಬಿ. ಮಲ್ಲಿಕಾರ್ಜುನ್, ಬಿ.ವಿ. ರುದ್ರೇಶ್, ಆದಾಪುರ ವಿಜಯಕುಮಾರ್, ಹೊಸಳ್ಳಿ ಕರಿಬಸಪ್ಪ ಮತ್ತಿತರರು ಈ ವೇಳೆ ಹಾಜರಿದ್ದರು.

## ಸೇತುವೆ ಮೇಲಿಂದ ನದಿಗೆ ಉರುಳಿದ ಕಾರು: ಚಾಲಕ ಸಾವು

ದಾವಣಗೆರೆ, ಫೆ.10- ಚಾಲಕನ ನಿಯಂತ್ರಣ ತಪ್ಪಿ ಸೇತುವೆ ಮೇಲಿಂದ ನದಿಗೆ ಕಾರು ಉರುಳಿ ಕೆಳಗೆ ಬಿದ್ದ ಪರಿಣಾಮ ಚಾಲಕ ಗಂಭೀರವಾಗಿ ಗಾಯಗೊಂಡು ಸಾವಿಗೀಡಾಗಿರುವ ಘಟನೆ ಹೊನ್ನಾಳಿ ಪೊಲೀಸ್ ಠಾಣಾ ವ್ಯಾಪ್ತಿಯ ತುಂಗಭದ್ರಾ ನದಿಯ ಹೊಸ ಸೇತುವೆಯಲ್ಲಿ ಇಂದು ನಡೆದಿದೆ. ಹೊನ್ನಾಳಿ ತಾಲ್ಲೂಕಿನ ರಾಂಪುರ ಗ್ರಾಮದ ಹರ್ಷಿತ್ (27) ಸಾವಿಗೀಡಾದ ಕಾರು ಚಾಲಕ.

ಗೊಲ್ಲರಹಳ್ಳಿಯಿಂದ ಹೊನ್ನಾಳಿಗೆ ಬರುವಾಗ ಹೊನ್ನಾಳಿ ಬಳಿಯ ತುಂಗಭದ್ರಾ ನದಿಗೆ ಅಡ್ಡಲಾಗಿ ಕಟ್ಟಿದ್ದ ಸೇತುವೆ ಮೇಲಿಂದ ಕಾರು ಕೆಳಗೆ ಉರುಳಿ ಬಿದ್ದಿದೆ. ಪರಿಣಾಮ ಚಾಲಕ ಹರ್ಷಿತ್ ತೀವ್ರವಾಗಿ ಗಾಯಗೊಂಡಿದ್ದ.

ಸ್ಥಳಕ್ಕಾಗಮಿಸಿದ ಪಿಎಸ್‌ಐ ಬಸನಗೌಡ ಬಿರಾದಾರ ಪರಿಶೀಲನೆ ನಡೆಸಿ, ತಕ್ಷಣವೇ 108 ಆಂಬ್ಯುಲೆನ್ಸ್



ಮೂಲಕ ಹೊನ್ನಾಳಿಯ ಸಾರ್ವಜನಿಕ ಆಸ್ಪತ್ರೆಗೆ ಸಾಗಿಸಿದರೂ ಗಾಯಾಳು ಹರ್ಷಿತ್ ಬದುಕುಳಿದಿಲ್ಲ.

ಚಾಲಕ ಅತಿ ವೇಗವಾಗಿ ಬಂದಿದ್ದೇ ಅಪಘಾತಕ್ಕೆ ಕಾರಣ ಎನ್ನಲಾಗಿದೆ. ಕಾರು ಸಂಪೂರ್ಣ ನಜ್ಜು ಗುಜ್ಜಾಗಿದೆ.

# ದಾವಣಗೆರೆ ವಿವಿ ಹೊರಗುತ್ತಿಗೆ ನೌಕರರ ಅನಿರ್ದಿಷ್ಟಾವಧಿ ಧರಣಿ

ದಾವಣಗೆರೆ, ಫೆ.10- ದಾವಣಗೆರೆ ವಿಶ್ವವಿದ್ಯಾನಿಲಯದ ಹೊರಗುತ್ತಿಗೆ ನೌಕರರನ್ನು ಒಳಗುತ್ತಿಗೆ ನೌಕರರನ್ನಾಗಿ ಪರಿಗಣಿಸಲು ಹಾಗೂ ಸೇವಾ ಭದ್ರತೆ ನೀಡಲು ಆಗ್ರಹಿಸಿ ದಾವಣಗೆರೆ ವಿಶ್ವವಿದ್ಯಾನಿಲಯದ 'ಸಿ' ಮತ್ತು 'ಡಿ' ಗ್ರೂಪ್ ಹೊರಗುತ್ತಿಗೆ ನೌಕರರ ಸಂಘದ ನೇತೃತ್ವದಲ್ಲಿ ಇಲ್ಲಿಗೆ ಸಮೀಪದ ತೋಳಹುಣಸೆಯಲ್ಲಿನ ವಿಶ್ವವಿದ್ಯಾನಿಲಯದ ಮುಖ್ಯ ದ್ವಾರದ ಹತ್ತಿರ ನೌಕರರು ಇಂದು ಅನಿರ್ದಿಷ್ಟಾಧಿ ಧರಣಿ ಕೈಗೊಂಡಿದ್ದಾರೆ.




2009 ರಲ್ಲಿ ಸ್ಥಾಪಿತವಾದ ದಾವಣಗೆರೆ ವಿಶ್ವವಿದ್ಯಾನಿಲಯವು ಇದಕ್ಕೂ ಮುಂಚಿತವಾಗಿ ಕುವೆಂಪು ವಿಶ್ವವಿದ್ಯಾನಿಲಯ ಸ್ನಾತಕೋತ್ತರ ಕೇಂದ್ರವಾಗಿದ್ದಾಗಿನಿಂದಲೂ ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳಲ್ಲಿ ಖಾಲಿ ಇರುವ 'ಸಿ' ಮತ್ತು 'ಡಿ' ಗ್ರೂಪ್ ಖಾಯಂ ಹುದ್ದೆಗಳಿಗೆ ಎದುರಾಗಿ ಅನೇಕ ವರ್ಷಗಳಿಂದ ಹೊರಗುತ್ತಿಗೆ ಆಧಾರದಲ್ಲಿ ನೂರಾರು ನೌಕರರು ಪ್ರಾರಂಭಿಕ ಅತ್ಯಲ್ಪ ವೇತನದಿಂದ ದುಡಿಯುತ್ತಾ ಬಂದಿದ್ದು, ಎಷ್ಟೋ ಜನ ನೌಕರರು ಈ ಹುದ್ದೆಯನ್ನೇ ನಂಬಿಕೊಂಡು ಮಕ್ಕಳ ವಿದ್ಯಾಭ್ಯಾಸ, ಮನೆ ಬಾಡಿಗೆ ಹೀಗೆ ಜೀವನ ಸಾಗಿಸುತ್ತಿದ್ದು, ಕುಟುಂಬಕ್ಕೆ ಆಧಾರ ಸ್ತಂಭವಾಗಿದೆ. ಆದರೆ, ವಿಶ್ವವಿದ್ಯಾನಿಲಯದಲ್ಲಿ ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ಅಧಿಕಾರ ವಹಿಸಿಕೊಂಡ ಹಿಂದಿನ ಎಲ್ಲಾ ಕುಲಪತಿಗಳು, ಕುಲಸಚಿವರುಗಳು ಹೊರಗುತ್ತಿಗೆ ನೌಕರರಿಗೆ ಸೇವಾ ಭದ್ರತೆ ನೀಡುವ ಅನೇಕ ಭರವಸೆಗಳನ್ನು ನೀಡುತ್ತಲೇ ಬಂದಿದ್ದು, ಭರವಸೆಗಳು ಭರಸೆಗಳಾಗಿಯೇ ಉಳಿದಿವೆ ಎಂದು ಪ್ರತಿಭಟನಾಕಾರರು ಅಸಮಾಧಾನ ವ್ಯಕ್ತಪಡಿಸಿದರು.

### ಒಳಗುತ್ತಿಗೆ ನೌಕರರನ್ನಾಗಿ ಪರಿಗಣಿಸಲು ಆಗ್ರಹ

ವಿಶ್ವವಿದ್ಯಾನಿಲಯದಲ್ಲಿ ಹೊರಗುತ್ತಿಗೆ ಪಡೆದ ಏಜೆನ್ಸಿಗಳು, ನೌಕರರಿಗೆ ನೀಡುವ ಇಪಿಎಫ್ ಹಾಗೂ ಇಎಸ್ ಐ ಹಣವನ್ನು ತುಂಬುವಲ್ಲಿ, ವೇತನ ನೀಡುವುದರಲ್ಲಿ ಅನೇಕ ಲೋಪ-ದೋಷಗಳನ್ನು ಮಾಡುತ್ತಾ, ಮನಸೋ ಇಚ್ಚೆ ನೌಕರರನ್ನು ಶೋಷಣೆ ಮಾಡುತ್ತಲೇ ಬಂದಿರುತ್ತವೆ. ಇದರಿಂದ ಹೊರಗುತ್ತಿಗೆ ನೌಕರರಿಗೆ ಸಾಕಷ್ಟು ಆರ್ಥಿಕವಾಗಿ ನಷ್ಟವು ಆಗುತ್ತಿದ್ದು, ನೌಕರರು ಅಭದ್ರತೆಯಿಂದ ಜೀವನ ಸಾಗಿಸುವಂತಾಗಿದೆ ಎಂದು ಅಳಲಿಟ್ಟರು.

'ಸಿ' ಮತ್ತು 'ಡಿ' ಗ್ರೂಪ್ ದರ್ಜೆಯ ಎಲ್ಲಾ ಹೊರಗುತ್ತಿಗೆ ನೌಕರರನ್ನು ಒಳಗುತ್ತಿಗೆ ನೌಕರರನ್ನಾಗಿ ಮಾಡಿಕೊಳ್ಳುವುದರಿಂದ ಪ್ರಸ್ತುತವಾಗಿ ಹೊರಗುತ್ತಿಗೆ ಏಜೆನ್ಸಿಗಳಿಗೆ ವಿಶ್ವವಿದ್ಯಾನಿಲಯದಿಂದ ಭರಿಸಲಾಗುತ್ತಿರುವ ನೌಕರರ ಸೇವಾ ಶುಲ್ಕ ಶೇ. 5ರಷ್ಟು ಹಾಗೂ ಸೇವಾ ತೆರಿಗೆ ಶೇ.18ರಷ್ಟು ಸೇರಿ ಒಟ್ಟು ಶೇ. 23ರಷ್ಟು ಹೆಚ್ಚುವರಿ ಖರ್ಚಿನ ಹಣವು ಉಳಿತಾಯ ಆಗಲಿದ್ದು, ಈ ಉಳಿತಾಯದ ಹಣವನ್ನು ನೇರವಾಗಿ ನೌಕರರ ಮೂಲ ವೇತನಕ್ಕೆ ಸೇರಿಸಿ ಪಾವತಿ ಮಾಡಿದ್ದಲ್ಲಿ ನೌಕರರ ಆರ್ಥಿಕ ಭದ್ರತೆ ಇನ್ನಷ್ಟು ಹೆಚ್ಚಾಗುತ್ತದೆ ಎಂದು ಹೇಳಿದ್ದಾರೆ.

ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿಯೂ ಕೆಲವೇ ತಿಂಗಳುಗಳ ಹಿಂದೆಯಷ್ಟೇ ಹೊರಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದ 4 ಜನ ನೌಕರರನ್ನು ಒಳಗುತ್ತಿಗೆ ಮಾಡಿಕೊಂಡು ಇನ್ನಿತರೆ ನೌಕರರನ್ನು ಕಡೆಗಣಿಸಿರುವ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯದಲ್ಲಿ ಪ್ರಸ್ತುತ ಕೆಲಸ ನಿರ್ವಹಿಸುತ್ತಿರುವ 250 ಜನ ಹೊರಗುತ್ತಿಗೆ ನೌಕರರನ್ನು ಒಳಗುತ್ತಿಗೆ ನೌಕರರನ್ನಾಗಿ ಪರಿಗಣಿಸುವಂತೆ ಒತ್ತಾಯಿಸಿದರು.

ಧರಣಿಯಲ್ಲಿ ಸಂಘದ ಗೌರವಾಧ್ಯಕ್ಷ ಮಂಜುನಾಥ ಕೈದಾಳೆ, ಗೌರವ ಕಾರ್ಯದರ್ಶಿ ಮಂಜುನಾಥ ಕುಕ್ಕವಾಡ, ಉಪಾಧ್ಯಕ್ಷ ಎಲ್.ಹೆಚ್. ಪ್ರಕಾಶ್ ಸೇರಿದಂತೆ ಇತರರು ಭಾಗವಹಿಸಿದ್ದರು.

# ಖೈದಿಗಳಲ್ಲಿ ಶೇ.66 ಪರಿಶಿಷ್ಟರು ಹಿಂದುಳಿದ ವರ್ಗದವರು

ನವದೆಹಲಿ, ಫೆ. 10 - ದೇಶದಲ್ಲಿರುವ 4,78,600 ಖೈದಿಗಳ ಪೈಕಿ ಶೇ.65.90ರಷ್ಟು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಇತರೆ ಹಿಂದುಳಿದ ವರ್ಗಕ್ಕೆ ಸೇರಿದವರು ಎಂದು ಕೇಂದ್ರ ಸರ್ಕಾರ ಸಂಸತ್ತಿಗೆ ತಿಳಿಸಿದೆ.

ಗೃಹ ಖಾತೆ ಅಧೀನ ಸಚಿವ ಜಿ. ಕಿಶನ್ ರೆಡ್ಡಿ ಅವರು ಈ ಬಗ್ಗೆ ವಿವರ ನೀಡಿದ್ದು, ರಾಷ್ಟ್ರೀಯ ಅಪರಾಧ ದಾಖಲೆಗಳ ದಳ (ಎನ್.ಸಿ.ಆರ್‌ಬಿ.) ಡಿಸೆಂಬರ್ 31, 2019ರಂದು ಸಂಗ್ರಹಿಸಿರುವ ಮಾಹಿತಿಯ ಪ್ರಕಾರ ದೇಶದ 3.15 ಲಕ್ಷ ಖೈದಿಗಳು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಇತರೆ ಹಿಂದುಳಿದ ವರ್ಗಕ್ಕೆ ಸೇರಿದವರು ಎಂದಿದ್ದಾರೆ.

ಜೈಲಿನಲ್ಲಿರುವ ಬಹುತೇಕ ಖೈದಿಗಳು ದಲಿತರು ಹಾಗೂ ಮುಸ್ಲಿಮರೇ? ಅವರ ಪುನರ್ವಸತಿ ಹಾಗೂ ಶಿಕ್ಷಣಕ್ಕಾಗಿ ಸರ್ಕಾರ ಕ್ರಮ ತೆಗೆದುಕೊಳ್ಳುತ್ತಿದೆಯೇ? ಎಂದು ರಾಜ್ಯಸಭಾ ಸದಸ್ಯ ಸೈಯದ್ ನಸೀರ್ ಹುಸೇನ್ ಪ್ರಶ್ನಿಸಿದ್ದರು. ಇದಕ್ಕೆ ಉತ್ತರಿಸಿರುವ ರೆಡ್ಡಿ, ಜೈಲಿನಲ್ಲಿರುವ 4,78,600 ಖೈದಿಗಳ ಪೈಕಿ 3,15,409 ಖೈದಿಗಳು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಇತರೆ ಹಿಂದುಳಿದ ವರ್ಗಕ್ಕೆ ಸೇರಿದವರು. 1,26,393 ಕೈದಿಗಳು ಇತರೆ ಗುಂಪಿಗೆ ಸೇರಿವರು ಎಂದು ಹೇಳಿದರು.

ಒಟ್ಟು ಖೈದಿಗಳಲ್ಲಿ 1,62,800 (ಶೇ.34.01) ಇತರೆ ಹಿಂದುಳಿದ ವರ್ಗ, 99,273 (ಶೇ.20.74) ಪರಿಶಿಷ್ಟ ಜಾತಿ ಹಾಗೂ 53,336 (ಶೇ.11.14) ಪರಿಶಿಷ್ಟ ಪಂಗಡಕ್ಕೆ ಸೇರಿದವರು ಎಂದು ರೆಡ್ಡಿ ಹೇಳಿದ್ದಾರೆ.

4,78,600 ಖೈದಿಗಳ ಪೈಕಿ 4,58,687 (ಶೇ.95.83) ಪುರುಷರು ಹಾಗೂ 19,913 (ಶೇ.4.16) ಮಹಿಳೆಯರಾಗಿದ್ದಾರೆ ಎಂದು ಮಾಹಿತಿ ತಿಳಿಸಿದೆ.

19,913 ಮಹಿಳೆಯರ ಪೈಕಿ 6,360 (ಶೇ.31.93) ಇತರೆ ಹಿಂದುಳಿದ ವರ್ಗ, 4,467 (ಶೇ.22.43) ಪರಿಶಿಷ್ಟ ಜಾತಿ ಹಾಗೂ 5,236 (ಶೇ.26.29)ರಷ್ಟು ಜನರು ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿದ್ದಾರೆ ಎಂದು ಮಾಹಿತಿ ನೀಡಲಾಗಿದೆ.

ಉತ್ತರ ಪ್ರದೇಶದಲ್ಲಿ ಅತಿ ಹೆಚ್ಚಿನ 1,01,297 (ಶೇ.21.16)ರಷ್ಟು ಖೈದಿಗಳಿದ್ದಾರೆ. ಮಧ್ಯ ಪ್ರದೇಶದಲ್ಲಿ 44,603 ಹಾಗೂ ಬಿಹಾರದಲ್ಲಿ 39,814 ಖೈದಿಗಳಿದ್ದಾರೆ.

ಖೈದಿಗಳ ಶಿಕ್ಷಣ ಹಾಗೂ ಪುನರ್ವಸತಿ ಕುರಿತು ಹುಸೇನ್ ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವ ರೆಡ್ಡಿ, ಸಂಬಂಧಿಸಿದ ರಾಜ್ಯ ಸರ್ಕಾರಗಳು ಈ ಹೊಣೆ ನಿರ್ವಹಿಸುತ್ತಿವೆ ಎಂದಿದ್ದಾರೆ.

# ಒಡೆದ, ಗೊಂದಲದ ಪಕ್ಷದಿಂದ ಒಳ್ಳೆಯದಾಗದು




ನವದೆಹಲಿ, ಫೆ. 10 – ರಾಜ್ಯಸಭೆ ಹಾಗೂ ಲೋಕಸಭೆಯಲ್ಲಿ ತದ್ವಿರುದ್ಧದ ಹಾದಿ ಹಿಡಿದ ಕಾಂಗ್ರೆಸ್ ಪಕ್ಷವನ್ನು ತರಾಟೆಗೆ ತೆಗೆದುಕೊಂಡಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಈ ರೀತಿಯ ಒಡೆದ ಹಾಗೂ ಗೊಂದಲದ ಕಾಂಗ್ರೆಸ್‌ನಿಂದಾಗಿ ಆ ಪಕ್ಷಕ್ಕೆ ಯಾವುದೇ ಪ್ರಯೋಜನವಿಲ್ಲ ಹಾಗೂ ದೇಶದ ಸಮಸ್ಯೆಗಳಿಗೆ ಪರಿಹಾರವೂ ಸಿಗುವುದಿಲ್ಲ ಎಂದಿದ್ದಾರೆ.

ಕಾಂಗ್ರೆಸ್ ನಿನ್ನೆ ರಾಜ್ಯಸಭೆಯಲ್ಲಿ ರಾಷ್ಟ್ರಪತಿ ಭಾಷಣಕ್ಕೆ ಅಭಿನಂದನೆ ಸಲ್ಲಿಸುವ ನಿಲುವಳಿ ಕುರಿತ ಚರ್ಚೆಯಲ್ಲಿ ಪಾಲ್ಗೊಂಡಿತ್ತು. ಆದರೆ, ಬುಧವಾರದಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಮಾತನಾಡುವಾಗ ಸಭಾತ್ಯಾಗ ಮಾಡಿತ್ತು.

ಈ ಬಗ್ಗೆ ಮಾತನಾಡಿದ ಪ್ರಧಾನಿ, ಆರು ದಶಕಗಳಿಂದ ಆಡಳಿತ ನಡೆಸಿದ ಕಾಂಗ್ರೆಸ್ ಪಕ್ಷದ ಪರಿಸ್ಥಿತಿ ಈಗ ಹೇಗಾಗಿದೆ ಎಂದರೆ ರಾಜ್ಯಸಭಾ ಘಟಕ ಒಂದು ದಿಸೆಯಲ್ಲಿ ನಡೆದರೆ, ಲೋಕಸಭಾ ಘಟಕ ಮತ್ತೊಂದು ದಿಸೆಯಲ್ಲಿ ನಡೆಯುತ್ತಿದೆ ಎಂದಿದ್ದಾರೆ. ಇಂತಹ ಒಡೆದ ಹಾಗೂ ಗೊಂದಲದ ಪಕ್ಷದಿಂದ ಆ ಪಕ್ಷಕ್ಕೆ ಯಾವುದೇ ಪ್ರಯೋಜನವಾಗುವುದಿಲ್ಲ. ದೇಶದ ಸಮಸ್ಯೆಗಳಿಗೂ ಪರಿಹಾರ ದೊರೆಯುವುದಿಲ್ಲ. ಇದಕ್ಕಿಂತ ದುರಾದೃಷ್ಟಕರ ಬೇರೊಂದಿಲ್ಲ ಎಂದು ಮೋದಿ ಹೇಳಿದ್ದಾರೆ.

ಸದನದ ಕಲಾಪಕ್ಕೆ ಕಾಂಗ್ರೆಸ್ ಅಡ್ಡಿಪಡಿಸುತ್ತಿರುವುದು ಯೋಜಿತ ತಂತ್ರಗಾರಿಕೆಯ ಭಾಗವಾಗಿದೆ ಎಂದ ಪ್ರಧಾನಿ, ಜನರು ಸತ್ಯ ನೋಡುವುದನ್ನು ಅದಕ್ಕೆ ಸಹಿಸಲು ಆಗುತ್ತಿಲ್ಲ. ಈ ರೀತಿಯ ಆಟಗಳಿಂದ ಜನರ ವಿಶ್ವಾಸ ಗೆಲ್ಲಲು ಸಾಧ್ಯವಿಲ್ಲ ಎಂದಿದ್ದಾರೆ.

# ಹರಿಹರದಲ್ಲಿ ಇಂದು ಶ್ರೀ ಪುರಂದರ ದಾಸೋತ್ಸವ




ಶ್ರೀ ರಾಘವೇಂದ್ರ ಸ್ವಾಮಿ ಮಠದ ವತಿಯಿಂದ ಶ್ರೀ ಪುರಂದರ ದಾಸೋತ್ಸವ ಕಾರ್ಯಕ್ರಮವು ಇಂದು ನಡೆಯಲಿದೆ ಎಂದು ಶ್ರೀ ಮಠದ ಪ್ರಧಾನ ಅರ್ಚಕ ವರಹಾಚಾರ್ ಸ್ವಾಮಿಗಳು ತಿಳಿಸಿದ್ದಾರೆ.

ಸಂಜೆ 4 ರಿಂದ ಶ್ರೀ ಹರಿಹರೇಶ್ವರ ದೇವಸ್ಥಾನದಲ್ಲಿ ದಾಸರ ಭಜನಾ ಹಾಗೂ ಸಂಜೆ 5 ರಿಂದ ಭವ್ಯ ಶೋಭಾ ಯಾತ್ರೆ ನಡೆಯಲಿದೆ. ಶ್ರೀ ಶಂಕರ ವಿದ್ಯಾಪೀಠದಿಂದ ವೇದ ಘೋಷ ನೆರವೇರಲಿದೆ. ಶೋಭಾಯಾತ್ರೆ ಶ್ರೀ ಹರಿಹರೇಶ್ವರ ದೇವಸ್ಥಾನದಿಂದ ಪ್ರಾರಂಭಗೊಂಡು ಶಿವಮೊಗ್ಗ ರಸ್ತೆ ವೃತ್ತ, ರಾಣಿ ಚೆನ್ನಮ್ಮ ವೃತ್ತ, ಗಾಂಧಿ ವೃತ್ತದ ಮೂಲಕ ಹಳೆ ಪಿ.ಬಿ. ರಸ್ತೆ ಮೂಲಕ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದ ಆವರಣಕ್ಕೆ ಬಂದು ತಲುಪಲಿದೆ. ನಂತರದಲ್ಲಿ ರಥೋತ್ಸವ, ಮಹಾಮಂಗಳಾರತಿ, ಭಜನೆ, ಪ್ರಸಾದ ವಿತರಣೆ ನಡೆಯಲಿದೆ.

# ಸೂರಗೊಂಡನಕೊಪ್ಪ : ನಾಡಿದ್ದು ಸಂತ ಸೇವಾಲಾಲರ ಜಯಂತಿ

ದಾವಣಗೆರೆ, ಫೆ.10- ನ್ಯಾಮತಿ ತಾಲ್ಲೂಕು (ಭಾಯಾಗಡ) ಸೂರಗೊಂಡನ ಕೊಪ್ಪದಲ್ಲಿ ಸಂತ ಸೇವಾಲಾಲ ಜನ್ಮಸ್ಥಾನ ಮಹಾಮಠ ಸಮಿತಿ ವತಿಯಿಂದ ಇದೇ ದಿನಾಂಕ 13, 14 ಹಾಗೂ 15 ರಂದು ಸಂತ ಸೇವಾಲಾಲರ 282ನೇ ಜಯಂತ್ಯುತ್ಸವ ಹಾಗೂ ಜಾತ್ರಾ ಮಹೋತ್ಸವ ಜರುಗಲಿದೆ ಎಂದು ಮಾಜಿ ಸಚಿವರೂ, ಸಮಿತಿ ಅಧ್ಯಕ್ಷರೂ ಆದ ರುದ್ರಪ್ಪ ಮಾನಪ್ಪ ಲಮಾಣಿ ಅವರು ನಿನ್ನೆ ಇಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

### ಸಂತ ಸೇವಾಲಾಲರ ಮ್ಯೂಸಿಯಂ ಶೀಘ್ರ ಸ್ಥಾಪನೆಗೆ ನಿರ್ಧಾರ



ಸೂರಗೊಂಡನಕೊಪ್ಪದಲ್ಲಿ ಸಂತ ಸೇವಾಲಾಲರ ಮ್ಯೂಸಿಯಂ ಸ್ಥಾಪಿಸುವ ಉದ್ದೇಶವಿದೆ ಎಂದು ಮಾಜಿ ಸಚಿವ ರುದ್ರಪ್ಪ ಲಮಾಣಿ ಹೇಳಿದರು. ಇದರೊಟ್ಟಿಗೆ ವಸತಿ ಶಾಲೆ, ಗಾರ್ಮೆಂಟ್ಸ್ ಇನ್ನಿತರೆ ಸಮಾಜೋಪಯೋಗಿ ಅಭಿವೃದ್ಧಿ ಕೇಂದ್ರಗಳನ್ನು ತೆರೆಯಲು ಈಗಾಗಲೇ ಮದ್ಯವರ್ಜನೆ ಕೇಂದ್ರದ ಮೂಲಕ ಮದ್ಯವ್ಯಸನಿಗಳಿಗೆ ತರಬೇತಿ ಹಾಗೂ ಚಿಕಿತ್ಸೆ ನೀಡಲಾಗುತ್ತಿದೆ ಎಂದರು. ತಾಂಡಾಗಳು ಇನ್ನೂ ಸುಧಾರಣೆಯಾಗುತ್ತಿಲ್ಲ. ಕೆಲಸ ಅರಸಿ ಜನ ವಲಸೆ ಹೋಗುತ್ತಿದ್ದಾರೆ. ಯುವ ಪದವೀಧರರಿಗೆ ಉದ್ಯೋಗ ಸಿಗದಂ ತಾಗಿದೆ. ತಾಂಡಾ ಅಭಿವೃದ್ಧಿ ನಿಗಮಕ್ಕೆ ಅನುದಾನ ಕೂಡ ಕಡಿಮೆಯಾಗುತ್ತಿದೆ ಎಂದು ಹೇಳಿದರು.

ಜಾತ್ರಾ ಮಹೋತ್ಸವದ ಅಂಗವಾಗಿ ಯುವಜನ ಉತ್ಸವ, ಸಮುದಾಯದ ಸಮಸ್ಯೆ ಸವಾಲುಗಳು ಕುರಿತು ವೈಚಾರಿಕ ಚಿಂತನೆಯ ತಳಹದಿ ಮೇಲೆ ವಿಚಾರಗೋಷ್ಠಿ ನಡೆಯಲಿದೆ. ಫೆ.13 ರಂದು ಬೆಳಿಗ್ಗೆ ಸಂಪ್ರದಾಯದಂತೆ ತಾಂಡಾಗಳ ಮುಖಂಡರಿಂದ ಕುಂಭಮೇಳ ಕಾಟೇಲುತ್ಸವ ನಡೆಯಲಿದೆ.

ಬೆಳಿಗ್ಗೆ 9 ಕ್ಕೆ ದಾಸೋಹ ಪ್ರಾರಂಭ. ಪೂರ್ವೋತ್ತರ ಬಂಜಾರ ಸಾಧುಸಂತರಿಂದ ಧರ್ಮಸಭೆ , 11 ಕ್ಕೆ ವೇದಿಕೆ ಕಾರ್ಯಕ್ರಮ ಉದ್ಘಾಟನೆಗೊಳ್ಳಲಿದೆ.

ಇದೇ ದಿನಾಂಕ 14 ರಂದು ಬೆಳಗಿನ ಜಾವ 4.30 ಕ್ಕೆ ದೂದಿಯಾ ತಳಾವ್ ತೀರ್ಥದೊಂದಿಗೆ ಶ್ರೀ ಮರಿಯಮ್ಮ ಮತ್ತು ಸಂತ ಸೇವಾಲಾಲ ಮಹಾರಾಜರ ಮಹಾಭಿಷೇಕ, ವಿಶೇಷ ಅಲಂಕಾರ, ಬೆಳಿಗ್ಗೆ 10 ಕ್ಕೆ ವಿಚಾರಗೋಷ್ಠಿ, ನಾಡಿನ ಚಿಂತಕರು, ಸಾಹಿತಿಗಳು, ಹೋರಾಟಗಾರರು, ಕಾನೂನು ತಜ್ಞರು, ಸಮಾಜ ಸುಧಾರಕರು ಭಾಗವಹಿಸಲಿದ್ದಾರೆ ಎಂದರು.

ಮಧ್ಯಾಹ್ನ 3 ಗಂಟೆಗೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು, ಸಚಿವ ಬಿ. ಶ್ರೀರಾಮುಲು ಪುಷ್ಪಾರ್ಚನೆ ಮಾಡಲಿದ್ದಾರೆ. ಸಚಿವ ಬಿ.ಎ. ಬಸವರಾಜ್ ಸಭಾ ಮಂಟಪ ಲೋಕಾರ್ಪಣೆ ಮಾಡಲಿದ್ದಾರೆ. ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ಅಧ್ಯಕ್ಷತೆ ವಹಿಸಲಿದ್ದಾರೆ.

ಉಪಮುಖ್ಯಮಂತ್ರಿಗಳಾದ ಗೋವಿಂದ ಎಂ. ಕಾರಜೋಳ, ಡಾ.ಸಿ.ಎನ್. ಅಶ್ವತ್ಥನಾರಾಯಣ, ಲಕ್ಷ್ಮಣ ಸವದಿ ಸೇರಿದಂತೆ ಸಚಿವರು, ಸಂಸದರು, ಶಾಸಕರು ಜನಪ್ರತಿನಿಧಿಗಳು ಪಾಲ್ಗೊಳ್ಳಲಿದ್ದಾರೆ ಎಂದು ಮಾಹಿತಿ ನೀಡಿದರು. ಇದೇ ದಿನಾಂಕ 15 ರಂದು ಬೆಳಿಗ್ಗೆ 8.45 ಕ್ಕೆ ಮಹಾಭೋಗ್ ನಡೆಯಲಿದ್ದು, ರಾಜ್ಯ, ಅಂತರರಾಜ್ಯ, ದೇಶ-ವಿದೇಶಗಳಿಂದ ಸಂತ ಸೇವಾಲಾಲ್ ಭಕ್ತರು ಆಗಮಿಸಲಿದ್ದಾರೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಸಮಾಜದ ಮುಖಂಡರಾದ ರಾಘವೇಂದ್ರ ನಾಯಕ್, ಎನ್. ಜಯದೇವನಾಯ್ಕ, ಡಿ. ತಾವರ್‍ಯನಾಯ್ಕ, ಮಂಜಾನಾಯ್ಕ, ಕಾಶೀನಾಥ್ ಇನ್ನಿತರರಿದ್ದರು.

# ನಗರದ ಪಂಚ ದೇವಸ್ಥಾನದ ವಾರ್ಷಿಕೋತ್ಸವ ಇಂದಿನಿಂದ

ಪಿ.ಬಿ. ರಸ್ತೆಯಲ್ಲಿರುವ ಪಂಚ ದೇವಸ್ಥಾನಗಳ ವಾರ್ಷಿಕೋತ್ಸವ ವನ್ನು ಇಂದಿನಿಂದ ದಿನಾಂಕ 13 ರವರೆಗೆ ಹಮ್ಮಿಕೊಳ್ಳಲಾಗಿದೆ. ಇಂದು ಬೆಳಿಗ್ಗೆ ಪಂಚ ದೇವರುಗಳಿಗೆ ಪಂಚಾಮೃತ, ತೈಲಾಭಿಷೇಕ, ರುದ್ರಾಭಿ ಷೇಕ ಹಾಗೂ ನವಗ್ರಹ ಶಾಂತಿ ವಿಶೇಷ ಪೂಜೆಗಳು ಹಾಗೂ 9.30 ಕ್ಕೆ ಗಣಹೋಮ ಹಾಗೂ ರುದ್ರಹೋಮ ಹಮ್ಮಿಕೊಳ್ಳಲಾಗಿದೆ. ದಿನಾಂಕ 12ರ ಶುಕ್ರವಾರ ಬೆಳಿಗ್ಗೆ 9.30 ಕ್ಕೆ ಚಂಡಿಹೋಮ ಹಾಗೂ ದಿನಾಂಕ 13 ರ ಶನಿವಾರ ಬೆಳಿಗ್ಗೆ 9 ಗಂಟೆಗೆ ಲಕ್ಷ್ಮಿನರಸಿಂಹಸ್ವಾಮಿ ಹಾಗೂ ಶ್ರೀ ಶನೇಶ್ವರಸ್ವಾಮಿ ಸಹಿತ ನವಗ್ರಹ ಹೋಮ ಹಾಗೂ ತೀರ್ಥ, ಪ್ರಸಾದ ವ್ಯವಸ್ಥೆ ಇದೆ.


## ರಾಜಲಕ್ಷ್ಮಿ ಫಾರ್ಮಾದಲ್ಲಿ ಕೆಲಸ ಮಾಡಲು ಮಹಿಳೆಯರು ಬೇಕಾಗಿದ್ದಾರೆ

ಬಿಲ್ಲಿಂಗ್ ಮಾಡಲು ಮತ್ತು ಸ್ಟಾಕ್ ಚೆಕ್ ಮಾಡಲು

**ಅನುಭವವುಳ್ಳವರು ಮಾತ್ರ**

ಮತ್ತು ಸ್ಟಾಕ್ ತೆಗೆಯುವುದಕ್ಕೆ **Delivery Boys**

ಬೇಕಾಗಿದ್ದಾರೆ. ESI-PF ಸೌಲಭ್ಯವಿರುತ್ತದೆ.

**Address : P.J. Extension, 7th Main, 7th Cross, 2nd Floor, Davangere.**
**Ph. : 96060 48401**



## ನಾಯಿ ಕಳೆದಿದೆ



ಕುತ್ತಿಗೆಯಲ್ಲಿ ಬ್ಲ್ಯೂ ಬೆಲ್ಟ್, ಕಪ್ಪು ಬಣ್ಣದ ಲ್ಯಾಬರ್ ಡಾಗ್ ನಾಯಿ ದಿನಾಂಕ 5.02.2021 ರಂದು (#714 ರಶ್ಮಿನಿಲಯ) ದಾವಣಗೆರೆ ಭೂಮಿಕ ನಗರದಿಂದ ಕಾಣೆಯಾಗಿದ್ದು, ಯಾರಿಗಾದರೂ ಸಿಕ್ಕರೆ ಈ ಕೆಳಗಿನ ಮೊಬೈಲ್‌ಗೆ ಸಂಪರ್ಕಿಸಿದರೆ ಸೂಕ್ತ ಬಹುಮಾನ ಕೊಡಲಾಗುವುದು.

**ಪುಟ್ಟಸ್ವಾಮಿ - 94486 66273**



## ದಾವಣಗೆರೆ ಎಣ್ಣೆ ಸಂಕೀರ್ಣ

**ಎಪಿಎಂಸಿ ರಸ್ತೆ, ದಾವಣಗೆರೆ ಫೋ. : 08192 231332**
**ಕೆ.ಓ.ಎಫ್: ಡಿ.ಓ.ಸಿ. : 2020-21/ ದಿನಾಂಕ : 10.02.21**

### ಪ್ರಕಟಣೆ

ಕರ್ನಾಟಕ ಸಹಕಾರಿ ಎಣ್ಣೆ ಬೀಜ ಬೆಳಗಾರರ ಮಹಾಮಂಡಳಿ ನಿಯಮಿತ, ಬೆಂಗಳೂರು. ಇದರ ಶಾಖೆಯಾಗಿರುವ ದಾವಣಗೆರೆ ಎಣ್ಣೆ ಸಂಕೀರ್ಣ, ಎಪಿಎಂಸಿ ರಸ್ತೆ, ದಾವಣಗೆರೆ, ಈ ಕಛೇರಿಯಲ್ಲಿ ಒಂದು ಬಾರಿ ಉಪಯೋಗಿಸಿರುವ ಸಿಮೆಂಟ್ ಶೀಟ್‌ಗಳನ್ನು ಹೇಗೆ ಇವೆಯೋ ಅದೇ ಸ್ಥಿತಿಯಲ್ಲಿ ಮಾರಾಟ ಮಾಡಲಾಗುವುದು. ಖರೀದಿ ಮಾಡಲು ಆಸಕ್ತಿಯುಳ್ಳವರಿಂದ ಮೊಹರಾದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ನಲ್ಲಿ ಭಾಗವಹಿಸುವ ಖರೀದಿದಾರರು ರೂ. 500/- (ಸೇವಾ ಶುಲ್ಕ ಸೇರಿ) ಗಳನ್ನು ನಗದಾಗಿ ಅಥವಾ ಡಿ.ಡಿ. ಮೂಲಕ "ಕರ್ನಾಟಕ ಸಹಕಾರಿ ಎಣ್ಣೆ ಬೀಜ ಬೆಳೆಗಾರರ ಮಹಾಮಂಡಳಿ ನಿಯಮಿತ" ದಾವಣಗೆರೆಗೆ ಸಂದಾಯವಾಗುವಂತೆ ಪಡೆದು, ಡಿಡಿಯನ್ನು ಅಥವಾ ನಗದನ್ನು ಕಛೇರಿಯ ವೇಳೆಯಲ್ಲಿ ಸಲ್ಲಿಸಿ, ಅರ್ಜಿಯನ್ನು ದಾವಣಗೆರೆಯ ಕೇಂದ್ರದಿಂದ ಪಡೆಯಬಹುದು.

ಮೊಹರಾದ ಟೆಂಡರ್‌ಗಳನ್ನು ದಿ : 18.02.2021ರ ಗುರುವಾರ 11.00 ಘಂಟೆಯೊಳಗೆ ಸಲ್ಲಿಸತಕ್ಕದ್ದು ಮತ್ತು ಅದೇ ದಿನ ಮಧ್ಯಾಹ್ನ 2.00 ಘಂಟೆಗೆ ಹಾಜರಿರುವ ಟೆಂಡರ್‌ದಾರರ ಸಮ್ಮುಖದಲ್ಲಿ ತೆರೆಯಲಾಗುವುದು.

ಟೆಂಡರ್ ಪ್ರಕ್ರಿಯೆಯನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಮಹಾಮಂಡಳಿ ಹೊಂದಿರುತ್ತದೆ.

**ಸಹಿ/- ಜೆ. ರಮೇಶ್**, ವ್ಯವಸ್ಥಾಪಕರು
ಕೆ.ಓ.ಎಫ್., ದಾವಣಗೆರೆ. ಫೋ. : **95918 12040**



## ಸಾರ್ವಜನಿಕ ಪ್ರಕಟಣೆಗಾಗಿ

**ಈ ಕೆಳಕಂಡ ಪ್ರಕಟಣೆದಾರನಾದ ನಾನು ಈ ಮುಖೇನ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ,** ನಾನು ಈ ಕೆಳಕಂಡ ಷೆಡ್ಯೂಲ್ ಸೊತ್ತನ್ನು ಕ್ರಯಕ್ಕೆ ಪಡೆಯಲು ಇಚ್ಚಿಸಿದ್ದು ಅದಕ್ಕೆ ಪೂರಕವಾಗಿ ದಿ.9.02.2021 ರಂದು ದಾವಣಗೆರೆ ಸಿಟಿ ವಾಸಿಯಾದ **ಶ್ರೀಮತಿ ಸಜೀಲಾಬಾನು ಕೋಂ ಶಕೀಲ್ ಅಹಮದ್** ವಾಸ : 6ನೇ ಅಡ್ಡರಸ್ತೆ, ಶ್ರೀ ದೇವರಾಜ್ ಅರಸ್ ಬಡಾವಣೆ, ದಾವಣಗೆರೆ ಕ್ರಯದ ಕರಾರು ಪತ್ರವನ್ನು ಮಾಡಿಕೊಂಡಿದ್ದು, ಸದರಿಯವರಿ **ಶ್ರೀ ಎಂ.ಶಿವಲಿಂಗಸ್ವಾಮಿ ಬಿನ್ ಎಂ.ನಾಗೇಂದ್ರಯ್ಯ** ಇವರಿಂದ ಕ್ರಯಕ್ಕೆ ಪಡೆದಿದ್ದು ಸದರಿ ನೋಂದಣಿ ಕ್ರಯಪತ್ರ ಸಂಖ್ಯೆ 2915 ದಿ.9.7.1999. ಸದರಿ ಕ್ರಯ ಪತ್ರದಲ್ಲಿನ ಷೆಡ್ಯೂಲ್‌ನಲ್ಲಿ ಕಾಣಿಸಲಾದ ಅಲಿನೇಷನ್ ದಿನಾಂಕ 16.12.1985ರ ಬದಲಾಗಿ 13.12.1985 ಎಂದು ಕೈ ತಪ್ಪಿನಿಂದ ನಮೂದಾಗಿದ್ದು ಸದರಿ ವಿಚಾರವು ಇತ್ತೀಚಿಗಷ್ಟೇ ಗೊತ್ತಾಗಿದ್ದು, ಆ ಕೂಡಲೇ ಸದರಿ ಎಂ.ಶಿವಲಿಂಗಸ್ವಾಮಿ ಇವರನ್ನು ಕಂಡು ಸದರಿ ತಪ್ಪನ್ನು ಸರಿಪಡಿಸಲು ಪ್ರಯತ್ನಿಸಲಾಗಿ ಸದರಿ ಪ್ರಯತ್ನವು ವಿಫಲವಾದ ಕಾರಣ ಸದರಿ ದಾಖಲೆಯಲ್ಲಿ ಅಲಿನೇಷನ್ ದಿನಾಂಕ ಹೊರತುಪಡಿಸಿ ಉಳಿದೆಲ್ಲಾ ವಿಚಾರವು ಸರಿ ಇದೆಯೆಂದು ದಾಖಲೆ ಸಹಿತ ರುಜುವಾತು ಆಗಿರುತ್ತದೆ. ಆ ಕಾರಣ ಸದರಿ ವಿಚಾರವನ್ನು ಈ ಸಾರ್ವಜನಿಕ ಪ್ರಕಟಣೆ ಮುಖೇನ ಧೃಢೀಕರಿಸಿಕೊಂಡಿರುತ್ತೇನೆ.

**ಷೆಡ್ಯೂಲ್**

ದಾವಣಗೆರೆ ಸಬ್-ರಿಜಿಸ್ಟ್ರಾರ್‌ರವರ ಆಫೀಸ್ ಅಧಿಕಾರಕ್ಕೆ ಒಳಪಟ್ಟ ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಕುಂದುವಾಡ ಗ್ರಾಮದ ರಿ.ಸರ್ವೆ ನಂ. 199/2,ವಿಸ್ತೀರ್ಣ ಎಕರೆ-2, ಗುಂಟೆ-30 ವುಳ್ಳ ಜಮೀನು ವಾಸೋಪಯೋಗಕ್ಕೆ ಅಲಿನೇಷನ್ ಆಗಿದ್ದು, ಸದರಿ ಅಲಿನೇಷನ್ ನಂ.ALNSR 178/85-86 ದಿ.16.12.1985 ಮತ್ತು ಅಕ್ಕ-ಪಕ್ಕದ ಸರ್ವೆ ನಂಬರ್ ಕೂಡಿಸಿ ಕಂಬೈನ್ಡ್ ಲೇಔಟ್ ಪ್ಲಾನ್ ತಯಾರಿಸಿ, ಸದರಿ ಪ್ಲಾನ್ ಅಪ್ರೂವಲ್ ಆಗಿ ನಾನು ಕ್ರಯಕ್ಕೆ ಪಡೆದ ಸೈಟ್ ನಂ.127, ಹಳೇ ಡೋರ್ ನಂ.989, ಖಾತಾ ನಂ. 260, ಅಸೆಸ್ಮೆಂಟ್ ನಂ.199/2/127, # 989, ಆಸ್ತಿ ನಂ.989/127, ಅಳತೆ 30x40ವುಳ್ಳ ಖಾಲಿ ಸೈಟಿಗೆ ಚಕ್ಕುಬಂದಿ: ಪೂರ್ವಕ್ಕೆ : ರಸ್ತೆ, ಪಶ್ಚಿಮಕ್ಕೆ : ನಿವೇಶನ ನಂ.146, ಉತ್ತರಕ್ಕೆ : ನಿವೇಶನ ನಂ.128, ದಕ್ಷಿಣಕ್ಕೆ : ನಿವೇಶನ ನಂ.126

ಪ್ರಕಟಣೆದಾರರ ಸಹಿ/-: **ಕೆ.ಎಂ.ಮನೋಜ್ S/o ಹೆಚ್.ಕೆ. ಮಂಜುನಾಥ್**
**R/o # 3509/107, 108, ಕುಂದುವಾಡ ರಸ್ತೆ, ಬಸವೇಶ್ವರ ನಗರ, ದಾವಣಗೆರೆ.**
**ಮೊ: 94482 33056**



## ಹಾರ್ದಿಕ ಶುಭಾಶಯಗಳು



ದಾವಣಗೆರೆ ತಾಲ್ಲೂಕು
ನೇರ್ಲಿಗಿ ಗ್ರಾಮ ಪಂಚಾಯ್ತಿ
ಉಪಾಧ್ಯಕ್ಷರಾಗಿ ಅವಿರೋಧವಾಗಿ
ಆಯ್ಕೆಯಾಗಿರುವ
ಸ್ನೇಹಿತರಾದ ಈಚಘಟ್ಟದ
**ಶ್ರೀ ಬಿ.ಶಿವಾನಂದಪ್ಪ**
ಅವರಿಗೆ
ಹಾರ್ದಿಕ ಶುಭಾಶಯಗಳು.

ಇವರ ಅಧಿಕಾರವಧಿಯಲ್ಲಿ ನೇರ್ಲಿಗೆ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಹೆಚ್ಚಿನ ಅಭಿವೃದ್ಧಿ ಕಾರ್ಯಗಳು ನೆರವೇರಲಿ ಎಂದು ಆಶಿಸುತ್ತೇವೆ.

**ಕೊಗ್ಗನೂರು ಸಣ್ಣಗೌಡ್ರು ಕರಿಬಸಪ್ಪ**
ಮತ್ತು ಕುಟುಂಬ ವರ್ಗ
ಶ್ರೀಮತಿ ಶ್ರೀ ಜಿತೇಂದ್ರ ಕುಮಾರ್ ಬೇತೂರ್
ದಾವಣಗೆರೆ


# ಜಿಗಳಿ ಗ್ರಾ.ಪಂ.ಗೆ. ಕರಿಯಮ್ಮ ಅಧ್ಯಕ್ಷೆ, ಬೇವಿನಹಳ್ಳಿ ಆನಂದಗೌಡ ಉಪಾಧ್ಯಕ್ಷ



ಮಲೇಬೆನ್ನೂರು, ಫೆ. 10 - ಜಿಗಳಿ ಗ್ರಾ.ಪಂ. ನೂತನ ಅಧ್ಯಕ್ಷರಾಗಿ ಶ್ರೀಮತಿ ಕರಿಯಮ್ಮ ಚಂದ್ರಶೇಖರ್ ಮತ್ತು ಉಪಾಧ್ಯಕ್ಷರಾಗಿ ಜಿ. ಬೇವಿನಹಳ್ಳಿಯ ಹೆಚ್. ಆನಂದಗೌಡ ಅವರು ಬುಧವಾರ ನಡೆದ ಚುನಾವಣೆಯಲ್ಲಿ ಆಯ್ಕೆಯಾಗಿದ್ದಾರೆ.

ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಕರಿಯಮ್ಮ 11 ಮತಗಳನ್ನು ಪಡೆದು ಆಯ್ಕೆಯಾದರೆ, ಜಿ.ಬೇವಿನಹಳ್ಳಿ ಜಯಮ್ಮ ಬಿ.ಕೆ. ರಂಗನಾಥ್ 7 ಮತಗಳನ್ನು ಪಡೆದು ಪರಾಭವಗೊಂಡರು.

ಉಪಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಆನಂದಗೌಡ 10 ಮತಗಳನ್ನು ಪಡೆದು ಆಯ್ಕೆಯಾದರೆ, ಜಿಗಳಿಯ ಎನ್.ಎಂ. ಪಾಟೀಲ್ 7 ಮತಗಳನ್ನು ಪಡೆದು ಪರಾಭವಗೊಂಡರು. ಇಲ್ಲಿ ಒಂದು ಮತ ತಿರಸ್ಕೃತಗೊಂಡಿತು. ಒಟ್ಟು 18 ಸದಸ್ಯರಿದ್ದಾರೆ. ಅಧ್ಯಕ್ಷ ಸ್ಥಾನ ಸಾಮಾನ್ಯ ಮಹಿಳೆಗೆ ಮತ್ತು ಉಪಾಧ್ಯಕ್ಷ ಸ್ಥಾನ ಸಾಮಾನ್ಯ ವರ್ಗಕ್ಕೆ ಮೀಸಲಾಗಿತ್ತು. ತೋಟಗಾರಿಕೆ ಇಲಾಖೆಯ ರೇಖಾ ಅವರು ಚುನಾವಣಾಧಿಕಾರಿಯಾಗಿದ್ದರು. ಪಿಡಿಓ ದಾಸರ ರವಿ, ಕಾರ್ಯದರ್ಶಿ ಶೇಖರ್‌ನಾಯ್ಕ, ಬಿಲ್‌ಕಲೆಕ್ಟರ್ ಬಿ. ಮೌನೇಶ್ ಮತ್ತಿತರರು ಹಾಜರಿದ್ದರು.

# ಉಕ್ಕಡಗಾತ್ರಿ ಗ್ರಾ.ಪಂ. ಅಧ್ಯಕ್ಷರಾಗಿ ಕರಿಬಸಮ್ಮ, ಉಪಾಧ್ಯಕ್ಷರಾಗಿ ಸಾಕಮ್ಮ



ಮಲೇಬೆನ್ನೂರು, ಫೆ. 10 - ಉಕ್ಕಡಗಾತ್ರಿ ಗ್ರಾಮ ಪಂಚಾಯಿತಿ ನೂತನ ಅಧ್ಯಕ್ಷರಾಗಿ ನಂದಿಗುಡಿ ಗ್ರಾಮದ ಶ್ರೀಮತಿ ಕರಿಬಸಮ್ಮ ಬಸಪ್ಪ ಮತ್ತು ಉಪಾಧ್ಯಕ್ಷರಾಗಿ ಉಕ್ಕಡಗಾತ್ರಿಯ ಶ್ರೀಮತಿ ಸಾಕಮ್ಮ ದೇವೇಂದ್ರಪ್ಪ ಅವರು ಬುಧವಾರ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಅಧ್ಯಕ್ಷ ಸ್ಥಾನ ಎಸ್ಸಿ ಮತ್ತು ಉಪಾಧ್ಯಕ್ಷ ಸ್ಥಾನ ಬಿಸಿಎಂ 'ಎ' ಮಳಿಗೆ ಮೀಸಲಾಗಿತ್ತು. ಅಕ್ಷರ ದಾಸೋಹದ ಸಹಾಯಕ ನಿರ್ದೇಶಕ ರಾಮಕೃಷ್ಣ ಚುನಾವಣಾಧಿಕಾರಿಯಾಗಿದ್ದರು. ಪಿಡಿಓ ಜಿ.ಆರ್. ಸುನೀಲ್ ಹಾಜರಿದ್ದರು.

# ಕೊಕ್ಕನೂರು ಗ್ರಾ.ಪಂ. ಅಧ್ಯಕ್ಷರಾಗಿ ನಿಂಗನಗೌಡ, ಉಪಾಧ್ಯಕ್ಷರಾಗಿ ವಸಂತಮ್ಮ



ಮಲೇಬೆನ್ನೂರು, ಫೆ. 10 - ಕೊಕ್ಕನೂರು ಗ್ರಾ.ಪಂ. ಅಧ್ಯಕ್ಷರಾಗಿ ಓ.ಸಿ. ನಿಂಗನಗೌಡ ಮತ್ತು ಉಪಾಧ್ಯಕ್ಷರಾಗಿ ಜಿ.ಟಿ. ಕಟ್ಟೆಯ ಶ್ರೀಮತಿ ವಸಂತಮ್ಮ ಮಲ್ಲೇಶ್ ಅವರು ಬುಧವಾರ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಓ. ಬಸವನಗೌಡರ ತಮ್ಮನ ಮಗ ನಿಂಗನಗೌಡ 12 ಮತಗಳನ್ನು ಪಡೆದು ಆಯ್ಕೆಯಾದರೆ, ಹಳ್ಳಿಹಾಳ್ ಗ್ರಾಮದ ಹೆಚ್.ಎನ್. ಬಸವನಗೌಡ 9 ಮತಗಳನ್ನು ಪಡೆದು ಪರಾಭವಗೊಂಡರು.

ಉಪಾಧ್ಯಕ್ಷ ಸ್ಥಾನಕ್ಕೆ ವಸಂತಮ್ಮ ಮಾತ್ರ ನಾಮಪತ್ರ ಸಲ್ಲಿಸಿದ್ದರಿಂದ ಅವರು ಅವಿರೋಧವಾಗಿ ಆಯ್ಕೆಯಾದರು. ಅಧ್ಯಕ್ಷ ಸ್ಥಾನ ಸಾಮಾನ್ಯ ಮತ್ತು ಉಪಾಧ್ಯಕ್ಷ ಸ್ಥಾನ ಎಸ್ಸಿ ಮಹಿಳೆಗೆ ಮೀಸಲಾಗಿತ್ತು.

ನೂತನ ಅಧ್ಯಕ್ಷರನ್ನು ಮಾಜಿ ಶಾಸಕ ಬಿ.ಪಿ. ಹರೀಶ್, ಬಿಜೆಪಿ ಜಿಲ್ಲಾಧ್ಯಕ್ಷ ಹನಗವಾಡಿ ವೀರೇಶ್, ಕಾಡಾ ಸದಸ್ಯ ಗೋವಿನಹಾಳ್ ರಾಜಣ್ಣ, ದಿಶಾ ಕಮಿಟಿ ಸದಸ್ಯ ಐರಣಿ ಅಣ್ಣಪ್ಪ, ಜಿ.ಪಿ. ಹನುಮಗೌಡ ಮತ್ತಿತರರು ಅಭಿನಂದಿಸಿದರು.

# ಕುಂಬಳೂರು ಗ್ರಾಮ ಪಂಚಾಯ್ತಿ ಅಧ್ಯಕ್ಷರಾಗಿ ಲೀಲಾ ಶಿವಕುಮಾರ್




ಮಲೇಬೆನ್ನೂರು, ಫೆ. 10 - ಕುಂಬಳೂರು ಗ್ರಾ.ಪಂ. ಅಧ್ಯಕ್ಷರಾಗಿ ಶ್ರೀಮತಿ ಲೀಲಾ ಶಿವಕುಮಾರ್ ಮತ್ತು ಉಪಾಧ್ಯಕ್ಷರಾಗಿ ಎ.ಕೆ. ಹನುಮಂತಪ್ಪ ಅವರು ಸೋಮವಾರ ಆಯ್ಕೆಯಾಗಿದ್ದಾರೆ.

ಅಧ್ಯಕ್ಷ-ಉಪಾಧ್ಯಕ್ಷ ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಲೀಲಾ ಶಿವಕುಮಾರ್ 10 ಮತಗಳನ್ನು ಪಡೆದು ಆಯ್ಕೆಯಾದರೆ, ನಿಟ್ಟೂರಿನ ಶ್ರೀಮತಿ ವನಿತಾ ವಿಲಾಸ್ ಅವರು 8 ಮತಗಳನ್ನು ಪಡೆದು ಪರಾಭವಗೊಂಡರು.

ಉಪಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಎ.ಕೆ. ಹನುಮಂತಪ್ಪ 12 ಮತಗಳನ್ನು ಪಡೆದು ಆಯ್ಕೆಯಾದರೆ, ನಿಟ್ಟೂರಿನ ಶ್ರೀಮತಿ ಚಂದ್ರಮ್ಮ ಮಂಜಪ್ಪ ಅವರು 6 ಮತಗಳನ್ನು ಪಡೆದು ವಿಫಲರಾದರು. ಅಧ್ಯಕ್ಷ ಸ್ಥಾನ ಸಾಮಾನ್ಯ ಮಹಿಳೆಗೆ ಮತ್ತು ಉಪಾಧ್ಯಕ್ಷ ಸ್ಥಾನ ಎಸ್ಸಿಗೆ ಮೀಸಲಾಗಿತ್ತು.

ಎಪಿಎಂಸಿ ಕಾರ್ಯದರ್ಶಿ ವಿದ್ಯಾಶ್ರೀ ಚುನಾವಣಾಧಿಕಾರಿಯಾಗಿದ್ದರು. ಪಿಡಿಓ ಆರ್.ಕೆ. ಮೂರ್ತಿ ಹಾಜರಿದ್ದರು. ಅಂಗವಿಕಲ ಮಹಿಳೆ ಈ ಗ್ರಾ.ಪಂ.ನಲ್ಲಿ ಅಧ್ಯಕ್ಷರಾಗಿ ಆಯ್ಕೆಯಾಗಿರುವುದು ಇದೇ ಮೊದಲು.

# ಯಲವಟ್ಟಿಗೆ ಮಲ್ಲಿಕಾರ್ಜುನಪ್ಪ ಅಧ್ಯಕ್ಷ, ಉಪಾಧ್ಯಕ್ಷರಾಗಿ ಹೀರಾನಾಯ್ಕ



ಮಲೇಬೆನ್ನೂರು, ಫೆ. 10 - ಯಲವಟ್ಟಿ ಗ್ರಾ.ಪಂ. ಅಧ್ಯಕ್ಷರಾಗಿ ಕಮಲಾಪುರದ ಮಲ್ಲಿಕಾರ್ಜುನಪ್ಪ ಬಾವಿಕಟ್ಟಿ ಮತ್ತು ಉಪಾಧ್ಯಕ್ಷರಾಗಿ ಯಲವಟ್ಟಿಯ ಹೀರಾನಾಯ್ಕ ಅವರು ಬುಧವಾರ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಅಧ್ಯಕ್ಷ ಸ್ಥಾನ ಸಾಮಾನ್ಯ ಮತ್ತು ಉಪಾಧ್ಯಕ್ಷ ಸ್ಥಾನ ಎಸ್ಸಿಗೆ ಮೀಸಲಾಗಿತ್ತು. ಚುನಾವಣಾಧಿಕಾರಿಯಾಗಿ ಶಶಿಧರ್ ಕಾರ್ಯನಿರ್ವಹಿಸಿದರು. ಪಿಡಿಓ ರಾಮನಗೌಡ, ಬಿಲ್ ಕಲೆಕ್ಟರ್ ಪವನ್ ಹಾಜರಿದ್ದರು.

# ಕಾನೂನು ಪರಿಣಿತರ ಜೊತೆ ಚರ್ಚೆ

**(1ನೇ ಪುಟದಿಂದ)** ಎಂಬ ನಿಟ್ಟಿನಲ್ಲಿ ಮಠಾಧೀಶರ ನೇತೃತ್ವದಲ್ಲಿ ಹೋರಾಟಗಳು ನಡೆಯುತ್ತಿವೆ. ಎಸ್.ಟಿ. ಮೀಸಲಾತಿ ಪ್ರಮಾಣವನ್ನು ಶೇ.7.5ಕ್ಕೆ ಹೆಚ್ಚಿಸುವಂತೆ ನಾಯಕ ಸಮಾಜ ಒತ್ತಾಯಿಸುತ್ತಿದೆ. ಅಷ್ಟೇ ಅಲ್ಲದೆ ಇದೀಗ ಒಕ್ಕಲಿಗರು ಸೇರಿದಂತೆ ಇತರೆ ಸಮುದಾಯಗಳಿಂದಲೂ ಮೀಸಲಾತಿ ಕೂಗು ಕೇಳಿಬರುತ್ತಿದೆ.

# ಸರಳವಾಗಿ ಮರಳು ಸಿಗಲು ಶೀಘ್ರದಲ್ಲೇ ಹೊಸ ನೀತಿ

**(1ನೇ ಪುಟದಿಂದ)** ಹೀಗಾಗಿಯೇ ನಿಯಮಗಳನ್ನು ಸರಳಗೊಳಿಸಿದ್ದೇವೆ. ಹಳ್ಳ, ಉಸುಕು ಮತ್ತು ನಿಕ್ಷೇಪಗಳಲ್ಲಿ ಮರಳನ್ನು ಮಾತ್ರ ತೆಗೆಯಲು ಅವಕಾಶ ಸಿಗಲಿದೆ ಎಂದು ವಿವರಿಸಿದರು.

ಸಣ್ಣ ರೈತರು, ಜನಸಾಮಾನ್ಯರಿಗೆ ಮರಳು ಸಿಗುತ್ತಿರಲಿಲ್ಲ. ಗ್ರಾಮೀಣ ಭಾಗದಲ್ಲಿ ಆಶ್ರಯ ಮನೆಗಳಿಗೂ ಸಿಗುತ್ತಿರಲಿಲ್ಲ. ಇಲ್ಲಿಯವರೆಗೆ ಎಲ್ಲದಕ್ಕೂ ಕಡಿವಾಣವಿತ್ತು. ಇದನ್ನು ತಪ್ಪಿಸುವ ಉದ್ದೇಶದಿಂದ ಎತ್ತಿನಗಾಡಿ, ಟ್ರ್ಯಾಕ್ಟರ್‌ಗಳಲ್ಲಿ ತರಲು ಅವಕಾಶ ನೀಡಲಾಗುವುದೆಂದು ವಿವರಿಸಿದರು.

ಮರಳು ಗಣಿಗಾರಿಕೆಗೆ ಬ್ಲಾಕ್‌ಗಳನ್ನು ಗುರುತಿಸಿ ಹರಾಜಿನ ಮೂಲಕ ಗುತ್ತಿಗೆ ನೀಡಿರುವ ಪ್ರದೇಶ ಹೊರತುಪಡಿಸಿ ಹಳ್ಳ, ತೊರೆಗಳಲ್ಲಿ ಸ್ಥಳ ಬಳಕೆಗೆ ದ್ವಿಚಕ್ರ ವಾಹನ, ಕತ್ತೆ, ಬಂಡಿ, ಟ್ರ್ಯಾಕ್ಟರ್‌ಗಳಲ್ಲಿ ಕೊಂಡೊಯ್ಯುವ ಬಡವರು, ರೈತರಿಗೆ ಪರವಾನಗಿ, ರಾಯಲ್ಟಿಯಿಂದ ವಿನಾಯಿತಿ ನೀಡಲಾಗುವುದು. ಆದರೆ, ಇದನ್ನೇ ಸಂಗ್ರಹಿಸಿ ಲಾರಿ, ಟಿಪ್ಪರ್‌ಗಳಲ್ಲಿ ಬೇರೆಡೆ ಸಾಗಣೆ, ಮಾರಾಟ ಮಾಡುವುದಕ್ಕೆ ಅವಕಾಶವಿಲ್ಲ ಎಂದು ಸ್ಪಷ್ಟಪಡಿಸಿದರು.

ಮಹಾರಾಷ್ಟ್ರದಲ್ಲಿ ಎಲ್ಲದಕ್ಕೂ ಎಫ್‌ಐಆರ್ ಹಾಕುತ್ತಿದ್ದರು. ಗಾಡಿ, ಬೈಕ್, ಕತ್ತೆಗಳಲ್ಲಿ ಸಾಗಿಸಿದರೂ ಎಫ್‌ಐಆರ್ ಹಾಕಿರುವ ನಿದರ್ಶನಗಳಿವೆ. ಆದರೆ, ಇಲ್ಲಿ ಅಂತವುಗಳಿಗೆ ಅವಕಾಶ ನೀಡಬಾರದೆಂಬ ಚಿಂತನೆ ಇದೆ. ಈಗ ಸುಲಭವಾಗಿ ಬಳಸಿಕೊಳ್ಳಲು ಅವಕಾಶ ಮಾಡಿಕೊಡುತ್ತೇವೆ ಎಂದು ಹೇಳಿದರು.

ರಾಜ್ಯದಲ್ಲಿ ಪ್ರಸ್ತುತ ಮೂರು ಸಮಿತಿಗಳನ್ನು ರಚಿಸಿದ್ದೇವೆ. ಆಂಧ್ರಪ್ರದೇಶಕ್ಕೆ ಒಂದು ಸಮಿತಿಯು ಅಲ್ಲಿನ ನೀತಿಯ ಬಗ್ಗೆ ಅಧ್ಯಯನ ಮಾಡಲಿದೆ. ನಂತರ ಅಲ್ಲಿನ ನೀತಿಯ ಬಗ್ಗೆ ವರದಿ ನೀಡಲಿದೆ ಎಂದರು.

ಜನಸಾಮಾನ್ಯರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಗಣಿ ನೀತಿಗಳನ್ನು ಸರಳೀಕರಣಗೊಳಿಸುತ್ತೇವೆ. ಇಲಾಖೆಯಿಂದ ಪ್ರಸ್ತುತ 3700 ಕೋಟಿ ರಾಜಸ್ವ ಸಂಗ್ರಹದ ಗುರಿ ಇಟ್ಟುಕೊಳ್ಳಲಾಗಿತ್ತು. ಆದಾಯ ಮತ್ತಷ್ಟು ಹೆಚ್ಚಿಸುವ ಬಗ್ಗೆ ನಿರ್ಧರಿಸಿದ್ದೇವೆ ಎಂದು ತಿಳಿಸಿದರು.

ಸ್ಥಗಿತಗೊಂಡಿರುವ ಗಣಿಗಳನ್ನು ಪುನರಾರಂಭ ಮಾಡುವ ಬಗ್ಗೆಯೂ ಚರ್ಚೆ ನಡೆಸಲಾಗಿದೆ. ಈಗಾಗಲೇ ಜಿಲ್ಲಾವಾರು ಮಾಹಿತಿ ನೀಡುವಂತೆ ಭೂ ವಿಜ್ಞಾನ ಅಧಿಕಾರಿಗಳಿಗೆ ಸೂಚನೆ ಕೊಟ್ಟಿರುವುದಾಗಿ ಮತ್ತೊಂದು ಪ್ರಶ್ನೆಗೆ ಉತ್ತರಿಸಿದರು.

ಏಕಗವಾಕ್ಷಿ ಪದ್ಧತಿಯಡಿ ಎಲ್ಲವನ್ನೂ ತರುತ್ತೇವೆ. ಅರಣ್ಯ, ಕಂದಾಯ ಮತ್ತಿತರೆ ಇಲಾಖೆಗಳನ್ನು ಒಟ್ಟಿಗೆ ಸೇರಿಸಿ ಗಣಿ ಸಮಸ್ಯೆಗೆ ಸಂಬಂಧಿಸಿದ ಸಮಸ್ಯೆಯನ್ನು ಪರಿಹರಿಸುತ್ತೇವೆ ಎಂದರು.

ಗಣಿ ಇಲಾಖೆಯಲ್ಲಿ ಸಾವಿರಾರು ಪ್ರಕರಣಗಳಿವೆ. ಎಲ್ಲವನ್ನೂ ಪರಿಶೀಲನೆ ಮಾಡಿ ತ್ವರಿತವಾಗಿ ವಿಲೇವಾರಿ ಮಾಡುವ ಬಗ್ಗೆ ಚರ್ಚೆ ನಡೆದಿದೆ. ಗಣಿ ಅದಾಲತ್ ಜಾರಿಗೆ ತರುತ್ತೇವೆ. ಈ ಅದಾಲತ್ ಮೂಲಕ ನನೆಗುದಿಗೆ ಬಿದ್ದಿರುವ ಅರ್ಜಿಗಳನ್ನು ಇತ್ಯರ್ಥ ಮಾಡಲು ತೀರ್ಮಾನಿಸಲಾಗಿದೆ ಎಂದು ಸ್ಪಷ್ಟನೆ ನೀಡಿದರು.

ಶಿವಮೊಗ್ಗ ಸ್ಫೋಟ ಪ್ರಕರಣದ ತನಿಖೆ ಮುಂದುವರೆದಿದೆ. ಈಗಾಗಲೇ ನಾಲ್ಕು ಪ್ರಕರಣಗಳನ್ನು ದಾಖಲಿಸಲಾಗಿದೆ.

ಜಿಲೆಟಿನ್ ಪೂರೈಸಿದವರ ಮೇಲೂ ಎಫ್ ಐಆರ್ ಹಾಕಲಾಗಿದೆ. ಅಕ್ರಮಕ್ಕೆ ಅವಕಾಶ ಕೊಟ್ಟವರ ಜೊತೆಗೆ ಅಧಿಕಾರಿಗಳ ಮೇಲೂ ತನಿಖೆ ಮುಂದುವರೆದಿದೆ. ತಪ್ಪು ಮಾಡಿದ್ದರೆ ಕ್ರಮ ಆಗಲಿದೆ. ತಪ್ಪು ಮಾಡದವರಿಗೆ ಶಿಕ್ಷೆಯಾಗಬಾರದು ಎಂಬುದು ನಮ್ಮ ಕಳಕಳಿ. ವಿಳಂಬವಾದರೂ ಸರಿಯಾಗಿ ತನಿಖೆ ನಡೆಸುತ್ತೇವೆ ಎಂದರು.

ಅಧಿಕಾರಿಗಳ ಮೇಲೆ ಲೋಕಾಯುಕ್ತ ತನಿಖೆ ವಿಚಾರವಾಗಿ ಪ್ರತಿಕ್ರಿಯೆ ನೀಡಿದ ಸಚಿವರು, ಗಣಿಗಾರಿಕೆ ಅಧಿಕಾರಿಗಳ ಮೇಲೆ ಆರೋಪ ಪ್ರಕರಣ ದಾಖಲಾಗಿರುವುದು ನನ್ನ ಗಮನಕ್ಕೆ ಬಂದಿದೆ. ನಾನು ಇತ್ತೀಚೆಗಷ್ಟೇ ಇಲಾಖೆ ವಹಿಸಿಕೊಂಡಿದ್ದೇನೆ. ಆದರ ಬಗ್ಗೆ ಹೆಚ್ಚಿನ ಗಮನಹರಿಸುತ್ತೇನೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.


ಈಗಿನ ಕಾಲದಲ್ಲಿ ಒಂದು ಕ್ರಶರ್ ಹಾಕಬೇಕೆಂದರೆ 10 ಕೋಟಿ ಬೇಕು. ನಾವು ಅದಕ್ಕೆಕಡಿವಾಣ ಹಾಕಿದರೆ ಕಷ್ಟ. ಅವರು ಬಂಡವಾಳ ಹಾಕಿದ್ದು ನಷ್ಟವಾಗದಂತೆ ನೋಡಿಕೊಳ್ಳಬೇಕು. ಅದಕ್ಕೆ ಪರಿಹಾರ ಹುಡುಕಬೇಕು. ಆ ನಿಟ್ಟಿನಲ್ಲಿ ನಾವು ಯೋಚಿಸುತ್ತಿದ್ದೇವೆ ಎಂದು ಹೇಳಿದರು.

## ಕೃಷಿ ಕಾಯ್ದೆ : ರೈಲು ತಡೆ

**(1ನೇ ಪುಟದಿಂದ)** ತಿಳಿಸಲಾಗಿದೆ.

ಕಾಶ್ಮೀರದ ಪುಲ್ವಾಮಾ ಉಗ್ರವಾದಿ ದಾಳಿಯಲ್ಲಿ ಫೆಬ್ರವರಿ 14, 2019ರಂದು ಹುತಾತ್ಮರಾದ 40 ಸಿ.ಆರ್.ಪಿ.ಎಫ್. ಸಿಬ್ಬಂದಿಯ ಬಲಿದಾನಕ್ಕೆ ನಮಿಸಲು ಫೆ.14ರಂದು ಮೇಣದ ದೀಪಗಳ ಮೆರವಣಿಗೆ ಹಾಗೂ ಪಂಜಿನ ಮೆರವಣಿಗೆ ಸೇರಿದಂತೆ ಹಲವು ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು ಎಂದು ಸಂಘಟನೆಯ ನಾಯಕ ದರ್ಶನ್ ಪಾಲ್ ತಿಳಿಸಿದ್ದಾರೆ.

ಸ್ವಾತಂತ್ರ್ಯ ಪೂರ್ವದಲ್ಲಿ ಹಿರಿಯ ರೈತ ನಾಯಕರಾಗಿದ್ದ ಸರ್ ಛೋಟು ರಾಮ್ ಅವರ ಜನ್ಮದಿನಾಚರಣೆಯಾದ ಫೆಬ್ರವರಿ 16ರಂದು ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು ಎಂದೂ ಅವರು ತಿಳಿಸಿದ್ದಾರೆ.



## ಅನ್ನದಾತ-ಜೀವದಾತ

ಕಲಿಯುಗವಿದು ಕಲಿಯುಗ....
ಮಣ್ಣಲಿ ಬೆಳೆದ ಅನ್ನವ ತಿಂದು ತೇಗಿದ ಯಾವುದೇ ಸರ್ಕಾರ,
ಅದೇ ಮಣ್ಣಿನ ಒಡೆಯ ರೈತನ ಬಾಯಿಗೆ ಮಣ್ಣಾಕಿ ಮೆರೆಯುತಿಹುದು.

ದೇಶದ ಬೆನ್ನೆಲುವೆಂಬ ಕಿರೀಟವನಿಟ್ಟು,
ರೈತನ ಬೆನ್ನೆಲುಬೇ ಮುರಿದು, ದೇಶದ ಬುಡಕ್ಕೆ ಬೆಂಕಿಯನಿಟ್ಟು,
ಆತನ ಶಾಪಕ್ಕೆ, ನಿಟ್ಟುಸಿರಿಗೆ ಆಕ್ರೋಶಕ್ಕೆ ಗುರಿಯಾಗಿಹುದು.

ಗಂಟಲಲಿ ಇಳಿಸಿದ ಅನ್ನಕ್ಕೆ ಕಾರಣರಾದವರ ಗಂಟಲಿಗೆ
ಹಗ್ಗವ ಬಿಗಿದು, ನೇಣಿಗೆ ಕಾರಣವಾಗಿ ಮೆರೆಯುತಿಹುದು.
ರಾಮ ರಾಜ್ಯದಲಿ ಇದೆಂತಾ ರಾವಣರಾಜ್ಯವಾಗಿಹುದು,
ಇಂತಹ ಢೋಂಗಿಯರಿಗೆ ಧಿಕ್ಕಾರ.

ಮೊದಲು ಮತಕ್ಕೆ ಭಿಕ್ಷುಕರಂತೆ ನಟಿಸಿ, ನಂತರ ಭಕ್ತರಾಗಿ
ಖಾವಿಯ ಬಲದೊಳು ಖಾಕಿಯನ್ನುಪಯೋಗಿಸಿ
ಬಡವನ ಬಡೆದು ತಿನ್ನೋ ಭಂಡರಿಗೆ ಧಿಕ್ಕಾರ.

ಬ್ರಿಟೀಷರಿಗೂ ಈ ವೇಷಧಾರಿಗಳಿಗೂ ವ್ಯತ್ಯಾಸವಿಹುದು.
ಅನ್ನದಾತನೆಂದರೆ-ಅನ್ನದಾನಿ, ಜೀವದಾನಿ,
ಅಂತವನ ಜೀವವನ್ನೇ ಹಿಂಡುತ್ತಿರುವ ಭ್ರಷ್ಟರಿಗೆ ಧಿಕ್ಕಾರ.

ಅನ್ನದಾತನ ರಕ್ತವನ್ನೀರಿ, ಕೆಂಪು ಕೋಟೆಯ ಮೇಲೆ
ಧ್ವಜವನ್ನೇರಿಸಿದರೆ, ಬುನಾದಿ ಭೂತಾಯಿ ಮೆಚ್ಚಳು.
ಕಾಣುವ ದೇವರು-ರೈತನ ಕಾಲೆಳೆದು,
ಕಾಣದ ದೇವರ ಪಾದ ಸ್ಪರ್ಷಿಸುವ ಮೌಢ್ಯತೆಗೆ ಧಿಕ್ಕಾರ.

ರೈತನ ತಾಳ್ಮೆಯಕಟ್ಟೆ ಹೊಡೆದರೆ, ಭೂ ತೆರೆದಂತೆ
ಭೂ ಕಂಪಿಸಲಿ, ತನ್ನ ಗರ್ಭದ ಜ್ವಾಲೆಯಲಿ ಇಂತಹ
ವಿಷಜಂತುಗಳನ್ನು ಸ್ಪರ್ಷಿಸಲಿ.

ಇಂದೇ ಭೂತಾಯಿ, ಗಂಗೆ, ವಾಯು, ಸೂರ್ಯರೆಲ್ಲಾ ಒಂದಾಗಿ
ಅನ್ನದಾತನಿಗೆ ಆಶೀರ್ವದಿಸಲಿ, ರೈತನಿಗೆ ನ್ಯಾಯ ಸಿಗಲಿ.
ನ್ಯಾಯ, ಧರ್ಮದ ದಿನಗಳು ಮತ್ತೆ ಮರುಕಳಿಸಲಿ
ಸುವರ್ಣಯುಗದ ಕಹಳೆ ಮತ್ತೆ ಮೊಳಗಲಿ.

- ನೀಮಾ ಡಿ.ಆರ್
ಇಂಗ್ಲಿಷ್ ಉಪನ್ಯಾಸಕರು, ದಾವಣಗೆರೆ.

## ರಾಗಿ ಖರೀದಿ ಕೇಂದ್ರ ಪ್ರಾರಂಭ



**(1ನೇ ಪುಟದಿಂದ)** ರೂ. ಒಂದು ಚೀಲಕ್ಕೆ 22 ರೂ. ಸೇರಿದಂತೆ 3317 ರೂಪಾಯಿಗಳನ್ನು ಪಾವತಿಸಲಾಗುವುದು. ಅಲ್ಲದೆ ರೈತರ ಬೆಳೆಗಳನ್ನು ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ವ್ಯಾಪಾರ, ವಹಿವಾಟು ಮಾಡಿದರೆ ಅಭಿವೃದ್ಧಿ ಸಾಧ್ಯ ಎಂದರು.

ಈ ಸಂದರ್ಭದಲ್ಲಿ ಎಪಿಎಂಸಿ ಉಪಾಧ್ಯಕ್ಷ ಗುರುಮೂರ್ತಿ, ಸದಸ್ಯರಾದ ಹನುಮಂತಪ್ಪ, ಶ್ರೀಶೈಲಾಚಾರಿ, ಗೋವಿಂದಪ್ಪ, ಖರೀದಿ ಕೇಂದ್ರದ ವ್ಯವಸ್ಥಾಪಕ ಶಂಕರ್, ಆಹಾರ ಇಲಾಖೆಯ ಶಿವಪ್ರಕಾಶ್ ಉಪಸ್ಥಿತರಿದ್ದರು.

## ಸಮಾವೇಶದ ನಂತರವೂ ಧರಣಿ

**(1ನೇ ಪುಟದಿಂದ)** ವಿಜಯಾನಂದ ಕಾಶಪ್ಪನವರ ಮಾತನಾಡಿ, ಇಂದು ನಡೆದ ಸಭೆಯಲ್ಲಿ ಇಬ್ಬರು ಸಚಿವರು ಮೀಸಲಾತಿ ಕೊಡಲು ಶ್ರಮಿಸುತ್ತೇವೆ ಎಂದಿದ್ದಾರೆ. ಸಮಾವೇಶದ ಪೂರ್ವದಲ್ಲಿ ಮೀಸಲಾತಿ ಘೋಷಿಸಬೇಕು. ಇಲ್ಲದಿದ್ದರೆ ಆಮರಣಾಂತ ಉಪವಾಸ ನಡೆಸುತ್ತೇವೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಹರಿಹರ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದ ಜಗದ್ಗುರು ಶ್ರೀ ವಚನಾನಂದ ಸ್ವಾಮೀಜಿ, ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಮತ್ತಿತರರು ಉಪಸ್ಥಿತರಿದ್ದರು.

## ಶುಲ್ಕ ಕಡಿತ ನೀತಿ ವಾಪಸ್ ಪಡೆಯದಿದ್ದರೆ ಹೋರಾಟ

**(1ನೇ ಪುಟದಿಂದ)** ಸಿಬ್ಬಂದಿಗಳಿಗೆ ಅನುದಾನ ನೀಡಬೇಕು. ಸರ್ಕಾರದ ಇಂತಹ ಏಕಾಏಕಿ ನಿರ್ಧಾರಕ್ಕೆ ನಾವು ಮಣಿಯುವುದಿಲ್ಲ ಎಂದು ಸ್ಪಷ್ಟಪಡಿಸಿದೆ.

ಈ ಹೋರಾಟಕ್ಕೆ ಆಡಳಿತ ಪಕ್ಷದ ವಿಧಾನ ಪರಿಷತ್ ಸದಸ್ಯ ಪುಟ್ಟಣ್ಣ ಕೈಜೋಡಿಸಿದ್ದಾರೆ. ಅಷ್ಟೇ ಅಲ್ಲ ಅವರು ಸಚಿವ ಸುರೇಶ್ ಕುಮಾರ್ ವಿರುದ್ಧ ಹರಿಹಾಯ್ದಿದ್ದಾರೆ.

ಸುರೇಶ್‌ಕುಮಾರ್ ಕೋವಿಡ್ ಸಮಯದಲ್ಲಿ ಶಿಕ್ಷಕರಿಗೆ ನೀಡಿದ ಕೊಡುಗೆ ಏನು? ನಿಮಗೆ ಆತ್ಮಸಾಕ್ಷಿ ಇದ್ದರೆ, 20 ಜನರಿಗೆ ಕೆಲಸ ಕೊಟ್ಟು, ಸಂಬಳ ಕೊಡಿ ನೋಡೋಣ. ಕೊರೊನಾ ಸಂಕಷ್ಟ ಕಾಲದಲ್ಲಿ ಶಿಕ್ಷಣ ಸಂಸ್ಥೆಗಳಿಗೆ ಯಾವ ರೀತಿ ಸಹಾಯ ಮಾಡಿದ್ದೀರಿ? ಎಂದು ಪ್ರಶ್ನಿಸಿದ್ದಾರೆ.

ನಮ್ಮ ಸಂಸ್ಥೆಗಳ ವಿರುದ್ಧ ಪೋಷಕರನ್ನು ಎತ್ತಿಕಟ್ಟುವ ಕೆಲಸ ಮಾಡುತ್ತೀರಾ? ಇಂತಹ ಎಡಬಿಡಂಗಿ ವ್ಯಕ್ತಿಯನ್ನು ನೋಡಿಲ್ಲ. ಒಂದು ಕೈಗಾರಿಕಾ ಸ್ಥಾಪನೆಗೆ ಏನೆಲ್ಲ ಅನುಕೂಲ ಮಾಡಿಕೊಡುತ್ತೀರಿ. ಅದೇ ರೀತಿ ನಮ್ಮ ಸಂಸ್ಥೆಗಳಿಗೂ ಸಹಾಯ ಮಾಡಿದ್ದೀರಾ? ಎಂದು ಪ್ರಶ್ನಿಸಿದ್ದಾರೆ.

ಖಾಸಗಿ ಶಿಕ್ಷಣ ಸಂಸ್ಥೆಗಳ ಹೋರಾಟದಲ್ಲಿ ನಾನೇ ಮುಂಚೂಣಿಯಲ್ಲಿ ನಿಂತುಕೊಳ್ಳುವುದಾಗಿ ತಿಳಿಸಿದ್ದಾರೆ.

ಪಕ್ಷದ ಶಾಸಕ ಪುಟ್ಟಣ್ಣಯ್ಯ ಅವರ ಹೇಳಿಕೆಗೆ ಕಿಡಿಕಾರಿರುವ ಸಚಿವ ಸುರೇಶ್‌ಕುಮಾರ್, ಅವರ ವಿರುದ್ಧ ಮುಖ್ಯಮಂತ್ರಿಗಳಿಗೆ, ಪಕ್ಷದ ವರಿಷ್ಠರಿಗೆ ದೂರು ನೀಡುತ್ತೇನೆ ಎಂದಿದ್ದಾರೆ.

ಅವರ ಹೇಳಿಕೆ ಅವರ ವ್ಯಕ್ತಿತ್ವವನ್ನು ತೋರಿಸುತ್ತದೆ. ಬಾಯಿಗೆ ಬಂದಂತೆ ಮಾತನಾಡುವುದಲ್ಲ. ಏನೇ ಇದ್ದರೂ ಕುಳಿತು ಚರ್ಚಿಸಬೇಕು. ನಾವು-ನೀವು ಒಂದು ಪಕ್ಷದ ಸೂರಿನಲ್ಲಿದ್ದೇವೆ. ಅದನ್ನು ಅರ್ಥ ಮಾಡಿಕೊಂಡು ಕೆಲಸ ಮಾಡಬೇಕೆಂದು ತಿಳಿ ಹೇಳಿದ್ದಾರೆ.

## ಕೋವಿಶೀಲ್ಡ್ ಲಸಿಕೆ ಪಡೆದ ಐಜಿಪಿ

**(1ನೇ ಪುಟದಿಂದ)** ಪತ್ರಕರ್ತರೊಂದಿಗೆ ಮಾತನಾಡಿದ ಐಜಿಪಿ ರವಿ, ಅನೇಕ ಹಿರಿಯ ವಿಜ್ಞಾನಿಗಳು ಹೇಳುವ ರೀತಿ, ಲಸಿಕೆ ತೆಗೆದುಕೊಳ್ಳುವುದು ಉತ್ತಮ. ಯಾವುದೇ ಸಂಶಯ ಇಲ್ಲದೇ ಲಸಿಕೆ ಪಡೆಯಿರಿ. ಪೊಲೀಸ್ ಇಲಾಖೆಯ ಕಟ್ಟ ಕಡೆಯ ಸಿಬ್ಬಂದಿಯವರೆಗೂ ಎಲ್ಲರೂ ಲಸಿಕೆ ಪಡೆಯಿರಿ ಎಂದು ಕರೆ ನೀಡಿದರು.

ನಾನೂ ಈಗ ಚಿಗಟೇರಿ ಆಸ್ಪತ್ರೆಗೆ ಬಂದು ಕೋವಿಶೀಲ್ಡ್ ಲಸಿಕೆ ಪಡೆದಿದ್ದೇನೆ. ಜಿಲ್ಲಾಧಿಕಾರಿ ಬೀಳಗಿ ಹಾಗೂ ಎಸ್ಪಿ ಹನುಮಂತರಾಯ, ಜಿಲ್ಲಾ ವೈದ್ಯಾಧಿಕಾರಿ ಡಾ. ನಾಗರಾಜ್ ಸೇರಿದಂತೆ ಹಲವರು ಈಗಾಗಲೇ ಲಸಿಕೆ ಪಡೆದಿದ್ದಾರೆ ಎಂದವರು ಇದೇ ಸಂದರ್ಭದಲ್ಲಿ ಹೇಳಿದರು.

ಈ ಸಂದರ್ಭದಲ್ಲಿ ಮಾತನಾಡಿದ ಎಸ್ಪಿ ಹನುಮಂತರಾಯ, ಲಸಿಕೆ ಸುರಕ್ಷಿತವಾಗಿದ್ದು, ಎಲ್ಲರೂ ಲಸಿಕೆ ಪಡೆಯಬೇಕು. ಲಸಿಕೆ ಸ್ವಯಂ ಪ್ರೇರಿತವಾದರೂ, ಅದನ್ನು ಪಡೆದರೆ ಕೊರೊನಾ ವೈರಸ್ ಎದುರಿಸಲು ಸಾಧ್ಯವಾಗಲಿದೆ. ಹೀಗಾಗಿ ಜಿಲ್ಲೆಯಲ್ಲಿರುವ ಎಲ್ಲಾ 1,500 ಪೊಲೀಸರು ಲಸಿಕೆ ಪಡೆಯಬೇಕು ಎಂದು ಕಿವಿಮಾತು ಹೇಳಿದರು.

ಪೊಲೀಸ್ ಸಿಬ್ಬಂದಿ ಬಂದೋಬಸ್ತ್‌ನಲ್ಲಿದ್ದರು. ಹರಿಹರದಲ್ಲಿ ನಡೆದ ಕಾರ್ಯಕ್ರಮದಲ್ಲಿ ತೊಡಗಿಕೊಂಡಿದ್ದರು. ಇನ್ನು ಮುಂದೆ ಹೆಚ್ಚಿನ ಸಂಖ್ಯೆಯಲ್ಲಿ ಲಸಿಕೆ ಪಡೆಯಲಿದ್ದಾರೆ ಎಂದು ತಿಳಿಸಿದರು.

ಲಸಿಕೆ ಪಡೆದುಕೊಂಡ ವ್ಯಕ್ತಿಯಿಂದ ವ್ಯಕ್ತಿಗೆ ಬೇರೆ ಪರಿಣಾಮವಿರುತ್ತದೆ. ಆದರೆ, ಲಸಿಕೆ ನಂತರ ನಾನು ಯಾವುದೇ ಅಡ್ಡ ಪರಿಣಾಮ ಎದುರಿಸಿಲ್ಲ. ಜಿಲ್ಲಾಧಿಕಾರಿಗಳಿಗೂ ಯಾವುದೇ ಅಡ್ಡ ಪರಿಣಾಮವಾಗಿಲ್ಲ ಎಂದು ಕೇಳಿದ್ದೇನೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಐಜಿಪಿ ರವಿ ಅವರ ಜೊತೆಗೆ ಕೆ.ಟಿ.ಜೆ. ನಗರದ ಮುಖ್ಯಪೇದೆ ಸುರೇಶ್ ಬಾಬು ಅವರೂ ಲಸಿಕೆ ಪಡೆದರು.

ಈ ಸಂದರ್ಭದಲ್ಲಿ ಜಿಲ್ಲಾ ವೈದ್ಯಾಧಿಕಾರಿ ಡಾ. ನಾಗರಾಜ್, ಜಿಲ್ಲಾ ಸರ್ಜನ್ ಡಾ. ಜಯಪ್ರಕಾಶ್, ಆರ್.ಎಂ.ಒ. ಮಂಜುನಾಥ ಪಾಟೀಲ್ ಮತ್ತಿತರರು ಉಪಸ್ಥಿತರಿದ್ದರು.

### ಜಗಳೂರಿನಲ್ಲಿ ಜಿಲೆಟಿನ್ ಕುರಿತು ತನಿಖೆ

ಜಗಳೂರಿನಲ್ಲಿ ಜಿಲೆಟಿನ್ ಸಂಗ್ರಹಣಾ ಪ್ರಕ್ರಿಯೆಯಲ್ಲಿ ಲೋಪಗಳಿರುವುದು ಕಂಡು ಬಂದಿದ್ದು ಈ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ ತಿಳಿಸಿದ್ದಾರೆ.

ಈ ಬಗ್ಗೆ ಶಿವಮೊಗ್ಗ ಹಾಗೂ ದಾವಣಗೆರೆ ಜಿಲ್ಲೆಗಳೆರಡರಲ್ಲೂ ತನಿಖೆ ನಡೆಸಲಾಗುತ್ತಿದೆ ಎಂದೂ ಅವರು ಹೇಳಿದ್ದಾರೆ.

ಇತ್ತೀಚೆಗೆ ಪತ್ತೆಯಾದ ಲೆಕ್ಕವಿಲ್ಲದ 1.47 ಕೋಟಿ ರೂ.ಗಳ ಬಗ್ಗೆ ಸಕ್ಷಮ ಪ್ರಾಧಿಕಾರವಾದ ಆದಾಯ ತೆರಿಗೆ ಇಲಾಖೆಗೆ ತಿಳಿಸಲಾಗಿದೆ. ಅವರು ಮುಂದಿನ ಕ್ರಮ ತೆಗೆದುಕೊಳ್ಳುತ್ತಿದ್ದಾರೆ ಎಂದವರು ಮತ್ತೊಂದು ಪ್ರಶ್ನೆಗೆ ಉತ್ತರಿಸಿದ್ದಾರೆ.

## ಜೆ.ಪಿ. ನಾರಾಯಣಸ್ವಾಮಿ ಪ್ರತಿಷ್ಠಾನದ ಜಿಲ್ಲಾ ಸಮಿತಿಗೆ ಆಯ್ಕೆ

ದಾವಣಗೆರೆ, ಫೆ.10- ಶ್ರೀ ಜೆ.ಪಿ. ನಾರಾಯಣಸ್ವಾಮಿ ಪ್ರತಿಷ್ಠಾನ (ಬೆಂಗಳೂರು) ದ ಜಿಲ್ಲಾ ಸಮಿತಿಗೆ ಆಯ್ಕೆ ಮಾಡಲಾಗಿದೆ.

ಜಿಲ್ಲಾ ಗೌರವ ಸಂಚಾಲಕರಾಗಿ ಹೆಚ್. ಶಂಕರ್ ಹಾಗೂ ಈ. ದೇವೇಂದ್ರಪ್ಪ, ಜಿಲ್ಲಾ ಮುಖ್ಯ ಸಂಚಾಲಕರಾಗಿ ಎಸ್. ಭರಮಪ್ಪ, ಜಿಲ್ಲಾ ಉಪಮುಖ್ಯ ಸಂಚಾಲಕರು (ಆಡಳಿತ) ರವೀಂದ್ರ ಸುವರ್ಣ, ಜಿಲ್ಲಾ ಉಪಮುಖ್ಯ ಸಂಚಾಲಕರು (ಸಂಘಟನೆ) ಹೆಚ್.ಎಸ್. ಮಹಾಬಲೇಶ್, ಜಿಲ್ಲಾ ಉಪಮುಖ್ಯ ಸಂಚಾಲಕರು (ಮಹಿಳಾ) ಪೂವಿ, ಜಿಲ್ಲಾ ಉಪಮುಖ್ಯ ಸಂಚಾಲಕರು (ಯುವ ಸಂಘಟನೆ) ಈ. ರಾಜಣ್ಣ ಜಿಲ್ಲಾ ಸಂಚಾಲಕರಾಗಿ ಕೆ.ಎಲ್. ರಾಜಶೇಖರ್, ಲಕ್ಷ್ಮಣ, ಜಿ. ಗಂಗಾಧರ್ ಆಯ್ಕೆಯಾಗಿದ್ದಾರೆ.

ತಾಲ್ಲೂಕು ಮುಖ್ಯ ಸಂಚಾಲಕರು ಚನ್ನಗಿರಿ-ಟಿ. ತಿಪ್ಪೇಸ್ವಾಮಿ, ದಾವಣಗೆರೆ- ಅಂಜನಪ್ಪ, ಹರಿಹರ-ಜಿ. ಕೃಷ್ಣಮೂರ್ತಿ, ಜಗಳೂರು-ಈ. ಎನ್. ಪ್ರಕಾಶ್, ನ್ಯಾಮತಿ-ಲೋಕೇಶ್, ಹೊನ್ನಾಳಿಯ ಸಂಚಾಲಕರಾಗಿ ಶೇಖರಪ್ಪ ಆಯ್ಕೆಯಾಗಿದ್ದಾರೆ.


**ಜಮೀನು ಮಾರಾಟಕ್ಕಿದೆ**
ಹರಪನಹಳ್ಳಿ ತಾಲ್ಲೂಕು ಅರಸೀಕೆರೆ ಹೋಬಳಿ ಹಿರೇಮೇಗಳಗೆರೆ ಗ್ರಾಮದಲ್ಲಿ 5.53 ಮತ್ತು 6.55 ಎಕರೆ ಅಕ್ಕ ಪಕ್ಕ ಇರುವ ಒಟ್ಟು ವಿಸ್ತೀರ್ಣ 12.08 ಎಕರೆ. ಅಕ್ಕ ಪಕ್ಕದಲ್ಲಿ ರಸ್ತೆ, 3 ಬೋರ್‌ಗಳಿವೆ. ದಾವಣಗೆರೆಯಿಂದ 10 ಕಿ.ಮೀ. ಹತ್ತಿರದಲ್ಲಿದೆ.
ಬೂಸ್ನೂರು ಕಿರಣ್ (ಏಜೆಂಟ್)
98440 63409, 97315 63409

**ಮನೆಗಳು ಮಾರಾಟಕ್ಕಿವೆ**
1) 40×60 North ಮೂರು ಬೆಡ್ ರೂಂ. ಕುವೆಂಪು ಬಡಾವಣೆಯಲ್ಲಿ, 2) 40×60 West, 2 ಬೆಡ್ ರೂಂ. ಸಿದ್ದವೀರಪ್ಪ ಬಡಾವಣೆಯಲ್ಲಿ, 3) 30×50 West ಹೈಟೆಕ್ ಲೇ ಔಟ್‌ನಲ್ಲಿ.
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166, 12110

**ಸಂಪರ್ಕಿಸಿ**
ಹೋಟೆಲ್‌ನಲ್ಲಿ ಕಾಫಿಬಾರ್, ಗೋಬಿ ಮಂಚೂರಿ, ಪಾನಿಪೂರಿ ಮತ್ತು ಬಿರಿಯಾನಿ ಮಾಡುವುದಕ್ಕೆ ಪಾಯಿಂಟ್ ಕೊಡಲಾಗುತ್ತದೆ. ಮಾಡಲು ಇಚ್ಛಿಸುವರು ಸಂಪರ್ಕಿಸಿ
98443 50220

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿ ಕೆಲಸಕ್ಕೆ 18 ರಿಂದ 30 ವರ್ಷದೊಳಗಿನ ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಗ್ರಾಮಾಂತರದ ಅಭ್ಯರ್ಥಿಗಳಿಗೆ ಊಟ, ವಸತಿ ಸೌಲಭ್ಯವಿದೆ.
ಸಂಪರ್ಕಿಸಿ : 98442-94446

**ಬೇಕಾಗಿದ್ದಾರೆ**
ಕಾವೇರಿ ಫಾರ್ಮದಲ್ಲಿ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ. ಎಸ್ಸೆಸ್ಸೆಲ್ಸಿ ಅಥವಾ ಪಿಯುಸಿ.
ವಿಳಾಸ : ಕಾವೇರಿ ಫಾರ್ಮ
ಚೇತನ ಹೋಟೆಲ್ ಹತ್ತಿರ, ದಾವಣಗೆರೆ-577004.

**2 BHK ಮನೆ ಬಾಡಿಗೆಗೆ ಇದೆ**
ಪೂರ್ವ ಬಾಗಿಲು, ದಕ್ಷಿಣಕ್ಕೆ ರಸ್ತೆ, ಅಶೋಕ ನಗರ, 1ನೇ ಕ್ರಾಸ್, ಬಲಭಾಗ ಯರಗುಂಟಿ, ಹೆಚ್.ಪಿ ಗ್ಯಾಸ್ ಗೋಡೌನ್ ಎದುರು, ಕೊಂಡಜ್ಜಿ ರಸ್ತೆ, ದಾವಣಗೆರೆ.
ಮೊ: 88841 67704

**TUITIONS FOR**
1st to 9th, Diploma & BE., with Notes
ಸಿಂಚನ ಅಕಾಡೆಮಿ
SBI ATM ಹತ್ತಿರ,
ರಾಂ & ಕೋ. ಸರ್ಕಲ್ ದಾವಣಗೆರೆ.
85532 78258, 88614 45913

**ಶ್ರೀ ಕಾಮಾಕ್ಷಿ ಸ್ವರ್ಣ ಉಳಿತಾಯ ಯೋಜನೆ**
7ನೇ ಡ್ರಾ ನಂಬರ್
ನಂಬರ್ 299
Baby 'ANVITHA'
ಅತ್ಯುತ್ತಮ ಆಭರಣಕ್ಕಾಗಿ ಇಂದೇ ಭೇಟಿ ಕೊಡಿ:
ರಾಯ್ಕರ್ ಜ್ಯುವೆಲರಿ ವರ್ಕ್ಸ್ ಅಂಡ್ ಜೆಮ್ಸ್
ಶ್ರೇಷ್ಠ ಜಾತಿಯ ಅದೃಷ್ಟ ಹರಳುಗಳ, ರುದ್ರಾಕ್ಷಿಗಳ ಆಗರ
8ನೇ ಮೇನ್, ಚರ್ಚ್ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ-2. ಫೋನ್ : 08192-252589

**ಕರ್ನಾಟಕ ಗೃಹ ಮಂಡಳಿಯಲ್ಲಿ**
ಸೈಟುಗಳು ಮಾರಾಟಕ್ಕಿವೆ
30x40 East, 30x40 West, 30x50 South, 40x60 East, 40x60 South
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166, 12110

**ಸೈಟ್‌ಗಳು ಮಾರಾಟಕ್ಕಿವೆ**
ಬಾಟ್ಲಿ ಬಿಲ್ಡಿಂಗ್ ಹಿಂಭಾಗ 30x50 ಉತ್ತರ ಎಸ್.ಎಸ್. ಬಡಾವಣೆಯಲ್ಲಿ, ಬೂಸ್ನೂರು ಸ್ಕೂಲ್ ಹಿಂಭಾಗ 30x40 ಪಶ್ಚಿಮ, ವಿನಾಯಕ ಬಡಾವಣೆಯಲ್ಲಿ 30x40 ದಕ್ಷಿಣ.
ಶಾಮನೂರು ಧನ್ಯಕುಮಾರ್
97415 62589
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಸೈಟ್‌ಗಳು ಮಾರಾಟಕ್ಕಿವೆ ಮನೆಗಳು ಬಾಡಿಗೆಗೆ, ಲೀಸಿಗೆ ಇವೆ**
ಬನಶಂಕರಿ ಬಡಾವಣೆಯಲ್ಲಿ 30x50 ಪೂರ್ವ, 40x60 ಪಶ್ಚಿಮ, 30x36 ಪಶ್ಚಿಮ ವಿದ್ಯಾನಗರ ವಿನಾಯಕ ಬಡಾವಣೆಯಲ್ಲಿ
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಸೆಲ್ಲರ್ ಬಾಡಿಗೆಗೆ ಇದೆ**
ಟ್ರೈನಿಂಗ್ ಸೆಂಟರ್, ಗೋಡೌನ್, ಮೆಸ್, ಸೂಪರ್ ಮಾರ್ಕೆಟ್ Etc ಗೆ ಯೋಗ್ಯವಾದ 1200sqft ಸೆಲ್ಲರ್ ಬಾಡಿಗೆಗೆ ಇದೆ. 6th cross, BIET College Road, Near Davan college, MCC 'B' Block, Davanagere.
99725 35329

**ಬೇಕಾಗಿದ್ದಾರೆ**
ದಾವಣಗೆರೆ ಸಮೀಪದ ತೋಟದಲ್ಲಿ ಕೆಲಸ ಮಾಡಲು ಮತ್ತು ಆಕಳು ನೋಡಿಕೊಳ್ಳಲು ಆಳು ಬೇಕಾಗಿದ್ದಾರೆ. ಮನೆ ಬಳಿ ಇದ್ದುಕೊಂಡೇ ಕೆಲಸ ಮಾಡಲು ಹುಡುಗ ಬೇಕಾಗಿದ್ದಾನೆ. ಸಂಪರ್ಕಿಸಿ:
7018588900 9538870257

**ಹೋಟೆಲ್ ಉದ್ಯಮಕ್ಕೆ ಮಹಿಳೆಯರು ಬೇಕಾಗಿದ್ದಾರೆ**
1) ಕ್ಲೀನಿಂಗ್ ಗೆ
2) ಅಡುಗೆಯವರು
3) ರಿಸೆಪ್ಷನಿಸ್ಟ್
ಲಕ್ಷ್ಮಿ ಫ್ಲೋರ್ ಮಿಲ್ ಹತ್ತಿರ, ದಾವಣಗೆರೆ. ಮೊ.63627-43320

**ಬೇಕಾಗಿದ್ದಾರೆ**
ಹೋಲ್‌ಸೇಲ್ ಹೊಸೈರಿ ಡಿಸ್ಟ್ರಿಬ್ಯೂಟರ್‌ಸ್‌ನಲ್ಲಿ ಕೆಲಸ ಮಾಡಲು
1) ಹುಡಗರು ಮತ್ತು ಹುಡುಗಿಯರು,
2) ಸೇಲ್ಸ್ ರೆಪ್ರೆಸೆಂಟೇಟಿವ್
3) ಕಂಪ್ಯೂಟರ್ ಆಪರೇಟರ್ (ಮಹಿಳೆಯರು) ಬೇಕಾಗಿದ್ದಾರೆ.
ಸಂಪರ್ಕಿಸಿ : 94485 34819

**ಸೈಟುಗಳು ಮಾರಾಟಕ್ಕಿವೆ**
ವಿನಾಯಕ ಬಡಾವಣೆಯಲ್ಲಿ, ಆಂಜನೇಯ ಬಡಾವಣೆಯಲ್ಲಿ, 40x84 North, 80x60 East, 30x50 North, 70x50 North East Corner
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166, 12110, 93410 14130

**ಮನೆ ಬಾಡಿಗೆ / ಲೀಜಿಗೆ**
ಕೆ.ಬಿ. ಬಡಾವಣೆ 4ನೇ ಕ್ರಾಸ್ ನಲ್ಲಿ, ಸಿಂಗಲ್ ಬೆಡ್ ರೂಮ್ ಮನೆ ಬಾಡಿಗೆ / ಲೀಜಿಗೆ ಇರುತ್ತದೆ (ಸಸ್ಯಹಾರಿಗಳಿಗೆ ಮಾತ್ರ )
9591078215

**ಸೈಟುಗಳು/ಹೊಲ ಮಾರಾಟಕ್ಕೆ**
ಬನಶಂಕರಿ ಲೇಔಟ್, ಜಯನಗರ, ಶಿವ-ಪಾರ್ವತಿ ಬಡಾವಣೆ 30x30, 30x50, 50x75, 40x60, ಸೈಟ್‌ಗಳು, ಮನೆ ಮತ್ತು ಹೊಲ, ಬಂಗ್ಲೆ ಸೈಟುಗಳು, ಅಪಾರ್ಟ್‌ಮೆಂಟ್ ಸೈಟುಗಳು ಯೋಗ್ಯ ಬೆಲೆಗೆ ದೊರೆಯುತ್ತವೆ.
ಅಭಿಷೇಕ್ ಅಫೇರ್, ಏಜೆಂಟ್
ಮೊ.97315 12365

**ಮನೆ ಮಾರಾಟಕ್ಕಿದೆ**
ಪಶ್ಚಿಮ ದಿಕ್ಕಿನ 30x50 ಸೈಟಿನಲ್ಲಿ 2 ಬೆಡ್ ರೂಂನ ಎಲ್ಲಾ ಆಧುನಿಕ ವ್ಯವಸ್ಥೆ ಇರುವ ಹೊಸ ಮನೆ ಬಾಲಾಜಿ ಬಡಾವಣೆಯಲ್ಲಿ ಮಾರಾಟಕ್ಕಿದೆ.
ವಿಚಾರಿಸಿ :
98448-82366

**ಮನೆ ಬಾಡಿಗೆಗೆ ಇದೆ**
ಪೂರ್ವ ದಿಕ್ಕಿಗೆ ಇರುವ ಫಸ್ಟ್ ಫ್ಲೋರ್‌ನಲ್ಲಿ ಸಿಂಗಲ್ ಬೆಡ್‌ರೂಂ ಮನೆ ಬಾಡಿಗೆಗೆ ಇದೆ. ಎಸ್.ಎಸ್ ಲೇಔಟ್ 'ಬಿ' ಬ್ಲಾಕ್, ರಿಂಗ್ ರೋಡ್ ಸರ್ಕಲ್ ಹತ್ತಿರ, 1ನೇ ಮೇನ್, 1ನೇ ಕ್ರಾಸ್ #1968/37, ದಾವಣಗೆರೆ.
ಮೊ: 98800 30505

**ಮಾರಾಟಕ್ಕೆ**
ಶಕ್ತಿನಗರ ಮನೆ-30×40, ಭೂಮಿಕ ಲೇಔಟ್ ಮನೆ-30×40, ಚಿಕ್ಕಮಣಿ ದೇವರಾಜ ಅರಸು ಬಡಾವಣೆ ಮನೆ-20×30, ಶ್ರೀರಾಮ ಬಡಾವಣೆ ಮನೆ ಡೂಪ್ಲೆಕ್ಸ್-20×30, ಸರಸ್ವತಿ ಬಡಾವಣೆ ಮನೆ- 20×35, ಸಿದ್ದಗಂಗಾ ಬಡಾವಣೆ ಮನೆ-30×40, SS ಲೇಔಟ್ ಮನೆ-30×40, 30×47
7899636597, 9916525828

**ಶ್ರೀ ಸಾಯಿಬಾಲಾಜಿ ಜ್ಯೋತಿಷ್ಯಾಲಯ**
ಪಂಡಿತ್ ಸಾಯಿನಾಥ್ ಕುಡ್ಲ
ಇವರು ನಿಮ್ಮ ಜೀವನದ ಸಂಪೂರ್ಣ ಭವಿಷ್ಯವನ್ನು ಹೇಳುತ್ತಾರೆ. ವಿದ್ಯೆ, ಉದ್ಯೋಗ, ಮಾಟ-ಮಂತ್ರ, ವಶೀಕರಣ, ಸಾಲಬಾಧೆ ಇನ್ನೂ ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ. ವಿಳಾಸ: ವಿದ್ಯಾನಗರ 1ನೇ ಬಸ್ ಸ್ಟಾಪ್ ಹತ್ತಿರ, ಕೆನರಾ ಬ್ಯಾಂಕ್ ಪಕ್ಕ, ದಾವಣಗೆರೆ.
ಮೊ: 95919 84627

**ಬೇಕಾಗಿದ್ದಾರೆ**
ಮೆಡಿ ಹೌಸ್ ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ಪಿಯುಸಿ ಅಥವಾ ಯಾವುದೇ ಪದವಿ.
ವಿಳಾಸ : ಕಾವೇರಿ ಫಾರ್ಮ
ಚೇತನ ಹೋಟೆಲ್ ಹತ್ತಿರ, ದಾವಣಗೆರೆ-577004.

**PSI (CIVIL) 545 POSTS**
ಹೊಸ ಬ್ಯಾಚ್‌ಗಳು ಪ್ರಾರಂಭ
ಸಮೃದ್ಧಿ ಕೋಚಿಂಗ್ ಅಕಾಡೆಮಿ
63646 40296

**SPACE AVAILABLE ON RENT**
1st & 2nd Floor - 1650 sqft, Ground Floor - 220 Sqft
Suitable for Corporate office, Stockist Distributors, Poly clinic, ext lift, Facility Available 171/4AB, "Shastry Bhavan" 3rd Main, P.J. Extn, Near Chetana Tower. Contact
98807 65683, 99450 35442

**ಮನೆ ಬಾಡಿಗೆಗೆ/ಲೀಸ್‌ಗೆ**
ಮೊದಲನೆಯ ಮಹಡಿಯಲ್ಲಿ 2 ಬೆಡ್‌ರೂಂ ಮನೆ ಬಾಡಿಗೆಗೆ/ಲೀಜಿಗೆ ಇದೆ. ಕೆ.ಬಿ. ಬಡಾವಣೆ, ಕಿರುವಾಡಿ ಲೇಔಟ್ ಜೈನಮಂದಿರದ ಹತ್ತಿರ ದಾವಣಗೆರೆ.
70198 96845

**ಜಮೀನು ಮಾರಾಟಕ್ಕಿದೆ**
ಪುಣಭಘಟ್ಟ ಗ್ರಾಮ, ಅರಸಿಕೇರಿ ಹೋಬಳಿ, ಸರ್ವೆ ನಂ.335/A 4-08 ಸೆಂಟ್ಸ್, ಸರ್ವೆ ನಂ.335/B 2-43 ಸೆಂಟ್ಸ್, ಸರ್ವೆ ನಂ.335/1 1-62 ಸೆಂಟ್ಸ್, ಒಟ್ಟು 8.13 ಸೆಂಟ್ಸ್, 2 ಪಂಪ್‌ಸೆಟ್ ಹೊಂದಿರುವ ಜಮೀನು ಮಾರಾಟಕ್ಕಿದೆ.
99726 02950

**ನೆಲ ಬಾಡಿಗೆ**
S.S. Layout, Ring Road, opp Sharadamba Temple ಹತ್ತಿರ ಖಾಲಿ ಜಾಗ ನೆಲ ಬಾಡಿಗೆಗೆ ಕೊಡುವುದಿದೆ. Size: ಉದ್ದ 20 ಅಡಿ x ಅಗಲ 80 ಅಡಿ
91135 10950

**ಕೆಲಸಕ್ಕೆ ಬೇಕಾಗಿದ್ದಾರೆ**
ಪ್ರತಿಷ್ಠಿತ ಕಂಪನಿಯ ಇ- ಲರ್ನಿಂಗ್ ಆಪ್‌ಗೆ ಕೆಲಸ ಮಾಡಲು ಯುವಕ-ಯುವತಿಯರು ಬೇಕಾಗಿದ್ದಾರೆ. ಸಂಬಳ 15 ರಿಂದ 20 ಸಾವಿರಗಳು ನೀಡಲಾಗುವುದು. ಸ್ಥಳ : ಮೌನೇಶ್ವರ ಬಡಾವಣೆ ನಿಟ್ಟುವಳ್ಳಿ, ದಾವಣಗೆರೆ. ಸಮಯ: ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ
9538538311, 79755 18856

**ಜಮೀನು ಮಾರಾಟಕ್ಕಿದೆ**
ಮಿಟ್ಲಕಟ್ಟೆ ಗ್ರಾಮದ ರಿ.ಸ.ನಂ.7/16 ರಲ್ಲಿ 19 ಗುಂಟೆ ಜಮೀನು ಸಾಯಿಬಾಬಾ ಮಂದಿರದ ಎದುರು ಶಾಮನೂರು-ದೇವರ ಬೆಳಕೆರೆ ಮುಖ್ಯ ರಸ್ತೆಗೆ ಹೊಂದಿಕೊಂಡಿದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ
95352 69849
87220 14318

**ಮನೆ ಬಾಡಿಗೆಗೆ ಇದೆ**
ಡೋರ್ ನಂ 1946/51, 16th Cross ಶ್ರೀ ನಾರದಮುನಿ ನಿಲಯ, ಆಂಜನೇಯ ದೇವಸ್ಥಾನ ಹತ್ತಿರ, ವಿದ್ಯಾನಗರ, ದಾವಣಗೆರೆ.
ಬಿ.ಎಸ್. ಪ್ರಕಾಶ್
94481 15256

**ಅಂಗಡಿ ಲೀಜ್/ಬಾಡಿಗೆಗೆ**
ಹಾಸಬಾವಿ ಸರ್ಕಲ್ ಹತ್ತಿರ ಅಂಗಡಿ ಲೀಜ್/ಬಾಡಿಗೆಗೆ ಇದೆ ಅಳತೆ :15x30. ವಿಚಾರಿಸಿ
89041 29928

**2ನೇ ಮಹಡಿಯಲ್ಲಿ ಮನೆ ಲೀಸ್‌ಗೆ ಇದೆ**
ಕುವೆಂಪು ನಗರದಲ್ಲಿ, ಲಕ್ಷ್ಮಿ ಫ್ಲೋರ್ ಮಿಲ್ ಹತ್ತಿರ, 2ನೇ ಫ್ಲೋರ್‌ನಲ್ಲಿ ಸಿಂಗಲ್ ಬೆಡ್‌ರೂಂ ಮನೆ ಲೀಸ್‌ಗೆ ಇದೆ. ನೀರಿನ ಸೌಕರ್ಯವಿದೆ.
99863 31471
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ)

**ಸೈಟು ಮಾರಾಟಕ್ಕಿದೆ**
25'x40' ಅಳತೆಯ ಜಯನಗರ ಚರ್ಚ್ ಹಿಂಭಾಗ, ದಾವಣಗೆರೆಯಲ್ಲಿ ಸೈಟ್ ಮಾರಾಟಕ್ಕಿದೆ. ಸಂಪರ್ಕಿಸಿ:
97416 66288

**WANTED**
1) Lab Technician DLT Passed.
2) Staff Nurses.
3) Ayah.
4) X-ray Technician.
Contact : 98440-65638

**ಸುವರ್ಣಾವಕಾಶ**
ಎಸ್ಸೆಸ್ಸೆಲ್ಸಿ, ಪಿಯುಸಿ, ಫೇಲಾದವರು ನೇರ ಬಿ.ಎ., ಎಂ.ಎ., ಬಿ.ಕಾಂ., ಎಂ.ಕಾಂ., ಬಿ.ಎಸ್ಸಿ., ಬಿ.ಎಡ್., ಎಂ.ಎಡ್., ಡಿಪ್ಲೊಮಾ, ಬಿ.ಟೆಕ್, ಎಂ.ಟೆಕ್ ಮುಂತಾದ ಕೋರ್ಸ್‌ಗಳನ್ನು ಪಾಸ್ ಮಾಡಲು ಸಂಪರ್ಕಿಸಿ
8296265995, 8971684391
ಬೆಳಿಗ್ಗೆ 10 ರಿಂದ ಸಂಜೆ 6 ರೊಳಗೆ

**ಸುವರ್ಣಾವಕಾಶ**
ಯುವಕ/ಯುವತಿಯರಿಗೆ, ವಿದ್ಯಾರ್ಥಿಗಳಿಗೆ, ನಿರುದ್ಯೋಗಿಗಳಿಗೆ, ಗೃಹಿಣಿಯರಿಗೆ, ಉದ್ಯೋಗಸ್ಥರಿಗೆ ಯಾವುದೇ ಬಂಡವಾಳವಿಲ್ಲದೆ ನಿಮ್ಮ ಬಿಡುವಿನ ವೇಳೆಯಲ್ಲಿ ತಿಂಗಳಿಗೆ 25 ಸಾವಿರದಿಂದ 1 ಲಕ್ಷದ ವರೆಗೆ ಗಳಿಸುವ ನಿಮ್ಮ ಕನಸುಗಳನ್ನು ನನಸು ಮಾಡಿಕೊಳ್ಳುವ ಅದ್ಭುತ ಸುವರ್ಣಾವಕಾಶ. ಸಂಪರ್ಕಿಸಿ :
93435 46891, 70194 26891

**ಅಧಿಕೃತ ಚೀಟಿ ಸಂಸ್ಥೆ**
ರೂ.5 ಲಕ್ಷದ ಚೀಟಿ ಪ್ರಾರಂಭ. ತಿಂಗಳ ಕಂತು 10,000/- ದಿಂದ 6,500/- ಮಾತ್ರ
ಸ್ಕಂದ ಚಿಟ್ ಫಂಡ್ಸ್ (ರಿ) ದಾವಣಗೆರೆ-02
84531 61869

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಮನೆ ಬಾಡಿಗೆಗೆ ಇದೆ**
ಭಗತ್ ಸಿಂಗ್ ನಗರ, 12ನೇ ಕ್ರಾಸ್, 3ನೇ ಮೇನ್, 10x35 ಅಳತೆ ಮನೆ ಬಾಡಿಗೆಗೆ ಇದೆ. (ಸಸ್ಯ ಹಾರಿಗಳಿಗೆ ಮಾತ್ರ)
ಫೋ. : 98805 74850

**ಮನೆ ಬಾಡಿಗೆಗೆ ಇದೆ**
ಟಿ.ವಿ. ಸ್ಟೇಷನ್‌ಗೆ, ಸರ್.ಎಂ.ವಿ. ಕಾಲೇಜ್, ಶಶಿ ಸೋಪ್ ಫ್ಯಾಕ್ಟರಿಗೆ, ಹೈಟೆಕ್ ಆಸ್ಪತ್ರೆಗೆ ತುಂಬಾ ಹತ್ತಿರವಿರುವ ವಿಶಾಲವಾದ ಹಾಲ್, 2 ಬೆಡ್‌ರೂಂ, 2 ಬಾತ್‌ರೂಂ, ಸೋಲಾರ್, ಕಾರ್ ಪಾರ್ಕಿಂಗ್, ಸದಾ ನೀರಿನ ವ್ಯವಸ್ಥೆ, ವಾಸ್ತು ಪ್ರಕಾರವಿರುವ ಮನೆ ಕ್ಲೀನ್ ಆಗಿ ಮನೆ ಇಟ್ಟುಕೊಳ್ಳುವವರಿಗೆ, ಹಿಂದೂ ಜನಕ್ಕೆ, ಆರೋಗ್ಯವಂತರಿಗೆ ಮಾತ್ರ ವಿಚಾರಿಸಿ.
99865 38099, 99806 11110

**ಸೇಲ್ಸ್‌ಮ್ಯಾನ್ ಬೇಕಾಗಿದ್ದಾರೆ**
ಪ್ರತಿ ಅಂಗಡಿಗಳಿಗೆ ಭೇಟಿಯಾಗಿ ಸೇಲ್ಸ್ ಮಾಡುವ 1 ಅಥವಾ 2 ವರ್ಷ ಅನುಭವ ಇರುವಂತಹ ಸೇಲ್ಸ್‌ಮ್ಯಾನ್‌ಗಳು ಬೇಕಾಗಿದ್ದಾರೆ. ಆಸಕ್ತರು ವಿಚಾರಿಸುವ ಸಮಯ 10 ರಿಂದ 5 ಘಂಟೆವರೆಗೆ ಮಾತ್ರ
99865 38099

**ಬೇಕಾಗಿದ್ದಾರೆ**
cafe ಯಲ್ಲಿ ಕೆಲಸ ಮಾಡಲು ಯುವಕರು ಬೇಕಾಗಿದ್ದಾರೆ. ಹೋಟೆಲ್‌ನಲ್ಲಿ ಕೆಲಸ ಮಾಡಿದ ಅನುಭವವಿರಬೇಕು. ಸಂಬಳ ರೂ.8000 ದಿಂದ 15,000ವರೆಗೆ + ಪ್ರೋತ್ಸಾಹ ಧನವಿರುತ್ತದೆ. ಸಂಪರ್ಕಿಸಿರಿ
98445 67456

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿ ಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**SPECIAL INVITATION FOR RETIRED/ VRS FROM GOVT/PVT SECTORS, SENIOR CITIZENS HOUSEWIVES**
Unique Benefits:Fixed Income+Huge Incentive+Health Coverage+Flexible Work Timing+ Gratuity+PF+International Trips
Venue: HOTEL ASHOK INN Behind KSRTC Bus stand
Date:12th February 2021
Time: 4:00PM
Call For Free Registration: 9945776503

**ನೇರ ಪರೀಕ್ಷೆಗಳು**
DIRECT EXAMS
ಮನೆಯಲ್ಲೇ ಓದಿ ನೇರ ಪರೀಕ್ಷೆ ಬರೆಯುವ ಅವಕಾಶ PUC SCIENCE, COMMERCE, ARTS ಉನ್ನತ ಶಿಕ್ಷಣಕ್ಕೆ/ಸರ್ಕಾರಿ ಕೆಲಸಕ್ಕೆ ಮತ್ತು ಮುಂಬಡ್ತಿ ಪಡೆಯಲು ಉಪಯೋಗವಾಗುತ್ತದೆ.
ಮಾನಸ ಎಜುಕೇಷನ್ ಟ್ರಸ್ಟ್ (ರಿ.)
ಎಲ್.ಕೆ.ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ದಾವಣಗೆರೆ.
97402 58276

**ಬೇಕಾಗಿದ್ದಾರೆ**
ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಕೆಲಸದ ಸಮಯ ಬೆಳಿಗ್ಗೆ 9.00 ರಿಂದ ಸಂಜೆ 8:00 ರವರೆಗೆ
ಸಂಪರ್ಕಿಸಿ:
ಕಶೆಟ್ಟರ್ ಇಂಡಸ್ಟ್ರಿಯಲ್ ಎಸೆನ್ಸಿಯಲ್ಸ್
ಲಾಯರ್ ರಸ್ತೆ, ಟೈರ್ ಅಂಗಡಿಗಳ ಹತ್ತಿರ, ದಾವಣಗೆರೆ.

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯಿತ ವಧು-ವರರ ಕೇಂದ್ರ
H.O : Vidya Nagara, 1st Bus Stop, Davangere.
77603 16576
90080 55813

**ಬೇಕಾಗಿದ್ದಾರೆ**
ಬೇತೂರು ಮತ್ತು ನೆಲ್ಲೂರಿನಲ್ಲಿ ಹಾಗೂ ದಾವಣಗೆರೆ ಸುತ್ತಮುತ್ತಲು ಸೆಕ್ಯೂರಿಟಿ ಹಾಗೂ ರಿಸೆಪ್ಷನಿಸ್ಟ್, ರೂಮ್ ಬಾಯ್ಸ್ ಬೇಕಾಗಿದ್ದಾರೆ. ಕೆಲವು ಕಡೆ ಊಟದ ವ್ಯವಸ್ಥೆ ಇರುತ್ತದೆ. ಕೂಡಲೇ ಸಂಪರ್ಕಿಸಿರಿ :
9880648207, 7411307071

**SBI-CSP**
ಜನ್‌ಧನ್ ಖಾತೆ ಮಾಡಲಾಗುತ್ತದೆ
('0' Account open) with ATM old B.S. ಚನ್ನಬಸಪ್ಪ & ಸನ್ಸ್ ಹಿಂಭಾಗ # 264/1 ಮಹಾರಾಜ ಪೇಟೆ, ವಿಠ್ಠಲ ಮಂದಿರ ಹತ್ತಿರ, ದಾವಣಗೆರೆ.
99806 10005
93436 22166

**ಹಾಲ್/ಮಳಿಗೆ ಬಾಡಿಗೆಗಿದೆ**
800 sqft ಹಾಲ್, ಮೊದಲನೇ ಮಹಡಿ ಮಾಮಾಸ್ ಜಾಯಿಂಟ್ ರೋಡ್, ಎಂ.ಸಿ.ಸಿ. 'ಬಿ' ಬ್ಲಾಕ್,
94489 21346
82177 72482

**Anjum Education society (R)**
WANTED POST FOR ANJUM HPS & HIGH SCHOOL (Kan, Urdu & Eng Medium)
Bhagath Singh Nagara, Davanagere.
Bsc BEd,. PCM & CBZ & BA, B.Ed., English Major, Hindi BA, B.Ed
apply or attend immediately, above address.

**ಪ್ರವಾಸಗಳು**
ಶ್ರೀ ರಾಜರಾಜೇಶ್ವರಿ ಟೂರ್ಸ್ & ಯಾತ್ರೆ
(ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆ) 13.3.2021, 11ದಿನಗಳ ಪೂರಿ, ಜಗನ್ನಾಥ್, ಭುವನೇಶ್ವರ, ಗಯಾ, ವಾರಣಾಸಿ, ಕಾಶಿ ತ್ರಿವೇಣಿ ಸಂಗಮ, ಅಯೋಧ್ಯಾ. 2.04.2021 7ದಿನಗಳ ಕೇರಳ ಪ್ರವಾಸ, 21.05.2021 14ದಿನಗಳ ಚಾರ್ ಧಾಮ್ ಪ್ರವಾಸ್ ಶ್ರೀ ಯೋಗಿ ನಾರಾಯಣ, ಶಿವ ಪಾರ್ವತಿ ಮದುವೆಯಾದ ಸ್ಥಳ, ಉಕ್ಕಿನ ಮಠ, ಇಂಡಿಯಾ ಲಾಸ್ಟ್ ವಿಲೇಜ್ ಮಾನ. ಕೆಲವೇ ಸೀಟುಗಳಿವೆ ತಕ್ಷಣ ಸಂಪರ್ಕಿಸಿರಿ.
97438 95346, 97396 18248

**ಕೌಶಲ್ಯ ತರಬೇತಿ**
Quess Corp ವತಿಯಿಂದ PUC & ITI, Diploma ಮತ್ತು BA, B.Com, & MBA, B.Sc, BBA, BBM, ಪಾಸಾದ ಮತ್ತು ಫೇಲಾದ ವಿದ್ಯಾರ್ಥಿಗಳಿಗೆ ಅವರ ಶಿಕ್ಷಣಕ್ಕೆ ಅನುಗುಣವಾಗಿ ಸ್ಕಿಲ್ ಟ್ರೈನಿಂಗ್ & ಕೋರ್ಸ್ ಟ್ರೈನಿಂಗ್ ಅನ್ನು ನೀಡಿ ಪ್ರತಿಷ್ಠಿತ ಕಂಪನಿಗಳಲ್ಲಿ ಉದ್ಯೋಗಾವಕಾಶವನ್ನು ಒದಗಿಸಲಾಗುವುದು.
ಮೊ: 90667 66580

**ತಕ್ಷಣ ಬೇಕಾಗಿದ್ದಾರೆ**
IMPULSE ಕಂಪನಿಗೆ 10th, PUC, Diploma & Degree ಆದ ಯುವಕರು AGE (18-24) Earn (8000-16000) PM 1photo Resume, Adhar xerox ನೊಂದಿಗೆ
81056 00262

**SAHYADRI PARAMEDICAL COLLEGE**
SSLC ಪಾಸ್, PUC ಪಾಸ್/ಫೇಲ್
Course DHI
Diploma Health Inspector
ಕೆಲವೇ ಸೀಟುಗಳು ಮಾತ್ರ, SBI ATM ಹತ್ತಿರ ರಾಂ & ಕೋ. ಸರ್ಕಲ್, ದಾವಣಗೆರೆ.
(ಕೊನೆಯ ದಿನಾಂಕ : 10.2.2021)
90195 80600, 86601 95955

**ಗೋಡೌನ್ ಬಾಡಿಗೆ ಇದೆ**
APMC ಯಾರ್ಡ್ 'ಎ' ಬ್ಲಾಕ್, ಪಹರ ಬಿಲ್ಡಿಂಗ್. 4800 Sqft
ಬಿ.ಎಸ್. ಪ್ರಕಾಶ್
94481 15256

# ಕಾನೂನು ಮೀರಿ ನಡೆದರೆ ಶಿಸ್ತಿನ ಕ್ರಮ : ಕಲ್ಲುಗಣಿ, ಕ್ರಷರ್ ಮಾಲೀಕರಿಗೆ ಡಿಸಿ ಎಚ್ಚರಿಕೆ

ದಾವಣಗೆರೆ, ಫೆ.10- ಕಲ್ಲುಗಣಿ ಮತ್ತು ಕ್ರಷರ್ ಮಾಲೀಕರು ಕಾನೂನಿನ ಚೌಕಟ್ಟಿನೊಳಗೆ ತಮ್ಮ ಚಟುವಟಿಕೆಗಳನ್ನು ನಡೆಸಬೇಕು. ಪರವಾನಗಿ ಇಲ್ಲದವರಿಗೆ ಪರವಾನಗಿ ಪಡೆಯಲು ಮಾರ್ಗದರ್ಶನ ನೀಡುವುದರೊಂದಿಗೆ ಎಲ್ಲ ರೀತಿಯ ಸಹಕಾರ ನೀಡಲಾಗುವುದು. ಆದರೆ ಕಾನೂನು ಮೀರಿ ನಡೆದರೆ ಶಿಸ್ತಿನ ಕ್ರಮ ಜರುಗಿಸಲಾಗುವುದು ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಎಚ್ಚರಿಕೆ ನೀಡಿದರು.

ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ ಕಲ್ಲುಗಣಿ ಸುರಕ್ಷತೆ ಮತ್ತು ಅನಧಿಕೃತ ಗಣಿಗಾರಿಕೆ ತಡೆ ಮಾಸಿಕ ಸಪ್ತಾಹದ ಅಂಗವಾಗಿ ಬುಧವಾರ ಗಣಿ ಮತ್ತು ಭೂವಿಜ್ಞಾನ ಇಲಾಖೆ ವತಿಯಿಂದ ಕಲ್ಲುಗಣಿ ಮತ್ತು ಕ್ರಷರ್ ಮಾಲೀಕರಿಗೆ ಏರ್ಪಡಿಸಲಾಗಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಒಟ್ಟು 58 ಕ್ರಷರ್‌ಗಳಿವೆ ಹಾಗೂ 78 ಕಲ್ಲುಗಣಿಗಳಿವೆ. 78 ಕ್ವಾರಿಗಳ ಪೈಕಿ 10 ಮಾತ್ರ ಬ್ಲಾಸ್ಟಿಂಗ್ ಲೈಸೆನ್ಸ್ ಪಡೆದಿದ್ದು, 18 ಪ್ರಗತಿಯಲ್ಲಿವೆ. 07 ನವೀಕರಣ ಪ್ರಕ್ರಿಯೆಯಲ್ಲಿದ್ದರೆ 7 ಮ್ಯಾನುವಲ್ ಮತ್ತು 36 ಕ್ವಾರಿಗಳಲ್ಲಿ ಕೆಲಸ ನಡೆಯುತ್ತಿಲ್ಲವೆಂದು ಗಣಿ ಇಲಾಖೆ ವರದಿ ನೀಡಿದೆ ಎಂದು ಹೇಳಿದರು.

**ವಾರದೊಳಗೆ ವರದಿ ನೀಡಲು ಗಡುವು:** ಕ್ವಾರಿಗಳಿರುವ ವ್ಯಾಪ್ತಿಯ ತಹಶೀಲ್ದಾರ್, ಪೊಲೀಸ್ ಅಧಿಕಾರಿ, ಆರ್‌ಐ ಮತ್ತು ವಿಎ ಸೇರಿದಂತೆ ತಂಡ ರಚಿಸಿ ಗಣಿ ಇಲಾಖೆಯ ವರದಿಯಲ್ಲಿರುವಂತೆ ಕ್ವಾರಿಗಳು ಕೆಲಸ ನಿರ್ವಹಿಸುತ್ತಿವೆಯೇ? ಮುಖ್ಯವಾಗಿ ಕೆಲಸ ನಿಲ್ಲಿಸಿರುವ (ಐಡಲ್) ಕ್ವಾರಿಗಳ ಸ್ಥಿತಿಗತಿ ಏನು ಎಂಬ ಬಗ್ಗೆ ಒಂದು ವಾರದೊಳಗೆ ನನಗೆ ವರದಿ ನೀಡಬೇಕು. ಈ ವರದಿಯನ್ನು ಆಧರಿಸಿ ಮುಂದಿನ ಕ್ರಮ ವಹಿಸಲಾಗುವುದು. ಒಂದು ಪಕ್ಷ ಅನಧಿಕೃತವಾಗಿ ಕ್ವಾರಿ ನಡೆಸುತ್ತಿದ್ದರೆ ಹಾಗೂ ಕಾಯ್ದೆಯನ್ವಯ ನಿಯಮಗಳನ್ನು ಅನುಸರಿಸದೇ ಕ್ವಾರಿ ನಡೆಸುತ್ತಿದ್ದರೆ ಅಂತಹ ಕ್ವಾರಿಗಳಿಗೆ ನೋಟಿಸ್ ನೀಡಿ ಶಿಸ್ತಿನ ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ ಅವರು ಮಾತನಾಡಿ, ಶಿವಮೊಗ್ಗದ ಹುಣಸೋಡಿನಲ್ಲಿ ಸಂಭವಿಸಿದ ಸ್ಫೋಟ ಪ್ರಕರಣದಲ್ಲಿ ಸ್ಫೋಟಕಗಳ ಬಳಕೆಯಲ್ಲಿ ನಿರ್ಲಕ್ಷ್ಯದಿಂದಾಗಿ ಸಾವು - ನೋವಿಗೆ ಕಾರಣವಾಗಿದೆ ಎಂದರು.



ದಾವಣಗೆರೆ ನಗರದಲ್ಲಿಯೇ ದುಗ್ಗಮ್ಮನ ಜಾತ್ರೆ ತರುವಾಯ ದೇವಸ್ಥಾನದ ಸುಮಾರು 300 ಮೀಟರ್ ಅಂತರದಲ್ಲಿ ಹೆಂಚಿನ ಗೋದಾಮೊಂದರಲ್ಲಿ ದೊಡ್ಡ ಪ್ರಮಾಣದ ಸ್ಫೋಟಕವನ್ನು ಸಂಗ್ರಹಿಸಿರುವುದನ್ನು ಪತ್ತೆ ಹಚ್ಚಿ ಸೀಜ್ ಮಾಡಿ ಪ್ರಕರಣ ದಾಖಲಿಸಲಾಗಿದೆ ಹಾಗೂ ಆಜಾದ್ ನಗರದ ಕಟ್ಟಡದ ಬೇಸ್‌ಮೆಂಟ್‌ನಲ್ಲಿ ಸಂಗ್ರಹಿಸಿಡಲಾಗಿದ್ದ ಸ್ಫೋಟಕವನ್ನು ಸೀಜ್ ಮಾಡಿ ಸಂಬಂಧಿಸಿದವರನ್ನು ಬಂಧಿಸಿ, ಪ್ರಕರಣ ದಾಖಲಿಸಲಾಗಿದೆ. ಜೊತೆಗೆ ಲೈಸೆನ್ಸನ್ನು ಕೂಡ ನಿಯಮಾನುಸಾರ ನಿಲಂಬನೆಯಲ್ಲಿಡಲಾಗಿದೆ. ಕಾಡಜ್ಜಿ ಬಳಿ ಕೂಡ ಸ್ಫೋಟಕ ಸೀಜ್ ಮಾಡಿ ಪ್ರಕರಣ ದಾಖಲಿಸಿ ತನಿಖೆ ಮಾಡಲಾಗುತ್ತಿದೆ ಎಂದು ತಿಳಿಸಿದರು.

ರೈತ ಮುಖಂಡ ಬಲ್ಲೂರು ರವಿಕುಮಾರ್ ಮಾತನಾಡಿ, ಕ್ರಷರ್‌ಗಳಿಂದ ಬರುವ ಗಾಡಿಗಳು ಅತೀ ತೂಕ ಹೊತ್ತು ಓಡಾಡುತ್ತಿದ್ದು, ಇದರಿಂದ ಗ್ರಾಮೀಣ ರಸ್ತೆಗಳು ಹಾಳಾಗುತ್ತಿವೆ. ಈ ಬಗ್ಗೆ ಕ್ರಮ ವಹಿಸುವಂತೆ ಮನವಿ ಮಾಡಿದರು.

ಶಿವಮೊಗ್ಗದ ಹುಣಸೋಡಿನಲ್ಲಿ ನಡೆದ ಸ್ಫೋಟಕ ಅವಘಡವನ್ನು ಪ್ರಸ್ತಾಪಿಸಿದ ಅವರು, ಸ್ಫೋಟಕ ತುಂಬಿದ ವಾಹನಗಳು ಚಿತ್ರ ದುರ್ಗ-ದಾವಣಗೆರೆ ಮೂಲಕ ಹೆಬ್ಬಾಳು ಟೋಲ್‌ನಲ್ಲಿ ಹಾದು ಹೋಗಿವೆ. ಸ್ಫೋಟಕ ವಾಹನಗಳ ನಡುವಿನ ಅಂತರ ಕೂಡ ನಿರ್ವಹಿಸಲಾಗಿಲ್ಲ. ಜೊತೆ ಜೊತೆಗೇ ತೆರಳಿವೆ. ಅಕಸ್ಮಾತ್ ಇಲ್ಲಿ ಸ್ಫೋಟ ಆಗಿದ್ದರೂ ಯಥೇಚ್ಛವಾಗಿ ಹಾನಿಯಾಗುತ್ತಿತ್ತು ಎಂದು ತಿಳಿಸಿದರು.

ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಹಿರಿಯ ಭೂವಿಜ್ಞಾನಿ ಕೋದಂಡರಾಮಯ್ಯ ಮಾತನಾಡಿ, ಕೆಲಸ ಮಾಡದೇ ಇರುವ ಐಡಲ್ ಕ್ವಾರಿಗಳಿಗೆ 30 ದಿನಗಳ ನೋಟಿಸ್ ನೀಡಿ ಅವಕಾಶ ನೀಡಲಾಗುವುದು ಎಂದರು.

ಸಭೆಯಲ್ಲಿ ದಾವಣಗೆರೆ ಉಪವಿಭಾಗಾಧಿಕಾರಿ ಮಮತಾ ಹೊಸಗೌಡರ್, ತಾಲ್ಲೂಕುಗಳ ತಹಶೀಲ್ದಾರರು, ಡಿವೈಎಸ್‌ಪಿಗಳು, ಸಿಪಿಐ ಮತ್ತು ಇತರೆ ಸಿಬ್ಬಂದಿ ಹಾಗೂ ಕ್ರಷರ್ ಮತ್ತು ಕ್ವಾರಿಗಳ ಮಾಲೀಕರು ಹಾಜರಿದ್ದರು.

### ಸಿಸಿ ಟಿವಿ ಅಳವಡಿಸದಿದ್ದರೆ ಕ್ರಮ

ಗಣಿ ಮಾಡುವ ಸ್ಥಳಗಳಲ್ಲಿ ಸಿಸಿ ಟಿವಿ ಅಳವಡಿಕೆ ಕಡ್ಡಾಯ. ಗಣಿಗಾರಿಕೆ ಪ್ರದೇಶದ ಪ್ರವೇಶ, ನಿರ್ಗಮನ, ಗಣಿ ಸ್ಥಳ, ಸ್ಟೋರೇಜ್ ಪ್ರದೇಶಗಳಲ್ಲಿ ಸಿಸಿ ಟಿವಿ ಅಳವಡಿಸಬೇಕು. ಸಿಸಿಟಿವಿ ಅಳವಡಿಕೆಯಿಂದ ಸ್ಥಳದಲ್ಲಿ ಏನಾದರೂ ದುರ್ಘಟನೆಗಳು ಸಂಭವಿಸಿದರೆ ಪೊಲೀಸರಿಗೆ ತನಿಖೆ ನಡೆಸಲು ಅನುಕೂಲ. ಕರ್ನಾಟಕ ಪಬ್ಲಿಕ್ ಸೇಫ್ಟಿ ಆ್ಯಕ್ಟ್ ಅನ್ವಯ ಎಲ್ಲೆಡೆ ಸಿಸಿಟಿವಿ ಅಳವಡಿಸಬೇಕು. ಸಿಸಿಟಿವಿಯ ಸಹಾಯದಿಂದ ನಡೆದ ಘಟನೆಗಳ ಬಗ್ಗೆ ಸಂಪೂರ್ಣವಾದ ಮಾಹಿತಿ ಹಾಗೂ ತನಿಖೆಗೆ ಬೇಕಾದ ಮೂಲಗಳನ್ನು ಪಡೆಯಬಹುದು. ಕೇವಲ ಕ್ವಾರಿಯಲ್ಲಿ ಮಾತ್ರವಲ್ಲದೇ, ಆಫೀಸ್, ಮನೆ, ದೇವಸ್ಥಾನಗಳಲ್ಲೂ ಕೂಡ ಸಿಸಿಟಿವಿಯನ್ನು ಅಳವಡಿಸಿಕೊಳ್ಳಬೇಕು.

**- ಹನುಮಂತರಾಯ,**
ಪೊಲೀಸ್ ವರಿಷ್ಠಾಧಿಕಾರಿ

## ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಮುಂಗಡ ಪತ್ರದ ವಿಶ್ಲೇಷಣೆ



ದಾವಣಗೆರೆ, ಫೆ.10 - ಮುಂಗಡ ಪತ್ರ 2021-2022 ರ ವಿಶ್ಲೇಷಣಾ ಕಾರ್ಯಕ್ರಮವು ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆಯಿತು.

ದಾವಣಗೆರೆ ವಿಶ್ವವಿದ್ಯಾನಿಲಯದ ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥರೂ ಆದ ಕಲಾನಿಕಾಯ ಡೀನ್ ಪ್ರೊ. ಕೆ.ಬಿ. ರಂಗಪ್ಪ ಅವರು ಮುಂಗಡ ಪತ್ರ ಕುರಿತಂತೆ, ಈ ಕೊರೊನಾ ಸಮಯದಲ್ಲಿ ಆರೋಗ್ಯ ಕ್ಷೇತ್ರದ ಕಡೆಗೆ ಹೆಚ್ಚು ಒತ್ತು ಕೊಟ್ಟಿರುವುದಕ್ಕೆ ಹಾಗೆಯೇ ಎಲ್ಲರೂ ನಿರೀಕ್ಷೆ ಮಾಡಿದಂತಹ ಆರೋಗ್ಯ ಕ್ಷೇತ್ರ ಹಾಗೂ ಎಲ್ಲರೂ ನಿರೀಕ್ಷೆ ಮಾಡಿದಂತಹ ಮೂಲಭೂತ ಸೌಕರ್ಯದ ಕಡೆ ಗಮನಹರಿಸಿರುವುದರ ಬಗ್ಗೆ ಮತ್ತು ಕೈಗಾರಿಕೆಗಳಿಂದ ದೇಶದ ಅಭಿವೃದ್ಧಿಗೆ ಅನುಕೂಲ ಹಾಗೂ ಉದ್ಯೋಗವು ಸೃಷ್ಟಿಯಾಗಬಹುದು ಎಂದು ಹೇಳುತ್ತಾ ಇಂದಿನ ಬಜೆಟ್ 34,83,236 ಕೋಟಿ ಕಳೆದ ವರ್ಷಕ್ಕಿಂತ 14.5% ರಷ್ಟು ಹೆಚ್ಚು ಕಂಡಿರುವುದರ ಬಗ್ಗೆ ಮಾಹಿತಿ ನೀಡಿದರು.

ಅಧ್ಯಕ್ಷತೆಯನ್ನು ಪ್ರಾಂಶುಪಾಲ ಪ್ರೊ.ತೂ.ಕ.ಶಂಕ್ರಯ್ಯ ವಹಿಸಿದ್ದರು. ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಆರ್. ತಿಪ್ಪಾರೆಡ್ಡಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರೊ. ಭೀಮಣ್ಣ ಸುಣಗಾರ್, ಡಾ.ಜಿ.ಎಂ.ದಿನೇಶ್, ಡಾ.ಶಾಂತಕುಮಾರಿ, ಐಕ್ಯೂಎಸಿ ಸಂಚಾಲಕ ಪ್ರೊ. ಟಿ.ವೀರೇಶ್ ಮತ್ತಿತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

## ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಿ ಯರ‍್ರಿಸ್ವಾಮಿ

ದಾವಣಗೆರೆ, ಫೆ.10- ನಗರದ ಕುವೆಂಪು ಕನ್ನಡ ಭವನದಲ್ಲಿ ಮಾರ್ಚ್ 1 ಮತ್ತು 2 ರಂದು ಎರಡು ದಿನಗಳ ಕಾಲ ನಡೆಯುವ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಕೆನರಾ ಬ್ಯಾಂಕ್ ನಿವೃತ್ತ ವಿಭಾಗೀಯ ಪ್ರಬಂಧಕರೂ, ಹಿರಿಯ ಸಾಹಿತಿಯೂ ಆದ ಎನ್.ಟಿ. ಯರ‍್ರಿಸ್ವಾಮಿ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಗಿದೆ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಹೆಚ್.ಎಸ್. ಮಂಜುನಾಥ ಕುರ್ಕಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಮಾರ್ಚ್ 1 ರಂದು ಬೆಳಿಗ್ಗೆ 11 ಗಂಟೆಗೆ ಪರಿಷತ್ ರಾಜ್ಯಾಧ್ಯಕ್ಷ ಡಾ. ಮನು ಬಳಿಗಾರ್ ಸಮ್ಮೇಳನಕ್ಕೆ ಚಾಲನೆ ನೀಡಲಿದ್ದಾರೆ. ಸಮ್ಮೇಳನದ ಅಂಗವಾಗಿ ಪ್ರಮುಖ ವಿಚಾರ ಗೋಷ್ಠಿಗಳು ನಡೆಯಲಿದ್ದು, ಸಮಕಾಲೀನ ಸಮಸ್ಯೆ, ವಿಶ್ವ ಪ್ರಜ್ಞೆ, ಮಾನವೀಯ ಮೌಲ್ಯಗಳು, ಪರಿಸರ ಪ್ರಜ್ಞೆ, 'ಕೃಷಿ ಕಾಯ್ದೆ' ಸಾಧಕ ಬಾಧಕಗಳ ಕುರಿತು ಗಂಭೀರ ಚರ್ಚೆಗಳು ನಡೆಯಲಿವೆ. ವಿಶೇಷವಾಗಿ ಕೊರೊನಾ ಕವಿಗೋಷ್ಠಿ ಏರ್ಪಾಡು ಮಾಡಲಾಗುವುದು. ಎಂದಿನಂತೆ ಪುಸ್ತಕ ಮಳಿಗೆ ತೆರೆಯಲಾಗುವುದು ಎಂದರು.

ಮುಂದಿನ ವರ್ಷ 83ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನವನ್ನು ದಾವಣಗೆರೆಯಲ್ಲೇ ಸಂಘಟಿಸುವುದಾಗಿ ಅವರು ವಿಶ್ವಾಸ ವ್ಯಕ್ತಪಡಿಸಿದರು. ವಿಶ್ವ ಕನ್ನಡ ಸಮ್ಮೇಳನದ ಬಗ್ಗೆ ಮುಖ್ಯಮಂತ್ರಿಗಳಲ್ಲಿ ಪ್ರಸ್ತಾಪ ಮಾಡಿರುವುದಾಗಿ, ದಿನಾಂಕ ತಿಳಿಸಲಿದ್ದಾರೆ ಎಂದರು. ಪತ್ರಿಕಾಗೋಷ್ಠಿಯಲ್ಲಿ ಕಸಾಪ ಪದಾಧಿಕಾರಿಗಳಾದ ಎ.ಆರ್. ಉಜ್ಜನಪ್ಪ, ಬಿ. ದಿಳ್ಯೆಪ್ಪ, ಷಣ್ಮುಖಪ್ಪ, ಎನ್.ಎಸ್. ರಾಜು ಉಪಸ್ಥಿತರಿದ್ದರು.

# ಗೊಬ್ಬರದಿಂದ ವಿಮಾನದವರೆಗೆ ಎಲ್ಲವನ್ನೂ ಅಧಿಕಾರಶಾಹಿಯೇ ಮಾಡಬೇಕೇ ?

**ನಮ್ಮ ಯುವಕರ ಸಾಮರ್ಥ್ಯಕ್ಕೆ ಅವಕಾಶ ಕೊಡುತ್ತೇವೆ ಎಂದು ಖಾಸಗಿ ವಲಯ ಸಮರ್ಥಿಸಿಕೊಂಡ ಪ್ರಧಾನಿ ನರೇಂದ್ರ ಮೋದಿ**

ನವದಹಲಿ, ಫೆ. 10 - ಒಂದು ಕಾಲದಲ್ಲಿ ಮತಗಳಿಗಾಗಿ ಖಾಸಗಿ ವಲಯವನ್ನು ನಿಂದಿಸಲಾಗುತ್ತಿತ್ತು, ಕೀಳಾಗಿ ಕಾಣಲಾಗುತ್ತಿತ್ತು. ಈಗ ದೇಶ ಬದಲಾಗಿದೆ. ಯುವಕರಿಗೆ ಅವಕಾಶ ನೀಡಬೇಕಿದೆ, ಆಸ್ತಿ ಸೃಷ್ಟಿವವರನ್ನಾಗಿ ಕಾಣಬೇಕಿದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ.

ರಾಷ್ಟ್ರಪತಿ ಭಾಷಣಕ್ಕೆ ಅಭಿನಂದಿಸುವ ನಿಲುವಳಿ ಕುರಿತು ಲೋಕಸಭೆಯಲ್ಲಿ ನಡೆದ ಚರ್ಚೆಯಲ್ಲಿ ಮಾತನಾಡುತ್ತಿದ್ದ ಅವರು, ಮಾನವೀಯತೆಯ ಕಾರ್ಯದಲ್ಲಿ ಖಾಸಗಿ ವಲಯದ ಹಾಗೂ ಖಾಸಗಿ ಉದ್ಯಮಗಳ ದೊಡ್ಡ ಪಾತ್ರವಿದೆ ಎಂದಿದ್ದಾರೆ.

ಖಾಸಗಿ ವಲಯದಲ್ಲಿ ಕಾರ್ಯ ನಿರ್ವಹಿಸುವ ನಮ್ಮ ದೇಶದ ಯುವಕರ ಬಗ್ಗೆ ನಾವು ಹೆಮ್ಮೆ ಹೊಂದಬೇಕಿದೆ. ಒಂದು ಕಾಲದಲ್ಲಿ ಮತಗಳಿಗಾಗಿ ಖಾಸಗಿ ವಲಯವನ್ನು ನಿಂದಿಸುತ್ತಿದ್ದರು, ಕೀಳಾಗಿ ಕಾಣುತ್ತಿದ್ದರು. ಆದರೆ, ಈಗ ಕಾಲ ಬದಲಾಗಿದೆ. ಸಮಾಜದಲ್ಲಿ - ದೇಶದಲ್ಲಿ ಶಕ್ತಿ ತುಂಬಿದೆ. ಎಲ್ಲರಿಗೂ ಅವಕಾಶ ಸಿಗಬೇಕಿದೆ ಎಂದು ಪ್ರಧಾನಿ ಪ್ರತಿಪಾದಿಸಿದ್ದಾರೆ.

ಬಡವರಿಗೆ ನೆರವಾಗಲು ಹಾಗೂ ಉದ್ಯೋಗ ಕಲ್ಪಿಸಲು ಆಸ್ತಿ ಸೃಷ್ಟಿಸುವ ಖಾಸಗಿ ವಲಯದ ಅಗತ್ಯವಿದೆ ಎಂದ ಮೋದಿ, ದೇಶದ ಎಲ್ಲವನ್ನೂ ಅಧಿಕಾರಶಾಹಿಯ ಕೈಗೆ ಕೊಡಲಾಗದು ಎಂದಿದ್ದಾರೆ.

ಗೊಬ್ಬರದ ಕಾರ್ಖಾನೆಗೂ ಐ.ಎ.ಎಸ್. ಅಧಿಕಾರಿಗಳು ಬೇಕು, ರಾಸಾಯನಿಕ ಕಾರ್ಖಾನೆ ನಡೆಸಲೂ ಐಎಎಸ್ ಅಧಿಕಾರಿಗಳು ಬೇಕು, ವಿಮಾನ ಓಡಿಸಲೂ ಐಎಎಸ್ ಅಧಿಕಾರಿಗಳೇ ಬೇಕೆಂದು ಹೇಳಲಾಗದು. ದೇಶವನ್ನು ಅಧಿಕಾರಿಶಾಹಿಯ ಕೈಗೆ ಕೊಟ್ಟು ನಾವೇನು ಮಾಡುತ್ತಿದ್ದೇವೆ? ಎಂಬ ಪ್ರಶ್ನೆಯನ್ನು ಮೋದಿ ಮುಂದಿಟ್ಟರು.

ಬಾಬುಗಳು (ಅಧಿಕಾರಶಾಹಿಗಳು) ದೇಶದವರಾದರೆ, ನಮ್ಮ ಯುವಕರೂ ಸಹ ದೇಶದವರೇ. ನಮ್ಮ ಯುವಕರಿಗೆ ಹೆಚ್ಚು ಅವಕಾಶ ಕೊಟ್ಟಷ್ಟೂ ಅಷ್ಟೇ ಲಾಭವಾಗಲಿದೆ ಎಂದು ಮೋದಿ ಹೇಳಿದರು.

# ಕೃಷಿ ಕಾಯ್ದೆ ತಿದ್ದುಪಡಿ ಹಿಂಪಡೆಗೆ ಒತ್ತಾಯ

ದಾವಣಗೆರೆ, ಫೆ.10- ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಮೂರು ಕೃಷಿ ಕಾಯ್ದೆಗಳ ವಿರುದ್ಧ ದೆಹಲಿಯಲ್ಲಿ ನಡೆಯುತ್ತಿರುವ ರೈತ ಹೋರಾಟಕ್ಕೆ ಜಿಲ್ಲಾ ಕಿಸಾನ್ ಕಾಂಗ್ರೆಸ್ ಬೆಂಬಲಿಸಿ ಜಿಲ್ಲಾಧ್ಯಕ್ಷ ಬಸವರಾಜು ವಿ. ಶಿವಗಂಗಾ ನೇತೃತ್ವದಲ್ಲಿ ರಕ್ತಪತ್ರ ಚಳುವಳಿ ನಡೆಸಿ, ಪ್ರಧಾನ ಮಂತ್ರಿಗಳಿಗೆ ರಕ್ತ ಪತ್ರವನ್ನು ಕಳುಹಿಸಲಾಯಿತು.

ನಗರದ ಮಂಡಿಪೇಟೆಯ ಪ್ರಧಾನ ಅಂಚೆ ಕಚೇರಿ ಮುಂಭಾಗದಲ್ಲಿ ಬಸವರಾಜು ವಿ. ಶಿವಗಂಗಾ ಮತ್ತು ಕಾರ್ಯಕರ್ತರು, ಭೂ ಸುಧಾರಣೆ, ಎಪಿಎಂಸಿ ಹಾಗೂ ವಿದ್ಯುತ್ ಕಾಯ್ದೆಗಳ ತಿದ್ದುಪಡಿಯನ್ನು ಹಿಂಪಡೆಯಬೇಕು ಎಂದು ರಕ್ತ ಪತ್ರ ಕಳುಹಿಸಿ ಒತ್ತಾಯಿಸಿದರು. ಬಳಿಕ ಜಿಲ್ಲಾ ಪಂಚಾಯ್ತಿ ಕಚೇರಿ ಮುಂಭಾಗ ಹೆದ್ದಾರಿ ತಡೆದು ಕೇಂದ್ರ ಮತ್ತು ಬಿಜೆಪಿ ಸರ್ಕಾರದ ವಿರುದ್ಧ ಹೋರಾಟ ಮಾಡಿದರು.

ಬಸವರಾಜು ವಿ. ಶಿವಗಂಗಾ ಮಾತನಾಡಿ, ಕಳೆದ 70 ದಿನಗಳಿಂದ ದೆಹಲಿಯಲ್ಲಿ ರೈತರು ಹೋರಾಟ ಮಾಡುತ್ತಿದ್ದರೂ ಕೇಂದ್ರ ಸರ್ಕಾರ ಯಾವುದೇ ಕಿವಿ ಕೇಳದಂತೆ ಕೂತಿದೆ. ಬಿಜೆಪಿ ಸರ್ಕಾರ ಆಡಳಿತಕ್ಕೆ ಬಂದ ದಿನದಿಂದಲೂ ರೈತರ ವಿರೋಧಿಯಾಗಿ ಕೆಲಸ ಮಾಡುತ್ತಿದ್ದು, ಅನ್ನದಾತರು ನಿರಂತರವಾಗಿ ಪ್ರತಿಭಟನೆ ಮಾಡುತ್ತಿದ್ದರೂ ಪ್ರಧಾನಿಗಳು ನೇರವಾಗಿ ಮಾತುಕತೆಗೆ ಮುಂದಾಗಿಲ್ಲ. ಬೀದಿಯಲ್ಲಿ ಹೋರಾಟ ಮಾಡುತ್ತಿರುವ ರೈತರ ಮೇಲೆ ಪೊಲೀಸರನ್ನು ಬಿಟ್ಟು ಹತ್ತಿಕ್ಕುವ ಕೆಲಸ ಮಾಡಲಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.



**ಜಿಲ್ಲಾ ಕಿಸಾನ್ ಕಾಂಗ್ರೆಸ್ ನಿಂದ ಪ್ರಧಾನಿ ಮೋದಿಗೆ ರಕ್ತ ಪತ್ರ**

ಸುಪ್ರೀಂ ಕೋರ್ಟ್ ಈ ಕಾಯ್ದೆಗಳನ್ನು ತಾತ್ಕಾಲಿಕವಾಗಿ ತಡೆ ಹಿಡಿದಿದೆ. ಆದರೂ ನರೇಂದ್ರ ಮೋದಿಯವರು ರೈತ ವಿರೋಧಿ ಕಾಯ್ದೆಗಳನ್ನು ಹಿಂಪಡೆಯದೇ ಮೊಂಡುತನ ಪ್ರದರ್ಶನ ಮಾಡುತ್ತಿದ್ದಾರೆ. ದೆಹಲಿಯಲ್ಲಿ ಹೋರಾಟ ಮಾಡುತ್ತಿರುವ ರೈತರನ್ನು ಬೆಂಬಲಿಸಿ ಕಿಸಾನ್ ಕಾಂಗ್ರೆಸ್ ಕಾರ್ಯಕರ್ತರು ರಕ್ತದಲ್ಲಿ ಪತ್ರ ಬರೆದು ಪ್ರಧಾನಿಯವರಿಗೆ ಕಳುಹಿಸಲಾಗಿದೆ. ನಮ್ಮ ಹೋರಾಟ ಸರ್ಕಾರ ತೊಲಗಬೇಕು ಇಲ್ಲವೇ, ರೈತ ವಿರೋಧಿ 3 ಕಾಯ್ದೆಗಳನ್ನು ಹಿಂಪಡೆಯಬೇಕು. ಕಾಯ್ದೆಗಳನ್ನ ಹಿಂಪಡೆಯುವ ವರೆಗೂ ನಮ್ಮ ಹೋರಾಟ ನಿಲ್ಲುವುದಿಲ್ಲ ಎಂದು ಕೇಂದ್ರ ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.

ಚಳುವಳಿಯಲ್ಲಿ ಜಿಲ್ಲಾ ಕಿಸಾನ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಎಸ್.ಕೆ. ಪ್ರವೀಣ್ ಕುಮಾರ್, ಜಿಲ್ಲಾ ಉಪಾಧ್ಯಕ್ಷ ಜಿ.ಆರ್. ಮಾಲತೇಶ್, ಜಿಲ್ಲಾ ಕಾರ್ಯದರ್ಶಿ ಮೊಹಮ್ಮದ್ ಜಿಕ್ರಿಯಾ, ಮಾಯಕೊಂಡ ಬ್ಲಾಕ್ ಅಧ್ಯಕ್ಷ ಹಾಲೇಶ್ ಬಸನಾಳ್, ದಾವಣಗೆರೆ ದಕ್ಷಿಣ ಅಧ್ಯಕ್ಷ ಜಿ. ಅಜ್ಜಪ್ಪ ಸೇರಿದಂತೆ ಇತರರು ಭಾಗವಹಿಸಿದ್ದರು.

## ಕೊಟ್ಟೂರಿನ ಎಪಿಎಂಸಿ ಅಧ್ಯಕ್ಷರಾಗಿ ನಾಗರಕಟ್ಟೆಯ ಎನ್.ಕೆ.ಮಾರುತಿ



ಕೊಟ್ಟೂರು, ಫೆ.10- ಕೊಟ್ಟೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ನಾಗರಕಟ್ಟೆಯ ಎನ್.ಕೆ.ಮಾರುತಿ ಅವರು ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ಜಿ.ಪರಮೇಶ್ವರಪ್ಪ ಅವರ ನಿಧನದಿಂದ ತೆರವಾಗಿದ್ದ ಕೊಟ್ಟೂರು ಎಪಿಎಂಸಿಗೆ ಉಜ್ಜಿನಿ ಕ್ಷೇತ್ರದಿಂದ ಆಯ್ಕೆಯಾಗಿರುವ ಮಾರುತಿ ಅವರು ಇಂದು ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಈ ಹಿಂದೆ ಅವರ ತಂದೆ ಎನ್. ಕೊಟ್ರಪ್ಪ ಅವರೂ ಸಹ ಕೊಟ್ಟೂರು ಎಪಿಎಂಸಿಗೆ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದರು. ಈ ಸಂದರ್ಭದಲ್ಲಿ ಉಜ್ಜಿನಿ ಜಿ.ಪಂ. ಸದಸ್ಯರಾದ ಎಂ.ಎಂ.ಜೆ ಹರ್ಷವರ್ಧನ್, ಸದಸ್ಯರಾದ ಅಮ್ಮನಕೆರೆ ಮಂಜಣ್ಣ, ಕಾವಾಲಿ ಶಿವಪ್ಪ, ಬೆನಕನಹಳ್ಳಿ ಡಿ.ಸೋಮಣ್ಣ, ಬೂದಿ ಶಿವಕುಮಾರ್ ಹಾಗೂ ಮುಖಂಡರಾದ ಗಂಗನಹಳ್ಳಿ ರಾಜಶೇಖರ್ ಅವರು ಅಭಿನಂದಿಸಿದರು.

## ಕುಕ್ಕುವಾಡದ ಆಂಜನೇಯ ಸಹಕಾರಿ ಆಡಳಿತ ಮಂಡಳಿಗೆ ಅವಿರೋಧ ಆಯ್ಕೆ

ದಾವಣಗೆರೆ, ಫೆ. 10 - ತಾಲ್ಲೂಕಿನ ಕುಕ್ಕುವಾಡದ ಶ್ರೀ ಆಂಜನೇಯ ಸೌಹಾರ್ದ ಸಹಕಾರಿ ನಿಯಮಿತದ 2020-21 ರಿಂದ 2024-25 ರ ಅವಧಿಗೆ ಮಂಡಳಿ ಸದಸ್ಯರ ಸ್ಥಾನಕ್ಕೆ 15 ಜನರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಜಿ.ಎಂ. ರುದ್ರೇಗೌಡ್ರು, ಜಿಎಸ್. ಶಿವಪ್ಪ, ಬಿ.ಹೆಚ್. ಶಿವನಗೌಡ್ರು ಹೊಸಬಿಸಿಲೇರಿ, ಕೆ.ಟಿ. ಚಂದ್ರಶೇಖರಪ್ಪ, ಕೆ. ಶರಣಪ್ಪ ಹೊಸಕೊಳೇನಹಳ್ಳಿ, ಜಿ.ಆರ್. ಹರ್ಷ, ಕೆ.ಜಿ. ಕೇದಾರಮೂರ್ತಿ, ಕೆ.ಎಂ. ಉಮೇಶ್, ಪಿ.ಎನ್. ಮಹೇಂದ್ರಪ್ಪ, ಶೋಭಾ ಸಿ. ಮುದ್ದಳ್ಳಿ ಹಾವೇರಿ, ಡಿ.ಎಂ. ಮಂಜುಳ, ಟಿ.ಎಂ. ಕರಿಬಸಪ್ಪ, ಕೆ.ಎ. ಮಹಮದ್, ಬಿ. ವೆಂಕಟೇಶ, ಕೆ.ಜಿ. ಯೋಗೇಂದ್ರಪ್ಪ ಅವರು ಆಯ್ಕೆಗೊಂಡಿದ್ದಾರೆ.

## ನಗರದಲ್ಲಿ ನಾಳೆ ಶ್ರೀ ಗಡಿ ಚೌಡೇಶ್ವರಿ ದೇವಸ್ಥಾನದ ವಾರ್ಷಿಕೋತ್ಸವ

ದಾವಣಗೆರೆ, ಫೆ.10- ಶ್ರೀ ಗಡಿ ಚೌಡೇಶ್ವರಿ ದೇವಸ್ಥಾನ ಟ್ರಸ್ಟ್ ವತಿಯಿಂದ ಕುಂದುವಾಡ ರಸ್ತೆಯಲ್ಲಿ ದೇವಿಯ 16 ನೇ ವಾರ್ಷಿಕೋತ್ಸವ ಮತ್ತು ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದ 12 ನೇ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ನಾಡಿದ್ದು ದಿನಾಂಕ 12, 13 ಹಾಗೂ 14 ರಂದು ಹಮ್ಮಿಕೊಳ್ಳಲಾಗಿದೆ.

ನಾಡಿದ್ದು ದಿನಾಂಕ 12 ರ ಶುಕ್ರವಾರ ಬೆಳಿಗ್ಗೆ 6.30 ಕ್ಕೆ ಪಂಚಾಮೃತ ಅಭಿಷೇಕದೊಂದಿಗೆ ಆರಂಭವಾಗಿ, ಬೆಳಿಗ್ಗೆ 8.30 ರಿಂದ 12.30 ರವರೆಗೆ ಚಂಡಿಕಾ ಹೋಮ ನಡೆಯಲಿದೆ. ದಿನಾಂಕ 13 ರ ಶನಿವಾರ ಬೆಳಿಗ್ಗೆ 6.30 ಕ್ಕೆ ಪಂಚಾಮೃತ ಅಭಿಷೇಕವಿದೆ. ಸಂಜೆ 6 ಗಂಟೆಗೆ ಶ್ರೀ ಗುರುವರ್ಯ ಪ್ರಭಾಕರ ಭುವಬೋದಲೆ ಮಹಾರಾಜ್ (ಪಂಡರಾಪುರ) ಇವರ ಸಮ್ಮುಖದಲ್ಲಿ ಪೋತಿ ಸ್ಥಾಪನೆ ಮಾಡುವರು. ರಾತ್ರಿ 7 ರಿಂದ 9 ರವರೆಗೆ ಭಜನೆ ಹಾಗೂ ಕೀರ್ತನೆ ನಡೆಯಲಿದೆ. ರಾತ್ರಿ 9.30 ಕ್ಕೆ ಪ್ರಸಾದ ವಿನಿಯೋಗವಿದೆ.

# ಮಲೇಬೆನ್ನೂರು : ಪುರಸಭೆ, ನಾಡ ಕಛೇರಿ ಅಧಿಕಾರಿ, ಸಿಬ್ಬಂದಿಗಳಿಗೆ ಕೋವಿಡ್ ಲಸಿಕೆ





ಮಲೇಬೆನ್ನೂರು, ಫೆ. 10 - ಇಲ್ಲಿನ ಪುರಸಭೆಯ ಮತ್ತು ನಾಡ ಕಛೇರಿಯ ಅಧಿಕಾರಿಗಳಿಗೆ ಹಾಗೂ ಸಿಬ್ಬಂದಿ ವರ್ಗದವರಿಗೆ ಮಂಗಳವಾರ ಮತ್ತು ಬುಧವಾರ 2ನೇ ಹಂತದಲ್ಲಿ ಕೋವಿಡ್ ಲಸಿಕೆ ನೀಡಲಾಯಿತು.

ಪುರಸಭೆ ಮುಖ್ಯಾಧಿಕಾರಿ ಧರಣೇಂದ್ರಕುಮಾರ್, ಉಪ ತಹಶೀಲ್ದಾರ್ ಆರ್. ರವಿ, ಕಂದಾಯ ನಿರೀಕ್ಷಕ ಆನಂದ್, ಗ್ರಾಮ ಲೆಕ್ಕಾಧಿಕಾರಿಗಳಾದ ಲೋಹಿತ್, ಮಾರುತಿ, ಪುರಸಭೆ ಅಧಿಕಾರಿಗಳಾದ ಗುರುಪ್ರಸಾದ್, ನವೀನ್, ಪರಶುರಾಮಪ್ಪ, ಚಿತ್ರಪ್ಪ, ಇಮ್ರಾನ್ ಸೇರಿದಂತೆ ಪೌರ ಕಾರ್ಮಿಕರು ಇಲ್ಲಿನ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಡಾ|| ಲಕ್ಷ್ಮಿದೇವಿ ಹಾಗೂ ಸಿಬ್ಬಂದಿಗಳಿಂದ ಲಸಿಕೆ ಹಾಕಿಸಿಕೊಂಡರು.

ಲಸಿಕೆ ಪಡೆದು ಸ್ವಲ್ಪ ಹೊತ್ತಿನ ನಂತರ ಮಾತನಾಡಿದ ಧರಣೇಂದ್ರಕುಮಾರ್, ಆರ್. ರವಿ, ಗುರುಪ್ರಸಾದ್ ಅವರು ಲಸಿಕೆಯಿಂದ ನಮಗೆ ಯಾವುದೇ ಅಡ್ಡಪರಿಣಾಮ ಕಾಣಿಸಿಕೊಂಡಿಲ್ಲ. ಎಲ್ಲರೂ ಧೈರ್ಯವಾಗಿ ಲಸಿಕೆ ಪಡೆಯಬಹುದು ಎಂದರು.

## ರೈತರು ಕುಂದುವಾಡ ಕೆರೆ ಹೂಳು ತೆಗೆದುಕೊಂಡು ಹೋಗಬಹುದು : ಜಿಲ್ಲಾಧಿಕಾರಿ ಬೀಳಗಿ

ದಾವಣಗೆರೆ, ಫೆ.10- ದಾವಣಗೆರೆ ಸ್ಮಾರ್ಟ್‌ಸಿಟಿ ವತಿಯಿಂದ ಕುಂದುವಾಡ ಕೆರೆ ಅಭಿವೃದ್ಧಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದ್ದು, ಅದರಲ್ಲಿರುವ ಹೂಳನ್ನು (ಫಲವತ್ತಾದ ಮಣ್ಣು) ರೈತರು ತಮ್ಮ ಜಮೀನುಗಳಿಗೆ ತೆಗೆದುಕೊಂಡು ಹೋಗಲು ವಿಚಾರಿಸುತ್ತಿದ್ದ ಹಿನ್ನೆಲೆಯಲ್ಲಿ ಆಸಕ್ತ ರೈತರು ತಮ್ಮ ಜಮೀನಿಗೆ ಅಗತ್ಯವಾದ ಹೂಳನ್ನು (ಫಲವತ್ತಾದ ಮಣ್ಣು) ತಮ್ಮ ಸ್ವಂತ ವಾಹನಗಳಲ್ಲಿ ತೆಗೆದುಕೊಂಡು ಹೋಗಬಹುದೆಂದು ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ತಿಳಿಸಿದ್ದಾರೆ.

## ನಗರದಲ್ಲಿ ಇಂದು ಕಾಂಗ್ರೆಸ್ ಪ್ರತಿಭಟನೆ

ಜಿಲ್ಲಾ ಕಾಂಗ್ರೆಸ್ ಸಮಿತಿಗಳ ವತಿಯಿಂದ ಮೂರು ಕೃಷಿ ಕಾಯ್ದೆಗಳನ್ನು ಹಿಂಪಡೆಯಬೇಕು ದಿನ ನಿತ್ಯ ಬಳಸುವ ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡಿರು ವುದನ್ನು ಖಂಡಿಸಿ ಇಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ. ಮಂಜಪ್ಪ ನೇತೃತ್ವದಲ್ಲಿ ಪ್ರತಿಭಟನೆ ಇಂದು ನಡೆಯಲಿದೆ.

ಬೆಳಿಗ್ಗೆ 11-30 ಕ್ಕೆ ಅಂಬೇಡ್ಕರ್ ವೃತ್ತದಲ್ಲಿ ಡಾ|| ಬಿ.ಆರ್.ಅಂಬೇಡ್ಕರ್ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡುವ ಮೂಲಕ ಮೆರವಣಿಗೆ ಆರಂಭಗೊಳ್ಳಲಿದೆ ಎಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ಅವರು ತಿಳಿಸಿದ್ದಾರೆ.

## ನಗರದಲ್ಲಿ ಇಂದು ದಾಸಶ್ರೇಷ್ಠರ ಸ್ಮರಣೆ

ನಾಟ್ಯಭಾರತಿ ಶಾಸ್ತ್ರೀಯ ನೃತ್ಯ ಮತ್ತು ಸಂಗೀತ ಕಲಾ ಕೇಂದ್ರದಿಂದ ಪುರಂದರದಾಸರ, ತ್ಯಾಗರಾಜರ, ವಾಗ್ಗೇಯಕಾರರ ಸ್ಮರಣೆಯು ಇಂದು ಸಂಜೆ 5.30 ಕ್ಕೆ ಆರ್.ಹೆಚ್. ಗೀತಾ ಮಂದಿರದಲ್ಲಿ ಜರುಗಲಿದೆ.

ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಕಾರ್ಯಕ್ರಮ ಉದ್ಘಾಟಿಸಲಿದ್ದು, ಹೆಚ್.ಬಿ. ಮಂಜುನಾಥ್, ಪ್ರಹ್ಲಾದ್‌ರಾವ್ ಮಾಗಳ ಮುಖ್ಯ ಅತಿಥಿ ಯಾಗಿ ಪಾಲ್ಗೊಳ್ಳಲಿದ್ದಾರೆ. ಕಲಾ ಕೇಂದ್ರದ ರಜನಿ ರಘುನಾಥ್ ಕುಲಕರ್ಣಿ ಅಧ್ಯಕ್ಷತೆ ವಹಿಸುವರು.

## ಜಿಗಳಿ ಕ್ಯಾಂಪ್‌ನಲ್ಲಿ ಕ್ರಿಕೆಟ್ ಟೂರ್ನಿಗೆ ಚಾಲನೆ



ಮಲೇಬೆನ್ನೂರು, ಫೆ. 10 - ವಿನಾಯಕ ನಗರ ಕ್ಯಾಂಪ್ ಸಮೀಪ ಇರುವ ಬಯಲು ಪ್ರದೇಶದಲ್ಲಿ ಜಿಗಳಿಯ ಮಿತ್ರ ಕ್ರಿಕೆಟರ್ಸ್ ವತಿಯಿಂದ 3ನೇ ವರ್ಷದ ವಾಲ್ಮೀಕಿ ಜಾತ್ರೆ ಅಂಗವಾಗಿ ಎರಡು ದಿನಗಳು ಹಮ್ಮಿಕೊಂಡಿದ್ದ ಟೆನ್ನಿಸ್ ಬಾಲ್ ಕ್ರಿಕೆಟ್ ಟೂರ್ನಿಯನ್ನು ಮಾಜಿ ಶಾಸಕ ಬಿ.ಪಿ. ಹರೀಶ್ ಬ್ಯಾಟಿಂಗ್ ಮಾಡುವ ಮೂಲಕ ಉದ್ಘಾಟಿಸಿದರು. ಮಿತ್ರ ಕ್ರಿಕೆಟರ್ಸ್‌ನ ಡಿ.ಕೆ. ಬಸವರಾಜ್ (ತಮ್ಮಿ) ಭಾನುವಳ್ಳಿ ಶಿವು, ಜಿ. ಬೇವಿನಹಳ್ಳಿಯ ಗದಿಗೇಶ್, ಕೀರ್ತಿ (ಪಾರ್ಥ) ಜಿ.ಎಸ್. ವಿಜಯಕುಮಾರ್ ಈ ವೇಳೆ ಹಾಜರಿದ್ದರು.

## ನಗರದ ಎಂ.ಎಂ ಕಾಲೇಜಿನಲ್ಲಿ ಇಂದು ಪೌರ ಶಿಕ್ಷಣ ಶಿಬಿರ

ಮಾಕನೂರು ಮಲ್ಲೇಶಪ್ಪ ಶಿಕ್ಷಣ ಮಹಾವಿದ್ಯಾಲಯದಲ್ಲಿ ಪೌರ ಶಿಕ್ಷಣ ಶಿಬಿರವನ್ನು ಇಂದಿನಿಂದ ದಿನಾಂಕ 13 ರವರೆಗೆ ಹಮ್ಮಿಕೊಳ್ಳಲಾಗಿದೆ. ಇಂದು ಬೆಳಿಗ್ಗೆ 10 ಗಂಟೆಗೆ ಶಿಬಿರದ ಉದ್ಘಾಟನೆ ನಡೆಯುವುದು. ಅಧ್ಯಕ್ಷತೆಯನ್ನು ಡಾ. ಹೆಚ್.ವಿ. ವಾಮದೇವಪ್ಪ ವಹಿಸುವರು. ಕೆ.ವೆಂಕಟೇಶ್ ಶಿಬಿರ ಉದ್ಘಾಟಿಸುವರು. ಡಾ. ಕೆ.ಟಿ. ನಾಗರಾಜನಾಯ್ಕ ಉಪಸ್ಥಿತರಿರುವರು.

# ಅಣಜಿ ಗ್ರಾ.ಪಂ.: ಜ್ಯೋತಿ ಅಧ್ಯಕ್ಷೆ, ಲೋಕೇಶ್ ಉಪಾಧ್ಯಕ್ಷ



ದಾವಣಗೆರೆ, ಫೆ. 9 - ತಾಲ್ಲೂಕಿನ ಅಣಜಿ ಗ್ರಾಮ ಪಂಚಾಯಿತಿಗೆ ಇಂದು ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಶ್ರೀಮತಿ ಜ್ಯೋತಿ ಶಶಿಕುಮಾರ್, ಉಪಾಧ್ಯಕ್ಷರಾಗಿ ಎನ್.ಬಿ. ಲೋಕೇಶ್ ಆಯ್ಕೆಯಾಗಿದ್ದಾರೆ.

ಸಾಮಾನ್ಯ ವರ್ಗದ ಮಹಿಳೆಗೆ ಮೀಸಲಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಅಣಜಿ ಗ್ರಾಮದ ಜ್ಯೋತಿ ಶಶಿಕುಮಾರ್ ಹಾಗೂ ಗಾಂಧಿನಗರದ ಶ್ರೀಮತಿ ಶಂಕ್ರಮ್ಮ ನಾಗರಾಜ್ ನಾಮಪತ್ರ ಸಲ್ಲಿಸಿದ್ದರು. ಅದೇ ರೀತಿ ಉಪಾಧ್ಯಕ್ಷ ಸ್ಥಾನಕ್ಕೆ ಅಣಜಿ ಗ್ರಾಮದ ಎನ್.ಬಿ. ಲೋಕೇಶ್ ಹಾಗೂ ಮೆಳ್ಳೇಕಟ್ಟೆ ಗ್ರಾಮದ ಬಿ.ಕೆ. ಮಂಜುನಾಥ ಅವರು ನಾಮಪತ್ರ ಸಲ್ಲಿಸಿದ್ದರು. ತಲಾ 13 ಮತಗಳನ್ನು ಗಳಿಸುವ ಮೂಲಕ ಅಧ್ಯಕ್ಷರಾಗಿ ಜ್ಯೋತಿ ಶಶಿಕುಮಾರ್, ಉಪಾಧ್ಯಕ್ಷರಾಗಿ ಎನ್.ಬಿ. ಲೋಕೇಶ್ ಅವರುಗಳು ಚುನಾಯಿತರಾದರು.

ಚುನಾವಣಾಧಿಕಾರಿಯಾಗಿದ್ದ ತೋಟಗಾರಿಕೆ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕರಾದ ಶ್ರೀಮತಿ ಟಿ.ಆರ್. ಶಶಿಕಲಾ ಅವರು ಅಧ್ಯಕ್ಷ-ಉಪಾ ಧ್ಯಕ್ಷರುಗಳ ಆಯ್ಕೆಯನ್ನು ಘೋಷಿಸಿದರು.

ಈ ಸಂದರ್ಭದಲ್ಲಿ ಎಪಿಎಂಸಿ ಅಧ್ಯಕ್ಷ ಅಣಜಿ ಎಸ್.ಕೆ. ಚಂದ್ರಶೇಖರ್, ಪಿ.ಎನ್. ಶಿವಪ್ರಕಾಶ್, ಸಂಗನಬಸಪ್ಪ, ಹೊನ್ನಪ್ಪ, ಬಸವಲಿಂಗಪ್ಪ, ಎನ್.ಕೆ. ಚನ್ನಪ್ಪ, ಎ.ಹೆಚ್. ಅಂಜಿನಪ್ಪ, ಕೆ. ನಾಗಪ್ಪ, ರಾಜಪ್ಪ, ನಾಗೇಂದ್ರಪ್ಪ, ಸಿದ್ದೇಶ್, ಎ.ಬಿ. ಚಂದ್ರಪ್ಪ, ಕೆ.ಪಿ. ರುದ್ರೇಶ್, ಮೆಳ್ಳೇಕಟ್ಟೆ ಶಿವನಗೌಡ್ರು, ಗುರುಬಸಪ್ಪ, ಡಿ.ಟಿ. ಹನುಮಂತಪ್ಪ, ದೇವರಾಜ್, ಸಿ.ಟಿ. ಕುಮಾರ, ಗೊಲ್ಲರಹಳ್ಳಿಯ ಶ್ರೀನಿವಾಸ್, ಈಶಪ್ಪ, ಶೇಖರಪ್ಪ, ತಿಮ್ಮಣ್ಣ, ಗಿರಿಯಾಪುರದ ಹನುಮಂತಪ್ಪ, ಅಂಜಿನಪ್ಪ, ರಂಗಸ್ವಾಮಿ, ಗಾಂಧಿನಗರದ ಜಯ್ಯಣ್ಣ, ನಾಗರಾಜ್, ಸಿದ್ದಣ್ಣ, ರೇವಣ್ಣ, ಚಂದ್ರಣ್ಣ ಮತ್ತಿತರರು ಉಪಸ್ಥಿತರಿದ್ದರು.

## ಅಪ ಪ್ರಚಾರ: 500 ಖಾತೆಗಳ ವಿರುದ್ಧ ಟ್ವಿಟ್ಟರ್ ಕ್ರಮ

ನವದಹೆಲಿ, ಫೆ. 10 - ರೈತರ ಪ್ರತಿಭಟನೆಗಳಿಗೆ ಸಂಬಂಧಿಸಿದಂತೆ ಅಪಪ್ರಚಾರ ಮಾಡುತ್ತಿರುವ ಹಾಗೂ ಪ್ರಚೋದನಕಾರಿಯಾಗಿ ವರ್ತಿಸುತ್ತಿರುವ ಕೆಲ ಟ್ವಿಟ್ಟರ್ ಖಾತೆಗಳನ್ನು ತಡೆಯಲು ಕೇಂದ್ರ ಸರ್ಕಾರ ತಿಳಿಸಿರುವ ಬಗ್ಗೆ ಭಾಗಶಃ ಕ್ರಮ ತೆಗೆದುಕೊಂಡಿರುವ ಟ್ವಿಟ್ಟರ್, 500ಕ್ಕೂ ಹೆಚ್ಚು ಖಾತೆಗಳನ್ನು ಅಮಾನತ್ತುಗೊಳಿಸಿದೆ ಹಾಗೂ ಇತರೆ ಕೆಲ ಖಾತೆಗಳನ್ನು ತಡೆದಿದೆ.

ಈ ಬಗ್ಗೆ ಹೇಳಿಕೆ ನೀಡಿರುವ ಟ್ವಿಟ್ಟರ್, ಸುದ್ದಿ ಮಾಧ್ಯಮಗಳು, ಪತ್ರಕರ್ತರು, ಕಾರ್ಯಕರ್ತರು ಹಾಗೂ ರಾಜಕಾರಣಿಗಳ ಖಾತೆಗಳನ್ನು ತಡೆದಿಲ್ಲ. ಇವುಗಳನ್ನು ತಡೆಯುವುದು ದೇಶದ ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕಿಗೆ ವಿರುದ್ಧವಾಗುತ್ತದೆ ಎಂದು ಹೇಳಿದೆ.

ಆದರೆ, ಟ್ವಿಟ್ಟರ್ ಈ ಬಗ್ಗೆ ಮಾಹಿತಿ ತಂತ್ರಜ್ಞಾನ ಕಾರ್ಯದರ್ಶಿ ಜೊತೆ ಉದ್ದೇಶಿತ ಚರ್ಚೆ ನಡೆಸುವ ಮುಂಚೆಯೇ ಕ್ರಮಗಳನ್ನು ಪ್ರಕಟಿಸಿರುವುದು ಅಸಾಮಾನ್ಯವಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ. ಖಾತೆಗಳ ವಿರುದ್ಧ ಕ್ರಮ ತೆಗೆದುಕೊಳ್ಳುವುದಕ್ಕೆ ಸಂಬಂಧಿಸಿದಂತೆ ಮಾಹಿತಿ ತಂತ್ರಜ್ಞಾನ ಸಚಿವಾಲಯದ ಕಾರ್ಯದರ್ಶಿ ಜೊತೆ ಮಾತುಕತೆಗೆ ಟ್ವಿಟ್ಟರ್ ಕೇಳಿಕೊಂಡಿತ್ತು. ಇದಕ್ಕೆ ಮುಂಚೆಯೇ ಟ್ವಿಟ್ಟರ್ ಕ್ರಮ ತೆಗೆದುಕೊಂಡಿರುವುದು ಅಸಾಮಾನ್ಯವಾಗಿದೆ ಎಂದು ಮಾಹಿತಿ ತಂತ್ರಜ್ಞಾನ ಸಚಿವಾಲಯ ಕೂ ಆಪ್‌ನಲ್ಲಿ ಪ್ರತಿಕ್ರಿಯೆ ನೀಡಿದೆ. ಕೂ ದೇಶೀಯ ಆಪ್ ಆಗಿದ್ದು, ಇದು ಟ್ವಿಟ್ಟರ್‌ಗೆ ಭಾರತದಲ್ಲಿ ಪ್ರತಿಸ್ಪರ್ಧಿಯಾಗಿದೆ.

ಟ್ವಿಟ್ಟರ್ ಕ್ರಮದ ಬಗ್ಗೆ ಕೂ ಆಪ್‌ನಲ್ಲಿ ಸರ್ಕಾರ ಶೀಘ್ರದಲ್ಲೇ ಪ್ರತಿಕ್ರಿಯೆ ನೀಡಲಿದೆ ಎಂದೂ ತಿಳಿಸಲಾಗಿದೆ.

ಪಾಕಿಸ್ತಾನ ಹಾಗೂ ಖಲಿಸ್ತಾನದ ಜೊತೆ ಸಂಬಂಧ ಹೊಂದಿರುವ 1,178 ಟ್ವಿಟ್ಟರ್ ಖಾತೆಗಳ ವಿರುದ್ಧ ಕ್ರಮ ತೆಗೆದುಕೊಳ್ಳಬೇಕೆಂದು ಕೇಂದ್ರ ಸರ್ಕಾರ ಅಮೆರಿಕದ ಕಂಪನಿಗೆ ತಿಳಿಸಿತ್ತು. ಈ ಪೈಕಿ ಸುಮಾರು 500 ಖಾತೆಗಳ ಬಗ್ಗೆ ಟ್ವಿಟ್ಟರ್ ಕ್ರಮ ತೆಗೆದುಕೊಂಡಿದೆ. ಆದರೆ, ಯಾವ ಖಾತೆಗಳ ವಿರುದ್ಧ ಕ್ರಮ ತೆಗೆದುಕೊಳ್ಳಲಾಗಿದೆ ಎಂಬುದನ್ನು ಟ್ವಿಟ್ಟರ್ ತಿಳಿಸಿಲ್ಲ.

## ರೈಸಿಂಗ್ ಮೇನ್ ಪೈಪ್‌ಲೈನ್ ಅಳವಡಿಸಲು ಜಿಲ್ಲಾಧಿಕಾರಿ ಸ್ಥಳ ವೀಕ್ಷಣೆ



**ಭರಮಸಾಗರ ಏತ ನೀರಾವರಿ ಯೋಜನೆ**

ದಾವಣಗೆರೆ, ಫೆ.10- ಭರಮಸಾಗರದ ಏತ ನೀರಾವರಿ ಯೋಜನೆ ಕಾಮಗಾರಿಗೆ ಸಂಬಂಧಿಸಿದಂತೆ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿ ರೈಸಿಂಗ್ ಮೇನ್ ಪೈಪ್‌ಲೈನ್ ಅಳವಡಿಸುವ ಕುರಿತು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರು ಸಂಬಂಧಿಸಿದ ಅಧಿಕಾರಿಗಳೊಂದಿಗೆ ಹದಡಿ ರಸ್ತೆಯ ಲೋಕಿಕೆರೆ ಬ್ರಿಡ್ಜ್ ಬಳಿ ಬುಧವಾರ ಸ್ಥಳ ವೀಕ್ಷಣೆ ಮಾಡಿದರು. ಈ ವೇಳೆ ಎಇಇ, ಎನ್‌ಹೆಚ್‌ಎಐ ಅಧಿಕಾರಿಗಳು, ಶಿರಮಗೊಂಡನಹಳ್ಳಿ ಗ್ರಾಮಸ್ಥರು, ರವೀಂದ್ರನಾಥ್ ಬಡಾವಣೆ ನಿವಾಸಿಗಳು ಇದ್ದರು.

# ರಂಭಾಪುರಿ ಶ್ರೀಗಳ 30ನೇ ವರ್ಷದ ಪೀಠಾರೋಹಣ ವರ್ಧಂತಿ

ರಂಭಾಪುರಿ ಪೀಠ (ಬಾಳೆಹೊನ್ನೂರು) ಫೆ. 10 - ಮಾನವನ ಬದುಕು ಅನೇಕ ಒತ್ತಡಗಳಿಂದ ಕೂಡಿದೆ. ಸಮಸ್ಯೆ ಸವಾಲುಗಳ ಮಧ್ಯ ಸಿಲುಕಿ ಸಂಕಷ್ಟಕ್ಕೆ ಒಳಗಾಗುತ್ತಿದ್ದಾನೆ. ಆತ್ಮಬಲ ಮತ್ತು ಮನೋಬಲ ಸಂವರ್ಧಿಗೆ ಧ್ಯಾನ, ಜ್ಞಾನ ಮತ್ತು ಅಧ್ಯಾತ್ಮಿಕ ಚಿಂತನೆಗಳು ಅವಶ್ಯಕವಾಗಿ ಬೇಕಾಗಿವೆ ಎಂದು ಶ್ರೀ ರಂಭಾಪುರಿ ಪೀಠದ ಡಾ. ವೀರ ಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟಿದ್ದಾರೆ.

ಶ್ರೀ ರಂಭಾಪುರಿ ಪೀಠದಲ್ಲಿ ತಮ್ಮ 30ನೇ ವರ್ಷದ ಪೀಠಾರೋಹಣ ವರ್ಧಂತಿ ಅಂಗವಾಗಿ ಇಂದಿನಿಂದ ಐದು ದಿನಗಳ ಕಾಲ ಹಮ್ಮಿಕೊಂಡಿರುವ ಶತರುದ್ರ ಯಾಗ ಮಹಾಪೂಜೆ ಪ್ರಾರಂಭೋತ್ಸವ ನೆರವೇರಿಸಿ ಜಗದ್ಗುರುಗಳು ಆಶೀರ್ವಚನ ನೀಡಿದರು.

ಶಾಂತಿ ಮತ್ತು ಕೀರ್ತಿ ಎಲ್ಲರೂ ಬಯಸುವುದು ಸಹಜ. ಸಾಮಾಜಿಕ ಸಂಪ್ರದಾಯಗಳು ಬದಲಾಗಬಹುದು. ಆದರೆ ನೈತಿಕ ನಿಯಮಗಳು ಯಾವಾಗಲೂ ಶಾಶ್ವತವಾಗಿರುತ್ತವೆ. ವಿಚಾರ ವಿಮರ್ಶೆಗಳು ನಮ್ಮ ಸಂಸ್ಕೃತಿಯ ಮೇಲೆ ಹೊಸ ಬೆಳಕು ಮೂಡಿಸಬೇಕೇ ವಿನಃ ಜನರನ್ನು ನಾಸ್ತಿಕರನ್ನಾಗಿ ಮಾಡಬಾರದು. ಧರ್ಮಾಚರಣೆ ಇಲ್ಲದ ಮನುಷ್ಯನ ವ್ಯಕ್ತಿತ್ವಕ್ಕೆ ಬೆಲೆ ನೆಲೆ ಸಿಗದು. ಆಹಾರ, ನೀರು ದೇಹ ವಿಕಾಸಗೊಳಿಸಿದರೆ ಧರ್ಮ ಬದುಕನ್ನು ವಿಕಾಸಗೊಳಿಸಿ ಅಭಿವೃದ್ಧಿ ಪಥದತ್ತ ಸಾಗಿಸುತ್ತದೆ. ಸಾಮಾಜಿಕ ವ್ಯವಸ್ಥೆಯಲ್ಲಿ ನೀತಿ ಸಂಹಿತೆ ಇಲ್ಲದ ಕಾರಣ ದಿಕ್ಕು ದಾರಿ ತಪ್ಪಿ ಮನುಷ್ಯ ಬದುಕುತ್ತಿರುವುದರಿಂದ ಜೀವನ ಅಶಾಂತಿಗೆ ಕಾರಣವಾಗಿದೆ. ಶ್ರೀ ಜಗದ್ಗುರು ರೇಣುಕಾಚಾರ್ಯರು ಮೌಲ್ಯಾಧಾರಿತ ಜೀವನ ವ್ಯವಸ್ಥೆಗೆ ಆದರ್ಶವಾದ ದಾರಿ ತೋರಿಸಿದ್ದಾರೆ ಎಂದರು.

ಶತರುದ್ರ ಯಾಗದ ನೇತೃತ್ವ ವಹಿಸಿದ ಕಣ್ವಕುಪ್ಪಿ ಗವಿಮಠದ ಡಾ. ನಾಲ್ವಡಿ ಶಾಂತಲಿಂಗ ಶಿವಾಚಾರ್ಯ ಸ್ವಾಮೀಜಿ, ಸಿದ್ಧರಬೆಟ್ಟ ಕ್ಷೇತ್ರದ ಶ್ರೀ ವೀರಭದ್ರ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಬೆಳೆಯುವ ಜನಾಂಗದಲ್ಲಿ ದೇವರಲ್ಲಿ ಶ್ರದ್ಧೆ ಆಚರಣೆಯಲ್ಲಿ ನಂಬಿಗೆ ಮಾಡುವ ಕೆಲಸದಲ್ಲಿ ತನ್ಮಯತೆ ಬೆಳೆದು ಬಂದರೆ ಬಾಳು ಉಜ್ವಲಗೊಳ್ಳುವುದೆಂದರು.

ಸಿಂಧನೂರು, ಕೆಂಭಾವಿ, ಸಂಗೊಳ್ಳಿ, ಮಸ್ಕಿ, ದೊಡ್ಡಸಗರ ಹಿರೇಮಠ, ದೊಡ್ಡಸಗರ ನಾಗಠಾಣ ಹಿರೇಮಠ, ಚಿಮ್ಮಲಗಿ ಮತ್ತು ಸಾತನೂರು ಶ್ರೀಗಳು ಪಾಲ್ಗೊಂಡಿದ್ದರು. ಪೂಜಾ ಸೇವಾ ಕರ್ತರಾಗಿ ಚಿಕ್ಕಮಗಳೂರಿನ ಸಿ.ವಿ.ಮಲ್ಲಿಕಾರ್ಜುನ, ಗದಗಿನ ರಾಜು ಮಲ್ಲಾಡದ, ಸೋಮಣ್ಣ ಮಲ್ಲಾಡದ, ಬೆಂಗಳೂರಿನ ಗಣೇಶ ಕುಮಾರ್, ಜೆಮ್ ಶಿವು, ದಾವಣಗೆರೆ ಬಸವರಾಜ-ಭಾರತಿ ಹಾಗೂ ಶಿವಮೊಗ್ಗದ ಶಾಂತಾ ಆನಂದ ಪಾಲ್ಗೊಂಡಿದ್ದರು.

ಬೆಂಗಳೂರಿನ ವೇದ ವಿದ್ವಾಂಸ ಚನ್ನಬಸವಾರಾಧ್ಯರು, ಶಿವಶಂಕರ ಶಾಸ್ತ್ರಿ, ಹೊನ್ನಪ್ಪಾಜಿ ಶಾಸ್ತ್ರಿ, ಚಿಕ್ಕಮಗಳೂರಿನ ವಿರೂಪಾಕ್ಷ ಶಾಸ್ತ್ರಿ, ಹಾಸನದ ದೇವರಾಜ ಶಾಸ್ತ್ರಿ, ರಂಭಾಪುರಿ ಪೀಠದ ದಾರುಕಾಚಾರ್ಯ ಶಾಸ್ತ್ರಿ, ಶಿವಪ್ರಕಾಶ ಶಾಸ್ತ್ರಿ ಅವರುಗಳು ಶತರುದ್ರ ಯಾಗ ಪೂಜೆಯನ್ನು ಪ್ರಾರಂಭಿಸಿದರು.



ರಂಭಾಪುರಿ ಪೀಠದಲ್ಲಿ ಐದು ದಿನಗಳ ಶತರುದ್ರ ಯಾಗ ಮಹಾಪೂಜೆ ಆರಂಭ

# 12 ಬಂದರು ಸ್ವಾಯತ್ತತೆ ಮಸೂದೆಗೆ ಸಂಸತ್ತಿನ ಒಪ್ಪಿಗೆ

**ಬಂದರುಗಳ ಖಾಸಗೀಕರಣವಿಲ್ಲ ಎಂದು ಕೇಂದ್ರ ಸರ್ಕಾರದ ಸ್ಪಷ್ಟನೆ**

ನವದೆಹಲಿ, ಫೆ. 10 – ದೇಶದ ಪ್ರಮುಖ 12 ಬಂದರುಗಳಿಗೆ ಸ್ವಾಯತ್ತತೆ ನೀಡುವ 'ಬಂದರುಗಳ ಪ್ರಾಧಿಕಾರ ಮಸೂದೆ'ಗೆ ಸಂಸತ್ತು ಒಪ್ಪಿಗೆ ನೀಡಿದೆ. ಈ ಬಗ್ಗೆ ಹೇಳಿಕೆ ನೀಡಿರುವ ಕೇಂದ್ರ ಬಂದರು ಸಚಿವ ಮನ್‌ಸುಖ್ ಮಾಂಡವೀಯ, ಸ್ವಾಯತ್ತತೆ ನೀಡಲು ಹಾಗೂ ಬಂದರುಗಳ ನಿರ್ಧಾರ ಪ್ರಕ್ರಿಯೆಗಳನ್ನು ಸಶಕ್ತಗೊಳಿಸಲು ಕ್ರಮ ತೆಗೆದುಕೊಳ್ಳಲಾಗಿದೆ ಎಂದಿದ್ದಾರೆ.

ರಾಜ್ಯಸಭೆಯಲ್ಲಿ ಬುಧವಾರ ಮತ ಪತ್ರಗಳ ಮೂಲಕ ಮಸೂದೆಯನ್ನು ಅಂಗೀಕರಿಸಲಾಗಿದೆ. ಮಸೂದೆಯ ಪರವಾಗಿ 84 ಹಾಗೂ ವಿರುದ್ಧವಾಗಿ 44 ಮತಗಳು ಚಲಾವಣೆಯಾಗಿವೆ. ಕಳೆದ ವರ್ಷ ಸೆಪ್ಟೆಂಬರ್ 23ರಂದು ಲೋಕಸಭೆಯಲ್ಲಿ ಮಸೂದೆ ಅಂಗೀಕರಿಸಲಾಗಿತ್ತು.

ಸದನದ ಕೆಲ ಸದಸ್ಯರು ಮಸೂದೆಯ ಬಗ್ಗೆ ಆಕ್ಷೇಪಿಸಿರುವುದನ್ನು ಬಲವಾಗಿ ತಳ್ಳಿ ಹಾಕಿರುವ ಮಾಂಡವೀಯ, ಈ ಮಸೂದೆಯಿಂದ ಬಂದರುಗಳು ವಿಶ್ವ ದರ್ಜೆಗೆ ಪರಿವರ್ತನೆಯಾಗಲಿವೆ. ಸ್ವಂತ ನಿರ್ಧಾರವನ್ನು ತೆಗೆದುಕೊಳ್ಳಲು ಸಾಧ್ಯವಾಗಲಿದೆ ಎಂದಿದ್ದಾರೆ.

ಯಾವ ದೇಶಪ್ರೇಮಿ ಮಸೂದೆಯನ್ನು ವಿರೋಧಿಸುತ್ತಾನೆ? ಇದು ಬಂದರು ಖಾಸಗೀಕರಣ ಮಸೂದೆಯಲ್ಲ. ಇದಕ್ಕೂ ಖಾಸಗೀಕರಣಕ್ಕೂ ಸಂಬಂಧವಿಲ್ಲ. ಬಂದರು ಖಾಸಗೀಕರಣ ಮಾಡುವುದಿಲ್ಲ ಎಂದು ಮಾಜಿ ಹಣಕಾಸು ಸಚಿವ ಅರುಣ್ ಜೇಟ್ಲಿ ಹಾಗು ಮಾಜಿ ಬಂದರು ಸಚಿವ ನಿತಿನ್ ಗಡ್ಕರಿ ಅವರು ಈ ಹಿಂದೆಯೂ ಸ್ಪಷ್ಟಪಡಿಸಿದ್ದರು. ಮಸೂದೆಯು ಬಂದರುಗಳನ್ನು ಮಾರುವುದಕ್ಕಲ್ಲ ಎಂದಿದ್ದಾರೆ.

ಕಾಂಗ್ರೆಸ್, ತೃಣಮೂಲ ಕಾಂಗ್ರೆಸ್, ಸಮಾಜವಾದಿ ಪಕ್ಷ, ಆರ್.ಜೆ.ಡಿ, ಡಿಎಂಕೆ, ಆಮ್ ಆದ್ಮಿ ಪಾರ್ಟಿ, ಸಿಪಿಐ (ಎಂ) ಹಾಗೂ ಸಿಪಿಐಗಳು ಮಸೂದೆಯ ಬಗ್ಗೆ ರಾಜ್ಯಸಭೆಯಲ್ಲಿ ಆಕ್ಷೇಪಿಸಿದವು. ಬಂದರುಗಳ ಖಾಸಗೀರಣಕ್ಕೆ ಹಾಗೂ ಖಾಸಗಿಯವರಿಗೆ ಲಾಭ ಮಾಡಿಕೊಡಲು, ಬಂದರುಗಳನ್ನು ಲೂಟಿ ಮಾಡಲು ಉದ್ದೇಶಿಸಲಾಗಿದೆ ಎಂದು ಆರೋಪಿಸಿದವು.

ಆದರೆ, ಬಿ.ಜೆ.ಡಿ., ಜೆಡಿ (ಯು), ವೈ.ಎಸ್.ಆರ್. ಸಿ.ಪಿ. ಪಕ್ಷಗಳು ಮಸೂದೆಗೆ ಬೆಂಬಲಿಸಿದ್ದು, ಇದರಿಂದ ಬಂದರುಗಳಿಗೆ ಮೂಲಭೂತ ಸೌಲಭ್ಯ ದೊರೆಯಲಿವೆ ಎಂದಿದ್ದಾರೆ.

ಪ್ರತಿಪಕ್ಷಗಳನ್ನು ತರಾಟೆ ತೆಗೆದುಕೊಂಡ ಮಾಂಡವೀಯ ಕೇರಳ, ತಮಿಳುನಾಡು, ಆಂಧ್ರ ಪ್ರದೇಶ ಹಾಗೂ ಮಹಾರಾಷ್ಟ್ರ ಸರ್ಕಾರಗಳು ಬಂದರುಗಳನ್ನು ಅಭಿವೃದ್ಧಿಪಡಿಸಲು ಖಾಸಗಿಯವರಿಗೆ ವಹಿಸಿಲ್ಲವೇ? ಇದು ನರೇಂದ್ರ ಮೋದಿ ಸರ್ಕಾರದ ಅವಧಿಯಲ್ಲಿ ನಡೆದಿತ್ತೇ? ಎಂದು ಪ್ರಶ್ನಿಸಿದರು.

ಮೋದಿ ನೇತೃತ್ವದ ಸರ್ಕಾರ ಒಕ್ಕೂಟ ವ್ಯವಸ್ಥೆಯಲ್ಲಿ ನಂಬಿಕೆ ಇರಿಸಿದೆ. ಬಂದರಿನಲ್ಲಿ ರಾಜ್ಯ ಸರ್ಕಾರದ ಪ್ರತಿನಿಧಿಗಳನ್ನು ತೆಗೆಯುವುದಿಲ್ಲ. ಸರ್ಕಾರ ಕೊಲ್ಕೊತಾ ಬಂದರನ್ನು ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿ ಪಡಿಸಿದೆ. ನಾವು ಪಿಂಚಣಿದಾರರ ಎಲ್ಲ ಬಾಕಿ ತೀರಿಸಿದ್ದೇವೆ. ಬಂದರುಗಳು ಈಗ ಲಾಭದಲ್ಲಿವೆ. ಇದು ಸುಧಾರಣೆಯ ಕಾರಣದಿಂದ ಆಗಿದೆ ಎಂದು ಸಚಿವರು ತಿಳಿಸಿದ್ದಾರೆ.

ಖಾಸಗಿ ಕಂಪನಿಗಳು ಹಾಗೂ ಸರ್ಕಾರಿ ಸಹಭಾಗಿತ್ವದಲ್ಲಿ ಕಾರ್ಯ ನಿರ್ವಹಿಸುತ್ತಿರುವವರ ನಡುವೆ ಸಮಸ್ಯೆಗಳು ಉದ್ಭವಿಸಿವೆ. ಆದರೆ, ಈಗಿರುವ ಕಾನೂನುಗಳಲ್ಲಿ ಸಮಸ್ಯೆ ಬಗೆಹರಿಸಲು ಅವಕಾಶವಿಲ್ಲ. ಇದಕ್ಕೆ ನೂತನ ಕಾನೂನು ನೆರವಾಗಲಿದೆ ಎಂದೂ ಸಚಿವರು ಹೇಳಿದ್ದಾರೆ.

## ಮಳಲ್ಕೆರೆ ಗ್ರಾ.ಪಂ.ಗೆ ರೇಣುಕಮ್ಮ ಅಣ್ಣಪ್ಪ ಅಧ್ಯಕ್ಷೆ, ಸರಸ್ವತಿ ಅರುಣ್ ಉಪಾಧ್ಯಕ್ಷೆ



ದಾವಣಗೆರೆ, ಫೆ.10 - ತಾಲ್ಲೂಕಿನ ಮಳಲ್ಕೆರೆ ಗ್ರಾ.ಪಂ. ಅಧ್ಯಕ್ಷರಾಗಿ ಶ್ರೀಮತಿ ರೇಣುಕಮ್ಮ ಅಣ್ಣಪ್ಪ ಮತ್ತು ಉಪಾಧ್ಯಕ್ಷರಾಗಿ ಶ್ರೀಮತಿ ಸರಸ್ವತಿ ಅರುಣ್ ಕುಮಾರ್ ಅವರುಗಳು ನಿನ್ನೆ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

## ಗುಡಾಳು ಗ್ರಾ.ಪಂ.ಗೆ ಸುಮ ನಟರಾಜ್ ಅಧ್ಯಕ್ಷೆ, ಶಿವಕುಮಾರ್ ಉಪಾಧ್ಯಕ್ಷ



ದಾವಣಗೆರೆ, ಫೆ.10- ತಾಲ್ಲೂಕಿನ ಗುಡಾಳು ಗ್ರಾಮ ಪಂಚಾಯ್ತಿ ಅಧ್ಯಕ್ಷರಾಗಿ ವಿ.ಸಿ. ಸುಮ ನಟರಾಜ್ ಹಾಗೂ ಉಪಾಧ್ಯಕ್ಷರಾಗಿ ಡಿ.ಆರ್. ಶಿವಕುಮಾರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

# ಪಾದಯಾತ್ರೆ ಪೂರೈಸಿದ ಕಾಗಿನೆಲೆ ಶ್ರೀಗಳಿಗೆ ಹರಿಹರದಲ್ಲಿ ಸ್ವಾಗತ

ಹರಿಹರ, ಫೆ. 10 - ಕುರುಬ ಸಮಾಜಕ್ಕೆ ಎಸ್.ಟಿ. ಮೀಸಲಾತಿಗಾಗಿ ಶ್ರೀ ಕಾಗಿನೆಲೆ ಗುರುಪೀಠದಿಂದ ಬೆಂಗಳೂರಿನವರೆಗೆ ಕನಕ ಗುರುಪೀಠದ ಶ್ರೀ ನಿರಂಜನಾನಂದಪುರಿ ಸ್ವಾಮೀಜಿ ಪಾದಯಾತ್ರೆ ಹಾಗೂ ಬೃಹತ್ ಸಮಾವೇಶ ಮಾಡಿದ ನಂತರ ಹರಿಹರ ನಗರಕ್ಕೆ ಇಂದು ಆಗಮಿಸಿದಾಗ, ಶ್ರೀಗಳನ್ನು ಮೆರವಣಿಗೆ ಮೂಲಕ ಅದ್ಧೂರಿಯಾಗಿ ಬರಮಾಡಿಕೊಳ್ಳಲಾಯಿತು.

ಶ್ರೀ ನಿರಂಜನಾನಂದಪುರಿ ಸ್ವಾಮೀಜಿ ಶ್ರೀ ರೇವಣಸಿದ್ದೇಶ್ವರ ಹಾಗೂ ಬೀರಪ್ಪ ಸ್ವಾಮಿಯ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ ನಂತರ ಕನಕ ಗುರುಪೀಠದ ಬೆಳ್ಳೂಡಿ ಶಾಖಾ ಮಠಕ್ಕೆ ತೆರಳಿದರು.



ಶಾಸಕ ಎಸ್. ರಾಮಪ್ಪ, ಕುರುಬ ಸಮಾಜದ ಅಧ್ಯಕ್ಷ ಕೆ. ಜಡಿಯಪ್ಪ, ಪ್ರಧಾನ ಕಾರ್ಯದರ್ಶಿ ಕೆ.ಪಿ. ಗಂಗಾಧರ್ ಮಲೇಬೆನ್ನೂರು, ದೇವೇಂದ್ರಪ್ಪ ಕುಣೆಬೆಳಕೇರಿ, ನಗರಸಭೆ ಮಾಜಿ ಅಧ್ಯಕ್ಷ ಬಿ. ರೇವಣಸಿದ್ದಪ್ಪ, ಪ್ರಾಂಶುಪಾಲ ಬೀರಪ್ಪ, ವಕೀಲ ಎಂ. ನಾಗೇಂದ್ರಪ್ಪ, ಸುರೇಶ್ ಚಂದಪೂರ್, ನಗರಸಭೆ ಸದಸ್ಯ ಎಸ್.ಎಂ. ವಸಂತ್, ನಂದಿಗಾವಿ ಶ್ರೀನಿವಾಸ್, ಜಗದೀಶ್ ಚೂರಿ, ಎಂ.ಹೆಚ್.ಬಿ. ಚಂದ್ರಶೇಖರ್, ವಿಜಯ ಮಹಾಂತೇಶ್, ಸಿ.ಎನ್. ಹುಲಿಗೇಶ್, ಯತಿರಾಜ್, ಹನುಮಂತಪ್ಪ, ತಿಪ್ಪೇಶ್, ಕುಂಬಳೂರು ವಿರೂಪಾಕ್ಷಪ್ಪ, ಸಿ.ಎನ್. ಮಂಜುನಾಥ್, ನಗರಸಭೆ ಮಾಜಿ ಸದಸ್ಯೆ ಡಿ.ವೈ. ಇಂದ್ರಮ್ಮ, ತಾ.ಪಂ. ಮಾಜಿ ಅಧ್ಯಕ್ಷ ಅಣ್ಣೇಶ್ ಐರಣಿ, ಎರೇಸೀಮಿ ನಾಗರಾಜ್, ಪರಮೇಶ್ವರಪ್ಪ ಮತ್ತಿತರರು ಈ ಸಂದರ್ಭದಲ್ಲಿ ಹಾಜರಿದ್ದರು.

# ಕೃಷಿ ನವೋದ್ಯಮ ತಾಣವನ್ನಾಗಿಸಲು ಕ್ರಮ



ಬೆಂಗಳೂರು, ಫೆ.10 - ಕರ್ನಾಟಕ ರಾಜ್ಯವನ್ನು ಅಗ್ರಿ ಸ್ಟಾರ್ಟಪ್ ಹಬ್ (ಕೃಷಿ ನವೋದ್ಯಮ ತಾಣ) ಆಗಿಸುವ ಮಹತ್ತರ ಗುರಿ ಹೊಂದಿರುವುದಾಗಿ ಕೃಷಿ ಸಚಿವ ಬಿ.ಸಿ.ಪಾಟೀಲ್ ಹೇಳಿದ್ದಾರೆ.

ಎಫ್‌ಐಸಿಸಿ ಶೃಂಗಸಭೆಯಲ್ಲಿ ಪಾಲ್ಗೊಂಡು ಕೃಷಿ ನವೋದ್ಯಮಿಗಳಿಗೆ ಆನ್‌ಲೈನ್ ಮೂಲಕ ಪ್ರಶಸ್ತಿ ಪ್ರದಾನ ಮಾಡಿ ಸಚಿವರು ಮಾತನಾಡುತ್ತಿದ್ದರು.

ರಾಜಧಾನಿ ಬೆಂಗಳೂರು ಸ್ಟಾರ್ಟಪ್ ಹಬ್ ಎಂದೇ ಪ್ರಖ್ಯಾತಿ ಹೊಂದಿದೆ. 6000 ಸ್ಟಾರ್ಟಪ್‌ಗಳಿದ್ದರೂ ಸಹ ಬಹಳ ಕಡಿಮೆ ಸಂಖ್ಯೆಯಲ್ಲಿ ಅಗ್ರಿ ಸ್ಟಾರ್ಟಪ್‌ಗಳಿವೆ. ಕೃಷಿಗೆ ಮತ್ತು ಕೃಷಿಕರಿಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಬೆಂಗಳೂರಿನಲ್ಲಿ ಹೆಚ್ಚಿನ ಸಂಖ್ಯೆಯ ಅಗ್ರಿ ಸ್ಟಾರ್ಟಪ್ ಹಬ್‌ಗಳನ್ನು ಸ್ಥಾಪಿಸಿ ಬೆಂಗಳೂರನ್ನು ಅಗ್ರಿ ಸ್ಟಾರ್ಟಪ್ ಹಬ್‌ನ್ನಾಗಿಸುವ ಗುರಿ ಹೊಂದಿರುವುದಾಗಿ ಹೇಳಿದರು.

ಅಗ್ರಿ ಸ್ಟಾರ್ಟಪ್‌ಗಳು ಕೃಷಿಯಲ್ಲಿ ಸರಪಳಿಯಂತೆ ಕೆಲಸ ಮಾಡುತ್ತಿದ್ದು, ಇದರಿಂದ ರೈತರಿಗೂ ಹಾಗೂ ಗ್ರಾಹಕರಿಗೂ ದಕ್ಷ ಹಾಗೂ ನವೀನ ಉತ್ಪನ್ನಗಳು ತಂತ್ರಜ್ಞಾನ ಸೇವೆಗಳು ಲಭ್ಯವಾಗಲಿವೆ. ಬೆಂಗಳೂರನ್ನು ಸ್ಟಾರ್ಟ್ ಅಪ್‌ಗಳ ಕೇಂದ್ರವಾಗಿ ಪರಿಗಣಿಸಿ ಮತ್ತು ಕರ್ನಾಟಕದಲ್ಲಿ ಅಗ್ರಿ ಸ್ಟಾರ್ಟ್ ಅಪ್‌ಗಳಿಗೆ ಅನುಕೂಲಕರ ಪರಿಸರ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲು, ಕೃಷಿ ಇಲಾಖೆಯಿಂದ ಬೆಂಗಳೂರಿನಲ್ಲಿ ಅಗ್ರಿ ಸ್ಟಾರ್ಟ್ ಆಪ್‌ಗಳ ಕುರಿತು ಕಾರ್ಯಾಗಾರ ನಡೆಸ ಲಾಗಿತ್ತು. ಸರ್ಕಾರದ ನೀತಿ ಹಾಗೂ ಪರಿವರ್ತನೆಯ ಬದಲಾವಣೆಗೆ ತಕ್ಕಂತೆ ಉದ್ಯಮಗಳು ಬದಲಾಗುತ್ತಿದ್ದು, ಈ ನಿಟ್ಟಿನಲ್ಲಿ ಕೃಷಿಯನ್ನು, ಕೃಷಿ ಉದ್ಯಮವನ್ನು ವೃದ್ಧಿಸಬೇಕಿದೆ. ಕೃಷಿಯನ್ನು ಉದ್ಯಮವನ್ನಾಗಿಸಲು ಕೃಷಿಕರನ್ನು ಕೃಷಿ ಉದ್ಯಮಿಗಳನ್ನಾಗಿಸುವ ಉದ್ದೇಶದಿಂದ ರಾಜ್ಯದಲ್ಲಿ ಕೃಷಿ ನವೋದ್ಯಮ (ಅಗ್ರಿ ಸ್ಟಾರ್ಟಪ್) ಆರಂಭಿಸುವುದಕ್ಕಾಗಿ ಕೃಷಿ ನವೋದ್ಯಮ ನೀತಿಗಳನ್ನು ರೂಪಿಸಿ ಅದಕ್ಕಾಗಿ ಸಮಿತಿಯೊಂದನ್ನು ರಚಿಸಲಾಗಿದ್ದು, ಸಮಿತಿ ವರದಿ ನೀಡಿದೆ. ಅಗ್ರಿ ಸ್ಟಾರ್ಟಪ್ ಸಮಿತಿಯು ನೀಡಿರುವ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆ ಎಂದರು.

## ಕದಳಿ ವೇದಿಕೆಯಿಂದ ಕೊರೊನಾ ವಾರಿಯರ್ಸ್‌ಗೆ ಸನ್ಮಾನ



ದಾವಣಗೆರೆ,ಫೆ.10- ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಮಹಿಳಾ ಘಟಕ ನಗರದ ಕದಳಿ ಮಹಿಳಾ ವೇದಿಕೆ ವತಿಯಿಂದ ತನ್ನ ವಾರ್ಷಿಕೋತ್ಸವದ ಅಂಗವಾಗಿ ಈಚೆಗೆ ನಡೆಸಿದ ಕಾರ್ಯಕ್ರಮದ ಸಂದರ್ಭದಲ್ಲಿ ಕೊರೊನಾ ವಾರಿಯರ್ ಗಳಾದ ಡಾ॥ ಸರಿತಾ, ಡಾ॥ ಉಮಾ, ಡಾ॥ ಶಿಲ್ಪಶ್ರೀ, ಡಾ॥ ಅರುಣಕುಮಾರಿ, ಡಾ॥ ಗೀತಾ, ಡಾ॥ ವಿಂಧ್ಯಾ, ಡಾ॥ ಸುಮ, ಡಾ॥ ಸುಪರ್ಣ ಅವರುಗಳನ್ನು ಸನ್ಮಾನಿಸಿ, ಗೌರವಿಸಲಾಯಿತು.

'ಕದಳಿ ಶ್ರೀ' ಪ್ರಶಸ್ತಿ ಪುರಸ್ಕೃತರಾದ ಶ್ರೀಮತಿ ಜಯಮ್ಮ ನೀಲಗುಂದ ಮತ್ತು ವೇದಿಕೆಯ ಪದಾಧಿಕಾರಿಗಳು ಕಾರ್ಯಕ್ರಮದ ವೇದಿಕೆಯಲ್ಲಿ ಉಪಸ್ಥಿತರಿದ್ದರು.


## ವೈದ್ಯಕೀಯ ವಿದ್ಯಾರ್ಥಿಗಳಿಗೆ ಕ್ಯಾಡರಿಕ್ ಪ್ರಮಾಣ ವಚನ



ದಾವಣಗೆರೆ, ಫೆ.10- ನಗರದ ಜ.ಜ.ಮು ವೈದ್ಯಕೀಯ ಮಹಾವಿದ್ಯಾಲಯದ ಅಂಗ ರಚನಾಶಾಸ್ತ್ರ ವಿಭಾಗದಲ್ಲಿ ಅಂಗ ವಿಚ್ಛೇದನ ವಿಭಾಗ (ಡಿಸೆಕ್ಷನ್ ಸೆಕ್ಷನ್) ನಲ್ಲಿ 2020-2021ನೇ ಸಾಲಿನ ನೂತನ ಪ್ರಥಮ ವರ್ಷದ ವೈದ್ಯಕೀಯ ವಿದ್ಯಾರ್ಥಿಗಳಿಗೆ ಕ್ಯಾಡರಿಕ್ ಪ್ರಮಾಣ ವಚನ ಕಾರ್ಯಕ್ರಮ ನಡೆಯಿತು.

ಕಾಲೇಜಿನ ಪ್ರಾಂಶುಪಾಲ ಡಾ. ಎಸ್.ಬಿ. ಮುರುಗೇಶ್, ವಿಭಾಗದ ಮುಖ್ಯಸ್ಥರಾದ ಡಾ. ನಿರ್ಮಲ ಮತ್ತು ಇತರರು ಕಾರ್ಯಕ್ರಮದ ವೇದಿಕೆಯಲ್ಲಿ ಉಪಸ್ಥಿತರಿದ್ದರು.

## ಕೊಟ್ಟೂರು ಜಾತ್ರೆಗೆ ಅನುಮತಿ



ಕೊಟ್ಟೂರು, ಫೆ. 9 - ಕರ್ನಾಟಕದ ಹೆಸರಾಂತ ರಥೋತ್ಸವ ಗಳಲ್ಲೊಂದಾದ ಕೊಟ್ಟೂರಿನ ಶ್ರೀ ಗುರು ಬಸವೇಶ್ವರ ಸ್ವಾಮಿಯ ಮಹಾರಥೋತ್ಸವ ನಡೆಸಲು ಸರ್ಕಾರದಿಂದ ಅನುಮತಿ ದೊರಕಿದೆ.

ದೇವಸ್ಥಾನ, ಮಠಗಳು ಸೇರಿದಂತೆ ರಾಜ್ಯಾದ್ಯಂತ ಧಾರ್ಮಿಕ ಸ್ಥಳಗಳಲ್ಲಿ ಸಂಪ್ರದಾಯದ ರೀತಿ ಜಾತ್ರಾ ಮಹೋತ್ಸವಗಳನ್ನು ಆಚರಿಸಲು ಸರ್ಕಾರ ಅನುಮತಿ ನೀಡಿರುವುದರಿಂದ ಲಕ್ಷಾಂತರ ಭಕ್ತರ ಆರಾಧ್ಯ ದೈವ ಶ್ರೀ ಕೊಟ್ಟೂರು ಗುರು ಬಸವೇಶ್ವರ ಸ್ವಾಮಿಯ ರಥೋ ತ್ಸವವು ಬರುವ ಮಾರ್ಚ್ 7ರಂದು ನಡೆಯಲಿದೆ.







JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte